
ಪುಟ 22 ಸಂಚಿಕೆ 1-2
ವರಿ 9, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಹೊಸ ಸಹಸ್ರಮಾನದೆಡೆಗೆ



ವಿಮಾನ ಅಪಹರಣ: ಮುಗಿಯದ ಪಿಡುಗು



ರೈತರ ಮೇಲೆರಗಿದ ಕೋಲಾರದ ಪೋಲೀಸರು

ಗುಜರಾತ್‌ನಲ್ಲಿ ಶಿಲಾನ್ಯಾಸಕ್ಕೆ ಅನುಮತಿ

ಬಿಜೆಪಿಯ ಕೋಮುವಾದಿ ಕ್ರೌರ್ಯದ ಮುಂದುವರಿಕೆ

ಬಾಬ್ರಿ ಮಸೀದಿ ನಾಶದ ಒಳ ಸಂಚಿನಲ್ಲಿ ಹಾಗೂ ವಿನಾಶಕಾರಿ ಕೃತ್ಯದಲ್ಲಿ ಭಾಗಿಯಾದ ಕ್ರಿಮಿನಲ್ ಆರೋಪಿಗಳನ್ನು ಕೇಂದ್ರ ಸಚಿವ ಸಂಪುಟದಿಂದ ಕೈ ಬಿಡಬೇಕು ಎಂಬ ಬಗ್ಗೆ ಲೋಕಸಭೆಯಲ್ಲಿ ದೀರ್ಘ ಚರ್ಚೆ ಗದ್ದಲ ನಡೆದಿರುವಾಗಲೇ, ಬಿಜೆಪಿ ಸರ್ಕಾರದ ಸಹಯೋಗಿಗಳು ತಮ್ಮ ಆತಂಕವನ್ನು ವ್ಯಕ್ತಪಡಿಸಿರುವಾಗಲೇ ಈ ಚರ್ಚೆಗೆ ಉತ್ತರವಾಗಿ ಬಿಜೆಪಿಯ ಮುಖವಾಡ ಪ್ರಧಾನಿ ವಾಜಪೇಯಿಯವರು ಲೋಕಸಭೆಗೆ ಆ ಮೂಲಕ ದೇಶಕ್ಕೆ ಬಿಜೆಪಿಗೆ ಬಚ್ಚಿಟ್ಟ ಅಜೆಂಡಾ ಏನೂ ಇಲ್ಲ" ಎಂದು ಸಾರುತ್ತಿರುವಾಗಲೇ, ದೇಶದ ಅನೇಕ ಕಡೆಗಳಲ್ಲಿ ಬಿಜೆಪಿಯ ಅಂಗಸಂಘಟನೆಗಳು, ಸಂಘ ಪರಿವಾರ ಲೋಕಸಭೆಯ ಚರ್ಚೆಯನ್ನು ಹಾಗೂ ಪ್ರಧಾನಿಯವರ ಆಶ್ವಾಸನೆಯನ್ನು ಧಿಕ್ಕರಿಸುವಂತೆ ಕಾರ್ಯತತ್ಪರರಾಗಿದ್ದಾರೆ. ಗುಜರಾತಿನಲ್ಲಿ ಕ್ರಿಶ್ಚಿಯನ್ನರ ಮೇಲೆ ನಡೆದ ಧಾಳಿಗಳ ಸರಣಿಗಳ ನೆನಪು ಇನ್ನೂ ಹಚ್ಚಹಸಿರಾಗಿದೆ. ಮತ್ತೆ ಕ್ರಿಸ್‌ಮಸ್ ಬಂದಿದೆ ಮತ್ತೆ ಸಂಘ ಪರಿವಾರದ ದಾಳಿಯೂ ಆರಂಭವಾಗಿದೆ. ಗುಜರಾತ್‌ನ ಬಿಜೆಪಿ ಸರ್ಕಾರ ಬಹಿರಂಗವಾಗಿ ತನ್ನ ಕೋಮುವಾದಿ ಅಜೆಂಡಾವನ್ನು ಬಿಚ್ಚಿಟ್ಟಿದೆ.

ಗುಜರಾತಿನ ಬಿಜೆಪಿ ಸರ್ಕಾರವು ಆರ್.ಎಸ್.ಎಸ್. ನ ಕೈಗೊಂಬೆಯಗಳ್ಲೊಂದಾದ 'ಹಿಂದೂ ಜಾಗರಣ ಮಂಚ್" ಎಂಬ ಸಂಘಟನೆಯನ್ನು ರಾಮಮಂದಿರ ಕಟ್ಟಲು ಅಡಿಗಲ್ಲನ್ನಿಟ್ಟು ಪೂಜೆ ಸಲ್ಲಿಸಲು (ಶಿಲಾನ್ಯಾಸ) ಅವಕಾಶ ಕೊಟ್ಟಿದೆ. ಗುಜರಾತ್ ರಾಜ್ಯದ ದಕ್ಷಿಣಕ್ಕಿರುವ ಸೂರತ್ ಜಿಲ್ಲೆಯ ಈ ಸ್ಥಳವು ಕ್ರಿಶ್ಚಿಯನ್ನರ ಪೂಜಾಸ್ಥಳವಾದ ಚರ್ಚಿನಿಂದ ಕೇವಲ ೨೦೦ ಮಿ. ದೂರದಲ್ಲಿದೆ. 'ಹಿಂದೂ ಜಾಗರಣ ಮಂಚ್" ಎಂಬ ಇದೇ ಸಂಘಟನೆಯ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ವಿರುದ್ಧ ಘೋರವಾದ ಹಿಂಸಾಚಾರವನ್ನೇ ಹರಿಯಬಿಟ್ಟಿತು. ಈ ಹಿಂಸಾಚಾರವನ್ನು ಕಳೆದ ವರ್ಷದ ಕ್ರಿಸ್‌ಮಸ್ ದಿನದಂದು ದಕ್ಷಿಣ ಗುಜರಾತಿನ ಡಾಂಗ್ ಜಿಲ್ಲೆಯಲ್ಲಿ ನಡೆಸಲಾಗಿತ್ತು.

ಇದಕ್ಕೆ ವ್ಯತಿರಿಕ್ತವಾಗಿ ಕ್ರಿಸ್‌ಮಸ್ ಮತ್ತು ಹೊಸವರ್ಷದ ದಿನಗಳೊಂದಿಗೆ ನಡೆಸುವ ಧಾರ್ಮಿಕ ಕಾರ್ಯಕ್ರಮಗಳನ್ನು ನಿಷೇಧಿಸಿ ಹೊರಡಿಸಿದ್ದ ಮೊದಲಿನ ಸುತ್ತೋಲೆಯನ್ನು ಬಿಜೆಪಿ ರಾಜ್ಯ ಸರ್ಕಾರವು ವಾಪಸ್ಸು ಪಡೆದಿತ್ತು. ಡಾಂಗ್‌ನಲ್ಲಿ ಕ್ರಿಸ್‌ಮಸ್ ದಿನದಂದು ಹಿಂದೂ ಜಾಗರಣ ಮಂಚ್ ನಡೆಸುತ್ತಿದ್ದ ರ್‍ಯಾಲಿಗಳನ್ನು ರದ್ದುಗೊಳಿಸುತ್ತೇವೆ ಎಂಬ ಆರ್‌ಎಸ್‌ಎಸ್ ನ ಆಶ್ವಾಸನೆ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿತ್ತು. ಆದರೂ ಸಹ ವಿಶ್ವಹಿಂದೂ ಪರಿಷತ್ ಒಂದು ಹೇಳಿಕೆ ನೀಡಿ 'ಬಹಿರಂಗ ಕಾರ್ಯಕ್ರಮವನ್ನು ಕೇವಲ ಮುಂದೂಡಲಾಗಿದೆ ಮತ್ತು ಶಿಲಾನ್ಯಾಸದ ನಂತರ ಈ ಕುರಿತು ತೀರ್ಮಾನ ಕೈಗೊಳ್ಳುತ್ತೇವೆ" ಎಂದು ಹೇಳಿತು.

ಸಂಪಾದಕೀಯ

ಇದು ಅತ್ಯಂತ ಸ್ಪಷ್ಟವಾಗಿ, ಸರ್ಕಾರವೇ ಕೋಮುವಾದಿ ಶಕ್ತಿಗಳನ್ನು ಬಹಿರಂಗವಾಗಿ ಪೋಷಣೆ ಮಾಡುತ್ತಿರುವ ಪ್ರಕರಣವಾಗಿದೆ. ಇದನ್ನು ಬಿಜೆಪಿ ಸರ್ಕಾರ ಮಾಡುತ್ತಿದೆ. ಈಗಾಗಲೇ ಅತ್ಯಂತ ಕೆಟ್ಟ ಪರಿಸ್ಥಿತಿಯಿರುವ, ಕ್ರೈಸ್ತ ಅಲ್ಪಸಂಖ್ಯಾತರು ಅಭದ್ರತೆಯಲ್ಲಿ ಬದುಕುತ್ತಿರುವ ಡಾಂಗ್ ಜಿಲ್ಲೆಯಲ್ಲಿ ಈ ಕ್ರಮವು ಕೋಮು ಬಿಗುವಿನ ವಾತಾವರಣಕ್ಕೆ ಮತ್ತಷ್ಟು ಕುಮ್ಮಕ್ಕು ನೀಡುತ್ತದೆ ಎಂದು ಬಿಜೆಪಿ ಸರ್ಕಾರಕ್ಕೆ ಸ್ಪಷ್ಟವಾದ ತಿಳಿದಿದೆ.

ಇದೇ ನಾಚಿಕೆಗೆಟ್ಟ ರೀತಿಯಲ್ಲಿ, ಉತ್ತರ ಪ್ರದೇಶದ ಬಿಜೆಪಿ ನೇತೃತ್ವದ ಸರ್ಕಾರವು ಸಹ ಎಂಟೂವರೆ ವರ್ಷದ ಹಿಂದೆ ಮೀರತ್‌ನಲ್ಲಿ ನಡೆದ ಕೋಮುಗಲಭೆಗೆ ಸಂಬಂಧಿಸಿ ಬಂಧನಕ್ಕೊಳಪಟ್ಟಿದ್ದವರ ವಿರುದ್ಧದ ಮೊಕದ್ದಮೆಗಳನ್ನು ಕೂಡ ವಾಪಸ್ಸು ಪಡೆದಿದೆ. ಕೋಮು ಹಿಂಸಾಚಾರದಲ್ಲಿ ಬಹಿರಂಗವಾಗಿ ತೊಡಗಿ ಸಿಕ್ಕಿಕೊಂಡವರ ವಿರುದ್ಧ ಕ್ರಮ ತೆಗೆದುಕೊಳ್ಳುವುದರ ಬದಲು "ಸಾರ್ವಜನಿಕ ಹಿತಾಸಕ್ತಿ ಮತ್ತು ಕೋಮುಸೌಹಾರ್ದತೆ ದೃಷ್ಟಿಯಿಂದ" ಎಂದು ಹೇಳಿ ರಾಜ್ಯ ಸರ್ಕಾರವು ಈ ಮೊಕದ್ದಮೆಗಳನ್ನು ವಾಪಸ್ಸು ಪಡೆದಿದೆ. ಆಪಾದಿತರಲ್ಲಿ ಬಿಜೆಪಿಯ ಕೌನ್ಸಿಲರ್ ಕೂಡ ಸೇರಿದಂತೆ ಬಹಳಷ್ಟು ಮಂದಿ ಖಾವಿ ಪಡೆಯ ಪ್ರಮುಖ ನಾಯಕರುಗಳು.

ಹರ್‍ಯಾಣದ ಹಿಸ್ಸಿ ಜಿಲ್ಲೆಯಲ್ಲಿ ಡಿಸೆಂಬರ್ ೬ ರಂದು ಖಾವಿ ಪಡೆಗಳು ಮಸೀದಿಯೊಂದನ್ನು ನಾಶಪಡಿಸಿದರು, ಈಗ ಅದೇ ಜಾಗದಲ್ಲಿ ದೇವಸ್ಥಾನವೊಂದನ್ನು ಕಟ್ಟಲಾಗುತ್ತಿದೆ.

ಕೇಂದ್ರದ ಗೃಹ ಸಚಿವರಾದ ಅಡ್ವಾಣಿ, ಮಾನವ ಸಂಪನ್ಮೂಲ ಸಚಿವರಾದ ಮುರಳಿ ಮನೋಹರ ಜೋಷಿ, ಪ್ರವಾಸೋದ್ಯಮ ಸಚಿವೆ ಉಮಾಭಾರತಿ ಒಳಗೊಂಡಿರುವ ಬಾಬ್ರಿ ಮಸೀದಿ ಧ್ವಂಸಕ್ಕೆ ಸಂಬಂಧಿಸಿದ ಬಹಳ ದಿನಗಳಿಂದ ನೆಗೆಗುದಿಯಲ್ಲಿದ್ದು ೨೨ ಡಿಸೆಂಬರ್ ೯೯ರಂದು ವಿಚಾರಣೆ ನಡೆಯಬೇಕಿದ್ದ ಮೊಕದ್ದಮೆಯ ವಿಚಾರಣೆಯನ್ನು ಮತ್ತಷ್ಟು ಮುಂದೂಡಲಾಗಿದೆ.

ಈ ಎಲ್ಲಾ ಘಟನೆಗಳು ಬಿಜೆಪಿಯ ಖೂಳತನವನ್ನು ಸ್ಪಷ್ಟನಾಗಿ ಬಹಿರಂಗಗೊಳಿಸಿವೆ. ಹಾಗಾಗಿ ದೇಶಾದ್ಯಂತ ಮೇಲಿನ ಎಲ್ಲಾ ಘಟನೆಗಳು ನಡೆದ ಕೆಲವೇ ಗಂಟೆಯೊಳಗೆ ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ "ಬಿಜೆಪಿಯ ಕೋಮುವಾದಿ ಅಜೆಂಡಾವನ್ನು ಜಾರಿಗೆ ತರುವುದಿಲ್ಲ" ಎಂದು ಹೇಳಿರುವುದು ಆಶ್ಚರ್ಯಕರವೇನೂ ಅಲ್ಲ.

ಬಿಜೆಪಿಯ ಬಚ್ಚಿಟ್ಟ ಕೋಮುವಾದಿ ಅಜೆಂಡಾವನ್ನು ತಡೆಹಿಡಿಯಲು ಅಥವಾ ಮುಚ್ಚಿಡಲು ಕೇವಲ ನಿರ್ಣಯಗಳನ್ನು ಅಂಗೀಕರಿಸುವುದರಿಂದ ಮಾತ್ರ ಸಾಧ್ಯವಾಗುವುದಿಲ್ಲ ಎಂಬುದನ್ನು ಎನ್.ಡಿ.ಎ. ಕೂಟದಲ್ಲಿರುವ ಬಿಜೆಪಿಯ ಜಾತ್ಯಾತೀತವೆನ್ನುವ ಮಿತ್ರಪಕ್ಷಗಳು ಮನಗಾಣಬೇಕಾಗುತ್ತದೆ. ಈಗಲೇ ಅಥವಾ ತಡವಾಗಿಯಾದರೂ ಈ ಜಾತ್ಯಾತೀತ ಪಕ್ಷಗಳ ಜತೆಯಿರುವ ನಮ್ಮ ದೇಶದ ಜಾತ್ಯಾತೀತ ಮನೋಭಾವದ ಜನಗಳು, ಈ ಪಕ್ಷಗಳಲ್ಲಿ ತಮ್ಮ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಏಕೆಂದರೆ, ಈ ಪಕ್ಷಗಳು ಕೇವಲ ಅಧಿಕಾರದ ಆಸೆಗಾಗಿ, ಕೋಮುವಾದಿ ಶಕ್ತಿಗಳ ಆಟಗಳ ಬಗ್ಗೆ ಕಣ್ಣು ಮುಚ್ಚಿಕೊಂಡಿದ್ದಾರೆ. ಜಾತ್ಯಾತೀತ ಜನಗಳೇ ಈಗಲೂ ಬಹುಸಂಖ್ಯಾತರೇ ಆಗಿದ್ದಾರೆ.

ನಮ್ಮ ಸಮಾಜದ ಜಾತ್ಯಾತೀತ ಹಂದರವನ್ನು, ಐಕ್ಯತೆಯನ್ನು ನಾಶಮಾಡಲು ಹೊಂಚುಹಾಕಿರುವ ಈ ದುಷ್ಟ ಶಕ್ತಿಗಳ ಚಟುವಟಿಕೆಗಳನ್ನು ತಡೆಯಬೇಕಾಗಿರುವುದು ಪ್ರತಿಯೊಬ್ಬ ದೇಶಪ್ರೇಮಿಯ ಕರ್ತವ್ಯವಾಗಿದೆ. ಖಾವಿ ಪಡೆಗಳ ಚಟುವಟಿಕೆಗಳು ಮತ್ತು ಯೋಜನೆಗಳು ಜಾರಿಯಾಗುತ್ತಿರುವುದನ್ನು ತಡೆಯಲು ಅಥವ ನಿಯಂತ್ರಿಸಲು ಸಾಧ್ಯವಾಗದಿರುವುದು ಪ್ರಧಾನ ಮಂತ್ರಿಗಳ ಹೇಳಿಕೆಗಳು ಮತ್ತು ಆಶ್ವಾಸನೆಗಳಿಗೆ

ಕಾಳಗದ ಕರೆ-ಸಾರ್ವಜನಿಕ ವಲಯ ಕಾರ್ಮಿಕರಿಂದ

ಕಾಳಗದ ಕರೆ ಮೊಳಗಿದೆ. 'ಏಳಿ ಮೊಳಗಿ ಏಳಿ' ಎಂದು ದೇಶದೆಲ್ಲರನ್ನೂ ಕರೆಯಲಾರಂಭಿಸಿದೆ. ಮುಂದಿನ ದಿನಗಳಲ್ಲಿ ದೇಶದಲ್ಲಿ ಹೊಸ ಆರ್ಥಿಕ ನೀತಿಗಳ ವಿರುದ್ಧ ಹೋರಾಟಕ್ಕೊಂದು ಹೊಸ ಸ್ವರೂಪ ನೀಡುವ ಪ್ರಯತ್ನ ಆರಂಭವಾಗಿದೆ.

1991 ರಿಂದ ದೇಶದಲ್ಲಿ ಜನಸಾಮಾನ್ಯರ ಮೇಲೆ ಹೊಸ ಆರ್ಥಿಕ ಧಾಳಿ ಆರಂಭವಾದಂದಿನಿಂದ ದೇಶದ ಜನತೆ ಹಲವು ರೂಪದಲ್ಲಿ ತಮ್ಮ ಪ್ರತಿಭಟನೆ ಅಸಮಧಾನ, ಅತೃಪ್ತಿಯನ್ನು ವ್ಯಕ್ತಪಡಿಸಿದ್ದರು. ಈ ಎಲ್ಲಾ ಹೋರಾಟಗಳೂ ಹೊಸ ಆರ್ಥಿಕ ನೀತಿಯ ವಿರುದ್ಧ ಪ್ರತಿಧಾಳಿಗಳಾಗಿರಲಿಲ್ಲ. ಬದಲಾಗಿ ಆ ನೀತಿಗಳ ಪರಿಣಾಮದಿಂದ ದುಡಿಯುವ ಜನತೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಪ್ರಯತ್ನಗಳಾಗಿದ್ದುವು. ಹಾಗೂ ಆರ್ಥಿಕ ಧಾಳಿಯನ್ನು ಹಿಮ್ಮೆಟ್ಟಿಸುವಂತವಾಗಿರಲಿಲ್ಲ. ಅದರ ಪರಿಣಾಮವನ್ನೂ ವೇಗವನ್ನೂ ಕುಗ್ಗಿಸುವ ಪ್ರದರ್ಶನಗಳಷ್ಟೇ ಫಲಕಾರಿಯಾಗಿದ್ದವು.

ಆದರೆ ಎರಡನೇ ಸುತ್ತಿನ - ಎರಡನೇ ತಲೆಮಾರಿನ ಎಂದೂ ಕರೆಯಲಾಗುತ್ತಿರುವ 'ಆರ್ಥಿಕ ಸುಧಾರಣೆಗಳು' ಬಿಜೆಪಿಯ ಮೂರನೇ ಸರ್ಕಾರದಿಂದ ರಭಸದಿಂದ ಎರಗುತ್ತಿರುವಾಗ ದೇಶದ ಜನತೆ ಈ ನೀತಿಗಳನ್ನು ಹಿಮ್ಮೆಟ್ಟಿಸುವ ಸಮರಾಂಗಣಕ್ಕೆ ಇಳಿಯಬೇಕಾಗಿದೆ. ಅಂತಹ ಸೂಚನೆಗಳು ಈಗಾಗಲೇ ಕಾಣಲಾರಂಭಿಸಿವೆ. ದೇಶದ ಸ್ವಾತಂತ್ರ್ಯವನ್ನು ಕಾಪಾಡಲು ದೊಡ್ಡ ಕಾಣಿಕೆಯನ್ನು ನೀಡಿದ ಇತ್ತೀಚಿನ ಕಾರ್ಗಿಲ್ ಯುದ್ಧದಲ್ಲಿಯೂ, ರಕ್ಷಣೆಗೆ ದೊಡ್ಡ ಕಾಣಿಕೆಯನ್ನು ನೀಡಿರುವ ಸಾರ್ವಜನಿಕ ಉದ್ಯಮಗಳು ಇಂದು ಹೆಚ್ಚಿನ ಧಾಳಿಗೆ ಒಳಗಾಗಿವೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ವಲಯದ ಕಾರ್ಮಿಕರು ತಮ್ಮ ಬದುಕಿನ, ಉದ್ಯೋಗದ ಉಳಿವಿಗೆ ಸಾರ್ವಜನಿಕ ವಲಯದ ಉಳಿವಿಗೆ ನಿರ್ಣಾಯಕ ಹೋರಾಟಕ್ಕೆ ಧುಮುಕುವ ಚರಿತ್ರಾರ್ಹ ತೀರ್ಮಾನ ಮಾಡಿದ್ದಾರೆ.

ದಾಳಿ ದಬ್ಬಾಳಿಕೆಯಿಂದ ತತ್ತರಿಸಿ ಹೋಗುತ್ತಿರುವ ಸಾರ್ವಜನಿಕ ಉದ್ದಿಮೆಗಳ ನೌಕರರು ಒಂದಾಗಿ ಐಕ್ಯಹೋರಾಟವನ್ನು ನಡೆಸಲು ಮುಂದುವರಿದಿದ್ದಾರೆ. ಗ್ಯಾಟ್ ಒಪ್ಪಂದದ ಹಿನ್ನೆಲೆ, ಐ.ಎಂ.ಎಫ್. ವಿಶ್ವ ಬ್ಯಾಂಕ್ ನಿರ್ದೇಶಿತ ಶರತ್ತುಗಳಿಗಾಗಿ ಒಂದೊಂದೇ ಉದ್ದಿಮೆಗಳು ನಷ್ಟವನ್ನು ಹೊಂದಿ ಮುಚ್ಚುತ್ತಿದ್ದರೆ, ಲಾಭದಾಯಕವಾದ ಉದ್ದಿಮೆಗಳನ್ನು 'ನವರತ್ನ'ಗಳೆಂದು ಬಣ್ಣಿಸಿ, ಕೋಟ್ಯಾಧಿಪತಿಗಳಿಗೆ ಧಾರೆ ಎರೆದುಕೊಡುವ ಹುನ್ನಾರ ಕೇಂದ್ರ ಸರಕಾರದ ವತಿಯಿಂದ ಜರುಗುತ್ತಿದೆ. ಇದನ್ನೆಲ್ಲವನ್ನು ಕೆಲವೊಮ್ಮೆ ಸಿಟ್ಟಿನಿಂದ, ಇನ್ನು ಕೆಲವೊಮ್ಮೆ ಹತಾಶರಾಗಿ ನುಂಗಿಕೊಳ್ಳುತ್ತಾ ಬಂದ 20 ಲಕ್ಷಕ್ಕೂ ಹೆಚ್ಚಿನ ಸಾರ್ವಜನಿಕ ಉದ್ದಿಮೆಗಳ ನೌಕರರು ಹಲವು ಬಣ್ಣದ ಬಾವುಟವನ್ನು ಹೊತ್ತು ಐಕ್ಯ ಹೋರಾಟಕ್ಕೆ ಸಜ್ಜು ನಡೆಸಿದ್ದಾರೆ.

ಸಿಐಟಿಯು ಅಧ್ಯಕ್ಷ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅವರ ಮಾತಿನಲ್ಲಿ ಹೇಳುವುದಾದರೆ "1956 ರಲ್ಲಿ ದೇಶದ ಕೈಗಾರಿಕೋದ್ಯಮಿಗಳು ದೊಡ್ಡ ಮೂಲಭೂತ ಕೈಗಾರಿಕೆಗಳನ್ನು ಸ್ಥಾಪಿಸಲು ಹಿಂಜರಿಯುತ್ತಿದ್ದ ಸಂದರ್ಭದಲ್ಲಿ, ಶ್ರೀಮಂತ ರಾಷ್ಟ್ರಗಳು ಬಂಡವಾಳ ಹೂಡಲು, ನೆರವು ನೀಡಲು ನಿರಾಕರಿಸಿದ ಹಿನ್ನೆಲೆಯಲ್ಲಿ, ಸಾರ್ವಜನಿಕ ಉದ್ದಿಮೆಗಳು ಮತ್ತು ಸಮಾಜವಾದಿ ರಾಷ್ಟ್ರಗಳ ನೆರವು ದೇಶದ ಆರ್ಥಿಕ ಸ್ವಾವಲಂಬನೆಯನ್ನು ಎತ್ತಿ ಹಿಡಿಯಿತು ಎನ್ನುವುದನ್ನು ಮರೆಯಬಾರದು" (ಕಾಂ. ರಾವ್ ಅವರೊಂದಿಗೆ ಸಂದರ್ಶನ ನೋಡಿ)

ಬ್ಯಾಂಕು/ಎಲ್ಐಸಿಗಳ ಹಾದಿಯಲ್ಲಿ: ದೇಶದ ವಯಸ್ಕರಲ್ಲಿ ಪ್ರತಿ ನೂರು ಜನಕ್ಕೆ 3 ಜನರಂತೆ 1.5 ಕೋಟಿ ಜನರು ಸಹಿ ಮಾಡಿದ ಮನವಿ ಪತ್ರವನ್ನು ಧಿಕ್ಕರಿಸಿ, ಜನರಿಂದ ತಿರಸ್ಕರಿಸಲ್ಪಡುತ್ತಾ ಬಂದಿರುವ ಕಾಂಗ್ರೆಸ್ಸಿನ ಬೆಂಬಲದೊಂದಿಗೆ, ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರ ಐಆರ್‌ಡಿಎ ಮಸೂದೆಯನ್ನು ಜಾರಿಗೆ ತಂದಿತು. ಆ ಪ್ರಕಾರ ಅತ್ಯುನ್ನತ ಪ್ರಗತಿ ಸಾಧಿಸಿದ ವಿಮಾ ಸಂಸ್ಥೆಗಳನ್ನು ವಿದೇಶಿ ಹಣಕಾಸು ಬಂಡವಾಳಕ್ಕೆ, ದೇಶೀಯ ದೊರೆಗಳಿಗೆ ತರೆದಿಟ್ಟಿತು. (ವಿವರವಾದ ವರದಿಗಾಗಿ ಐಕ್ಯರಂಗ 12/12) ಅಂತೆಯೇ ಸಾಲವನ್ನು ವಾಪಾಸು ಮಾಡದೆ ರಾಷ್ಟ್ರೀಕೃತ ಬ್ಯಾಂಕುಗಳು ನಷ್ಟ ಹೊಂದಲು ತಾವೇ ಕಾರಣರಾಗಿ ಇದೀಗ 3 ಬ್ಯಾಂಕುಗಳನ್ನು ಮುಚ್ಚಬೇಕೆಂದು 4 ಲಾಭದಾಯಕ ಬ್ಯಾಂಕುಗಳನ್ನು ಖಾಸಗೀಯವರಿಗೆ ನೀಡಬೇಕೆಂದೂ ವಾದಿಸುವ ಕೈಗಾರಿಕೋದ್ಯಮಿಗಳಿಗೆ ಬಿಜೆಪಿ ಸರ್ಕಾರ ಬೆಂಬಲವಾಗಿ ನಿಂತಿದೆ(ವರದಿ-ಐಕ್ಯರಂಗ 26/12 ಮತ್ತು 5/12) ವಿಶ್ವಬ್ಯಾಂಕ್, ಐಎಂಎಫ್ ಶರತ್ತುಗಳ ಭಾಗವಾಗಿಯೇ ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಗಳ ಶೇರು ಬಂಡವಾಳವನ್ನು ಅಗ್ಗದ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ. ಉದಾಹರಣೆಗೆ, ಗ್ಯಾಸ್ ಆಥಾರಿಟಿ ಆಫ್ ಇಂಡಿಯಾ ಅತ್ಯಂತ ಲಾಭ ಮಾಡುವ ಸಾರ್ವಜನಿಕ ಉದ್ದಿಮೆಗಳಲ್ಲಿ ಒಂದು. ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಹೇರಳ ಲಾಭ ಗಳಿಸಿದೆ. ಸಂಸ್ಥೆಯ ಆಸ್ತಿಯೂ ಹೆಚ್ಚಿದೆ. ಇತ್ತೀಚಿಗೆ ಆ ಸಂಸ್ಥೆಗೆ ಸೇರಿದ 17 ಕೋಟಿ ಶೇರುಗಳನ್ನು ರೂ. 70 ರಂತೆ 1120 ಕೋಟಿ ರೂ.ಗೆ ಮಾರಾಟ ಮಾಡಲಾಯ್ತು. ಎಲ್ಲಾ ವಿರೋಧ ಪಕ್ಷಗಳು ಇದನ್ನು ಒಕ್ಕೊರಲಿನಿಂದ ವಿರೋಧಿಸಿದವು.

ಸಂಯುಕ್ತ ರಂಗ ಸರಕಾರವಿದ್ದಾಗ ಅಂದಿನ ಹಣಕಾಸು ಸಚಿವ ಚಿದಂಬರಂ ಇದೇ ಶೇರುಗಳನ್ನು 100 ರೂ. ಗೆ ಮಾರಾಟಮಾಡಲು ಒಪ್ಪಿರಲಿಲ್ಲ. ರೂ. 150 ಸಿಗಬೇಕು ಎಂದು ಹಠ ಹಿಡಿದರು. ಎಡಪಕ್ಷಗಳು ಅದರಲ್ಲೂ ಸಿಪಿಐ(ಎಂ) ಶೇರುಗಳ ಮಾರಾಟವನ್ನೇ ವಿರೋಧಿಸಿತು. ಶೇರುಗಳನ್ನು ರೂ. 150/- ಕ್ಕೆ ಮಾರಾಟ ಮಾಡಿದ್ದರೆ ಸಾರ್ವಜನಿಕ ಉದ್ದಿಮೆಯಾದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾಕ್ಕೆ 2350 ಕೋಟಿ ರೂ. ಸಿಗುತ್ತಿತ್ತು. ಬಿಜೆಪಿ ಸರಕಾರ ತೆಗೆದುಕೊಂಡ ನಿರ್ಧಾರದಿಂದ ಆದ ನಷ್ಟ 1360 ಕೋಟಿ ರೂ.! ಹಾಗಾದರೆ ಎಷ್ಟು ಹಣ ಲಂಚದ ರೂಪದಲ್ಲಿ ಭ್ರಷ್ಟ ರಾಜಕಾರಣಿಗಳಿಗೆ, ಉನ್ನತ

ಎಂಬುದನ್ನು ಊಹಿಸಲು ಸಾಧ್ಯ. ಇದರಲ್ಲಿ ಶೇ 20 ರಷ್ಟು ಅಂದರೆ 3 ಕೋಟಿ ಶೇರುಗಳನ್ನು ವಿದೇಶಿ ಕಂಪನಿಗಳಾದ ಬ್ರಿಟಿಶ್ ಗ್ಯಾಸ್, ಎನ್ರಾನ್, ಟೆಂಪಲ್‌ಟೆನ್, ಫಿಡಲಿಟಿ ಮೊದಲಾದ ಸಂಸ್ಥೆಗಳು ಖರೀದಿಸಿವೆ.

ಡಿಸೆಂಬರ್ 9 ರ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ಸಂಪರ್ಕ ಸಚಿವಾಲಯದ ಮಾಜಿ ಕಾರ್ಯದರ್ಶಿ ಎಸ್.ಎಂ.ಅಗರವಾಲ ಅವರ ಲೇಖನದ ಪ್ರಕಾರ ಕೇಂದ್ರ ಸರಕಾರದ ಅಧೀನದಲ್ಲಿರುವ ಟೆಲಿಕಾಂ ಸಂಸ್ಥೆ 80,000 ಕೋಟಿ ರೂ.ಗಳ ಆಸ್ತಿಯನ್ನು ಹೊಂದಿದೆ. ಇಷ್ಟೊಂದು ಆಸ್ತಿ ಹೊಂದಲು ಸರಕಾರ ಯಾವುದೇ ಬಂಡವಾಳ ತೊಡಗಿಸಿರಲಿಲ್ಲ. ವರ್ಷಂಪ್ರತಿ ಬರುವ ಆದಾಯದ ಉಳಿತಾಯದಿಂದಲೇ ಇಷ್ಟೊಂದು ಅಗಾಧವಾದ ಆಸ್ತಿಯನ್ನು ಮಾಡಲು ಸಾಧ್ಯವಾಗಿದೆ. ಕಳೆದ ವರ್ಷ ಒಂದರಲ್ಲೆ 10,000 ಕೋಟಿ ರೂ. ಲಾಭ ಗಳಿಸಿತು. ಇದರಿಂದ 38 ಲಕ್ಷ ಹೊಸ ಲೈನುಗಳ, ಅದರಲ್ಲೂ ಶೇ 40 ಭಾಗ ಗ್ರಾಮಾಂತರ ಪ್ರದೇಶಗಳಲ್ಲಿ ನೀಡಲು ಸಾಧ್ಯವಾಗಿತ್ತು. ಆದರೆ ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಉಸ್ತುವಾರಿಯಾಗಿದ್ದ ಬಿಜೆಪಿ ಸರಕಾರ ನಗರ ಪ್ರದೇಶಗಳಲ್ಲಿ ಮಾತ್ರ ಕಾರ್ಯನಿರ್ವಹಿಸುವ ಖಾಸಗಿ ಟೆಲಿಕಾಂ ಸಂಸ್ಥಗಳಿಗೆ ಅಗಾಧವಾದ ರಿಯಾಯಿತಿಯನ್ನು ಘೋಷಿಸಿತ್ತು. ದೊಡ್ಡ ಟೆಲಿಕಾಂ ಹಗರಣವೇ ನಡೆಯಿತು.

ಹೀಗೆ ದೇಶದ ಆರ್ಥಿಕ ಶಕ್ತಿಗೆ ಪ್ರಮುಖ ಕಾಣಿಕೆ ನೀಡಿದ ಸಾರ್ವಜನಿಕ ವಲಯದ ಲಾಭದಾಯಕವಾದ ಎಲ್ಲಾ ಉದ್ದಿಮೆಗಳನ್ನು ಯಾವುದೇ ರೀತಿಯಲ್ಲಾದರೂ, ಯಾವುದೇ ಬೆಲೆಗಾದರೂ ಮಾರಿ ತಿನ್ನಲು ವಾಜಪೇಯಿ ಸರಕಾರ ಕಟಿಬದ್ಧವಾದಂತಿದೆ. ಇದಕ್ಕೆ ಬಲವಾದ ಪ್ರತಿಭಟನೆ ವ್ಯಕ್ತಪಡಿಸಲು ಹಾಗೂ ದೇಶದ್ರೋಹಿ ಕೆಲಸಕ್ಕೆ ತಡೆಯೊಡ್ಡ ಇಡೀ ಸಾರ್ವಜನಿಕ ವಲಯ ಕಾರ್ಮಿಕರು ಈಗ ನಿರ್ಧರಿಸಿದ್ದ ದೇಶದ ಸಾರ್ವಜನಿಕ ವಲಯ ಸಿಐಟಿಯು, ಎಐಟಿಯುಸಿ ಹೆಚ್.ಎಂ.ಎಸ್., ಬೆಂಗಳೂರ ಜೆಎಎಫ್, ಹೈದರಾಬಾ[illegible] ಸಾರ್ವಜನಿಕ ವಲಯ ಸಂಘಟ[illegible] ಸಮನ್ವಯ ಸಮಿತಿ ಮೊದಲಾದ[illegible] ಸಂಘಟನೆಗಳೂ ಸೇರಿಕೊಂ[illegible] ರಚಿಸಿಕೊಂಡಿರುವ ಸಾರ್ವಜ[illegible] ವಲಯದ ಕಾರ್ಮಿಕ ಸಂಘ[illegible] ಸಮಿತಿ(CPSTU) ಯ ಡಿಸೆಂಬರ್ 1[illegible] ರಂದು ನಡೆದ ವಿಸ್ತೃತ ಸಭೆಯಲ್ಲಿ ಸರ್ವಾನುಮತದ ನಿರ್ಧಾರಕ್ಕೆ ಬಂದಿ[illegible] ಲಾಭದಾಯಕ ಘಟಕಗಳನ್ನು ಮಾರು[illegible] ಹುನ್ನಾರ ಒಂದೆಡೆಯಾದರೆ ರೋಗಗ್ರ[illegible] ಘಟಕಗಳ ಸಾವಿರಾರು ಕಾರ್ಮಿಕ[illegible] ತಿಂಗಳಾನುಗಟ್ಟಲೆ ಸಂಬಳವನ್ನ[illegible] ಕೊಡದಿರುವ ನಿಲುವು ಇನ್ನೊಂದು ಕ[illegible] 1992 ರ ನಂತರ ವೇತನ ಪರಿಷ್ಕರ[illegible] ನಡೆಯದಂತೆ ಹಾಕಿರುವ ನಿರ್ಬಂ[illegible] ಮತ್ತೊಂದು ಕಡೆ. ಸಾರ್ವಜನಿ[illegible] ಉದ್ದಿಮೆಗಳ ಇಲಾಖೆ(DVE) ಮೂರ[illegible] ವರ್ಷಗಳ ಹಿಂದೆ ಆಗಬೇಕಾಗಿದ್ದ ವೇತ[illegible] ಪರಿಷ್ಕರಣೆ ಆಗದಂತೆ ಸತತವಾ[illegible] ಅಡ್ಡಗಾಲು ಹಾಕುತ್ತಿರುವುದನ್ನು ಈ ಸ[illegible] ಬಲವಾಗಿ ಖಂಡಿಸಿತು. ಜತೆಗೆ ಕಾರ್ಮಿ[illegible] ಸಂಘಟನೆಯ ಹಕ್ಕುಗಳನ್ನು ಕಡಿತ ಮಾಡ[illegible]

ಬಂದಿದೆ, ಬರುತಲಿದೆ...........

ಹೊಸ ಸಹಸ್ರಮಾನ

ಕುದಿಗೊಂಡ ಜನರ ಎದೆಗಳಲಿ

ಜಿ.ಎನ್. ನಾಗರಾಜ್

ಎರಡನೇ ಯ ಸಹಸ್ರಮಾನದಿಂದ ಮೂರನೆಯ ಸಹಸ್ರಮಾನಕ್ಕೆ ದಾಪುಗಾಲಿಡುವ ಸಂಧಿವರ್ಷ 2000 ಕ್ಕೆ ಕಾಲಿಟ್ಟಿದ್ದೇವೆ. ಇಡೀ 2000 ದ ವರ್ಷ 2ನೇ ಸಹಸ್ರಮಾನದ ಮಾನವ ಸಮುದಾಯದ ಸಧನೆಗಳನ್ನು ಸವಿದು ಅರಗಿಸಿಕೊಂಡು 2ನೆಯ ಸಹಸ್ರಮಾನದ ಹೊಸಮಾನವ ಇತಿಹಾಸದ ಸೃಷ್ಟಿಗೆ ಮುನ್ನಡೆಯ ಬೇಕಾಗಿದೆ. ಎರಡನೆಯ ಸಹಸ್ರಮಾನದ ಅಂತ್ಯದ ಈ ಸಂಧಿರ್ವ ಮಾನವ ಇತಿಹಾಸಕ್ಕೆ ದೊಡ್ಡ ಕಾಣಿಕೆಯಾದ 20ನೆಯ ಶತಮಾನದ ಅಂತಿಮವರ್ಷ, 21ನೆಯ ಶತಮಾನಕ್ಕೆ ಮುನ್ನಡೆಯುವ ವರ್ಷವೂ ಹೌದು.

ಹುಚ್ಚೆಬ್ಬಿಸುವ ವರದಿಗಳು - ಜನರ ಪ್ರತಿಕ್ರಿಯೆ

ಒಂದು ಸಹಸ್ರಮಾನದ ಅಂತ್ಯ ಮತ್ತೊಂದು ಸಹಸ್ರಮಾನದ ಆರಂಭದ ಬಗ್ಗೆ ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಜನರನ್ನು ಹುಚ್ಚೆಬ್ಬಿಸುವ ಲೇಖನ, ವರದಿಗಳು ಬರುತ್ತಿವೆ. ಒಂದು ದೊಡ್ಡ ಉತ್ಸವವಾಗಿ ಇದನ್ನು ಆಚರಿಸಲು ಪ್ರೇರೇಪಿಸುವ ಇನ್ನಿಲ್ಲದ ಯತ್ನ ಸಾಗಿದೆ. ಒಂದು ಕಡೆ ಕುಡಿದು, ಕುಣಿಯಲು ಅವಕಾಶಗಳಿಗಾಗಿ ಕಾದಿರುವ ಶ್ರೀಮಂತ ವರ್ಗ ತಮ್ಮ ಸಹಸ್ರಮಾನದ ಕೊನೆಗಾಗಿ ತವಕಿಸುತ್ತಿದ್ದಾರೆ. ಆದರೆ ದುಡಿದುಡಿದು ದಣಿಯುತ್ತಿರುವ ಸಾಮಾನ್ಯ ಜನತೆ ಹೊಸ ಸಹಸ್ರಮಾನದ ಆಗಮನವನ್ನು ಹೇಗೆ ಸ್ವೀಕರಿಸಿದ್ದಾರೆ? ರಾಜ್ಯದ ಮೂಲೆಮೂಲೆಗಳಲ್ಲಿ ಬೆಲೆ ಕುಸಿತದ ವಿರುದ್ಧ ಬೀದಿಗಿಳಿದಿರುವ ರೈತರು, ಉದ್ದಿಮೆ ನಾಶದ ಆತಂಕಕ್ಕೊಳಗಾಗಿರುವ ಕಾರ್ಮಿಕರು, ಉದ್ಯೋಗವಿಲ್ಲದ ಯುವಕ-ಯುವತಿಯರು ಹೊಸಸಹಸ್ರಮಾ ತಮಗೆ ಹೊಸತೇನನ್ನು ತರಬಹುದೆನ್ನುವ ಸಂಶಯದಲ್ಲಿದ್ದಾರೆ.

ಎರಡನೆಯ ಸಹಸ್ರಮಾನ ನಮ್ಮ ಪ್ರಜ್ಞೆಯಲ್ಲಿ ಅರಳಲಿ ಸಹಸ್ರಮಾನ, ಶತಮಾನಗಳ ಆಗಮನದ ಬಗೆಗಿನ ಈ ಎರಡು ಮಾನಸಿಕ ಸ್ಥಿತಿಗಳ ನಡುವೆ ಮಾನವ ಸಮುದಾಯದ ದೊಡ್ಡ ಹೆಜ್ಜೆಗಳಿಗೆ ಕಾರಣವಾದ ಹಿಂದಿನ ಹಲವು ಸಹಸ್ರಮಾನಗಳ ಸಾಧನೆಯನ್ನು ಒಂದೇ ಸಹಸ್ರಮಾನದಲ್ಲಿ ಮೀರಿಸಿದ ಎರಡನೇ ಸಹಸ್ರಮಾನವನ್ನು ನಮ್ಮ ಪ್ರಜ್ಞೆಯ ಅಳವಿನಲ್ಲಿ ಅರಳಿಸಿಕೊಳ್ಳಬೇಕಾಗಿದೆ. ಈ ಮಹಾ ಬೆಳಕಿನಲ್ಲಿ ಹೊಸ ನಿರೀಕ್ಷೆಗಳೊಡನೆ, ಮಾನವ ಸಮುದಾಯದ ಸಾಮರ್ಥ್ಯದ ಬಗ್ಗೆ ಆಳವಾದ ನಂಬಿಕೆಯೊಡನೆ, ಮೂರನೆಯ ಸಹಸ್ರಮಾನದತ್ತ ದೃಢವಾದ ಹೆಜ್ಜೆಹಾಕಬೇಕಾಗಿದೆ.

ಎರಡನೆಯ ಸಹಸ್ರಮಾನದಲ್ಲಿ ಜಗತ್ತು ಕಂಡ ಪ್ರಮುಖ ಮೈಲಿ ಗಲ್ಲುಗಳ ಜೊತೆಜೊತೆಗೆ ಭಾರತವೂ ಕೂಡ ಸಾಗಿದೆ. ಈ ಎಲ್ಲಾ ಮಹಾನ್ ಬೆಳವಣಿಗೆಗಳಲ್ಲಿ ಕರ್ನಾಟಕವೂ ಸೇರಿಕೊಂಡಿದೆ, ಪ್ರಭಾವಿತವಾಗಿದೆ. ಆದ್ದರಿಂದ ಕರ್ನಾಟಕದ ಜನತೆಯ ಸಾಧನೆಯೇ ನಮ್ಮ ಪ್ರಮುಖ ಲಕ್ಷ್ಯವಾದರೂ, ಜಾಗತಿಕ ಹಾಗೂ ಭಾರತೀಯ ಹಿನ್ನೆಲೆಯ ಸಾಧನೆಯನ್ನು ನೋಡುವುದು ಹೆಚ್ಚು ಅರ್ಥಪೂರ್ಣವಾಗಿದೆ.

2ನೇಯ ಸಹಸ್ರಮಾನದ ಆರಂಭ -ನಾಗರೀಕರಣ

ಭಾರತದಲ್ಲಿ ಎರಡನೇ ಸಹಸ್ರಮಾನ ಭಾರತದ ಮೂರನೇ ನಾಗರೀಕರಣ ಎಂದು ಕರೆಯಲ್ಪಟ್ಟ ದೇಶವ್ಯಾಪಿ ಬೆಳವಣಿಗೆಯ ನಡುವಿನಲ್ಲಿತ್ತು. ಹೊಸನಗರಗಳು ಸ್ಥಾಪನೆಯಾಗುತ್ತಿದ್ದವು.

ಕೃಷಿಯ ವಿಸ್ತರಣೆ, ನೀರಾವರಿಯ ಬೆಳವಣಿಗೆ, ಆಹಾರ ಹಾಗೂ ಇತರ ಅಗತ್ಯಗಳ ಪೂರೈಕೆ ಹೆಚ್ಚಳವಾಗಲು ಸಾಧ್ಯವಾಗಿತ್ತು. ನಗರಗಳಲ್ಲಿ ಕರಕುಶಲ ವಸ್ತುಗಳ ಉತ್ಪಾದನೆ ಮುಖ್ಯವಾಗಿ ವಸ್ತ್ರದ ಉತ್ಪಾದನೆ ಹೆಚ್ಚಳವಾಗುವ ಕಡೆಗೆ ತುಡಿತ ಉಂಟಾಗಿತ್ತು. ಈ ನಗರಗಳ ಕಾರಣವಾಗಿ ಹಿಂದಿನ ಶತಮಾನಗಳಿಗಿಂತ ಹೆಚ್ಚು ವಸ್ತ್ರದ ಬಳಕೆಯ ಬಗ್ಗೆ ಸಾಮಾಜಿಕ ಒತ್ತಡವೂ ಆರಂಭವಾಗಿದ್ದವು.

ಇದರ ಪರಿಣಾಮವಾಗಿ ಉತ್ಪಾದನೆಗಳ ವಾಣಿಜ್ಯ - ಗ್ರಾಮ ಮತ್ತು ನಗರಗಳ ನಡುವಣ ವಾಣಿಜ್ಯ ಹೆಚ್ಚಾಗುತ್ತಿತ್ತು. ಅದೇ ರೀತಿಯಲ್ಲಿ ಪ್ರದೇಶ ಪ್ರದೇಶಗಳ ನಡುವಣ ವಾಣಿಜ್ಯವೂ ಹೆಚ್ಚಾಗತೊಡಗಿತ್ತು. ವಾಣಿಜ್ಯ ಮಾರ್ಗಗಳ ಬೆಳವಣಿಗೆ, ಅವುಗಳಲ್ಲಿ ಹೇರು ಹೊತ್ತ ಎತ್ತುಗಳ, ಇತರ ಪ್ರಾಣಿಗಳ ಸಾಲು ಸಾಲು ಸಾಗುವುದೂ ಆರಂಬವಾಗಿತ್ತು. ಈ ವಾಣಿಜ್ಯದ ಮಾರ್ಗಗಳಲ್ಲಿ ಹೊಸ ಗ್ರಾಮಗಳು ಕೆಲವು ಹೊಸ ನಗರಗಳು ಸ್ಥಾಪನೆಯಾಗಲು ಕಾರಣವಾಯಿತು.

ಹೇರು ಹೊತ್ತ ಪ್ರಾಣಿಗಳ 'ಕಾರವಾನ್'ಗಳ ಸಂಚಾರದೊಂದಿಗೆ ವಾಣಿಜ್ಯಕ್ಕೆ ಸಂಬಂಧಿಸಿದ ಅನೇಕ ದುಡಿಯುವ ಜನ, ವಾಣಿಜ್ಯಕ್ಕೆ ಸಂಬಂಧಿಸಿದ ಅನೇಕ ಜನಸಾಮಾನ್ಯರು ಈ ಕಾರವಾನ್‌ಗಳ ಜೊತೆ ಸಂಚರಿಸುತ್ತಿದ್ದರು.

ವಾಣಿಜ್ಯ ಸಂಚಾರ - ಪ್ರಗತಿಪರ ವಿಚಾರ

ಈ ಸಂಚಾರದೊಂದಿಗೆ ಭಾರತದ [illegible] ಭಾಗದ ಜನಜೀವನದ ಅನುಭವದ, ಜ್ಞಾನದ ಸಮ್ಮಿಳನ ಆರಂಭವಾಗಿತ್ತು. ಇದರ ಫಲವಾಗಿ ಮತ್ತೊಮ್ಮೆ ಪ್ರಗತಿಪರ ತಾತ್ವಿಕ ಬೆಳವಣಿಗೆಗಳು ಕಂಡು ಬಂದವು. ಗಣಿತಶಾಸ್ತ್ರದಲ್ಲಿ ಖಗೋಳ ಶಾಸ್ತ್ರ-ಅಂತರಿಕ್ಷ ಕಾಯಗಳ ತಿಳುವಳಿಕೆ-ದಲ್ಲಿ ಉತ್ತಮ ಸಂಶೋಧನೆಗಳಾದವು. ಭಾಸ್ಕರಚಾರರ್ಯ, ಲೀಲಾವತಿ, ಸಿದ್ಧಾಂತಶಿರೋಮಣಿ ಕೃತಿ ಗಮನಾರ್ಹ. **ಭೌತಿಕವಾದ ತತ್ವಶಾಸ್ತ್ರಗಳ ಮುಖ್ಯವಾಗಿ 'ನ್ಯಾಯ-ವೈಶೇಷಿಕ' ದರ್ಶನದ ಬಗ್ಗೆ ಹೆಚ್ಚು ಗ್ರಂಥಗಳು ರಚನೆಯಾದವು.**

ಶೈವ ತತ್ವ ಶಾಸ್ತ್ರಗಳ ಬೆಳವಣಿಗೆ ಪರಸ್ಪರ ಸಂಪರ್ಕ, ತಾಂತ್ರಿಕ ಮಾರ್ಗಗಳ ಬೆಳವಣಿಗೆ, ಇವು ಈ ಮೂರನೇ ನಗರೀಕರಣದ ಪರಿಣಾಮರೂಪವಾದ ಬೆಳವಣಿಗೆಗಳು. ಇದು ಇಡೀ ಭಾರತದ ಮೇಲೆ ವ್ಯಾಪಕ ಪರಿಣಾಮ ಬೀರಿದೆ. ಕರ್ನಾಟಕದಲ್ಲಿಯೂ ಅದರ ಪ್ರಭಾವ ಬೀರಿದೆ.

ಕರ್ನಾಟಕದಲ್ಲಿ

ಎರಡನೇ ಶತಮಾನದ ಆರಂಭದಲ್ಲಿ ಭಾರತದಲ್ಲಿ ನಡೆದ ನಗರೀಕರಣದಲ್ಲಿ ಕರ್ನಾಟಕವೂ ದೊಡ್ಡ ಪಾತ್ರ ವಹಿಸಿತು. ಭಾರತದ ನಗರೀಕರಣದ ಅಲೆಯಲ್ಲಿ ಮೊದಲಬಾರಿಗೆ ಕರ್ನಾಟಕ ಪಾತ್ರ ವಹಿಸಿತು. ಭಾರತದ ಇತರ ಭಾಗಗಳಿಗೆ ಹೋಲಿಸಿದರೆ ಸಾಕಷ್ಟು [illegible] ವಾಗಿಯೇ ಕರ್ನಾಟಕದಲ್ಲಿಯೂ ನಗರಗಳ ಬೆಳವಣಿಗೆಗಳಾದವು. ಕರ್ನಾಟಕ ಮತ್ತು ಇತರ ಪ್ರದೇಶಗಳ ನಡುವೆ ಸಂಪರ್ಕಗಳು ಹೆಚ್ಚಿದವು. ತಮಿಳುನಾಡು, ಆಂಧ್ರ, ಗುಜರಾತ್, ಒರಿಸ್ಸಾಗಳ ಸಂಪರ್ಕ ವ್ಯಾಪಕವಾದವು. ಇವುಗಳ ಫಲವಾಗಿ ಭಾರತದಲ್ಲಿ ಶೈವ ಮಠಗಲ ಬೆಳವಣಿಗೆ ಕರ್ನಾಟಕದಲ್ಲಿಯೂ ಶೈವಮಠಗಳ ಬೆಳವಣಿಗೆ ಅವುಗಳಲ್ಲಿ ಸೀಮಿತವಾಗಿಯಾದರೂ ಹೆಚ್ಚು ವಿದ್ಯಾಭ್ಯಾಸ, ಅಗ್ರಹಾರಗಳ ಜೊತೆ ಸೈದ್ಧಾಂತಿಕ ಪೈಪೋಟಿ ಆರಂಭವಾದವು. ಕಾಶ್ಮೀರ ಶೈವ, ಗುಜರಾತ್ ಶೈವ ಲಾಕುಳ ಶೈವ, ಕಾಳಾಮುಖ ಶೈವಗಳ ಬೆಳವಣಿಗೆ ಮಿಶ್ರಣ ಇವುಗಳನ್ನು ಕಾಣಬಹುದು.

ವರ್ಣಾಶ್ರಮದ ಮೇಲೆ ಧಾಳಿ

ನಗರೀಕರಣದ ಜೊತೆಗೆ, ಕುಶಲ ಕರ್ಮಿಗಳ ಬೆಳವಣಿಗೆ ಕೃಷಿಯ ವಿಸ್ತರಣೆ, ನೀರಾವರಿ ಕರ್ನಾಟಕದಲ್ಲಿಯೂ ಸಾಕಷ್ಟು ವ್ಯಾಪಕವಾಗಿತ್ತು. ಕರ್ನಾಟಕದೊಳಗೇ ಆಂತರಿಕ ವಾಣಿಜ್ಯವೂ ವಿಸ್ತರಿಸಿತು. ನೀರಾವರಿಯಲ್ಲಿ ಕೆರೆ, ಭಾವಿಯ ತಂತ್ರಜ್ಞಾನ, ಕೃಷಿ ತಂತ್ರಜ್ಞಾನದಲ್ಲಿ ಹೊಸ ಬೆಳವಣಿಗೆಗಳು, ಬಟ್ಟೆ ಉತ್ಪಾದನೆಯಲ್ಲಿನ ತಂತ್ರಜ್ಞಾನದಲ್ಲಿ ಬೆಳವಣಿಗೆಗಳು ಕೂಡ ಕರ್ನಾಟಕದ ಹಲವೆಡೆ ಕಾಣಬಹುದು ಅಥವಾ ಸಾಹಿತ್ಯದಲ್ಲಿ ಗುರುತಿಸಬಹುದು.

ಜಾತಿಪದ್ಧತಿಯ ಮೇಲೆ ಧಾಳಿ

ಉತ್ಪಾದನೆಯ ಅಗತ್ಯ, ನಗರೀಕರಣ, ವಾಣಿಜ್ಯ, ಸಂಚಾರ ಇತ್ಯಾದಿಗಳು ಜಾತಿ ವ್ಯವಸ್ಥೆಯ ಒಳಗೆ ಪೂರೈಕೆಯಾಗಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಯಿತು. ಸಿದ್ಧಾಂತವನ್ನು ರೂಪಿಸಲು ಕಾರಣವಾಯಿತು. ಸಮಾಜನ ಪ್ರಗತಿಯ ದಾರಿಯಲ್ಲಿ ಪುರಾಣಗಳ ಟೀಕೆ, ದೇವಾಲಯಗಳ ವಿರುದ್ಧ ಚಳುವಳಿ ಜೊತೆಗೆ ಮಹಿಳಾ ಸಮಾನತೆಯ ಕಾಳಜಿ ಇವು ಈ ಸಿದ್ಧಾಂತದ ಪ್ರಮುಖ ಅಂಶಗಳು. ಈ ಸಿದ್ಧಾಂತ ಧಾರ್ಮಿಕ ರೂಪದಲ್ಲಿಯೇ ವೀರಶೈವ ಅಥವಾ ಲಿಂಗಾಯತ ಧಾರ್ಮಿಕ ಚಳುವಳಿಯಾಯಿತು. ಕರ್ನಾಟಕದ ಸಮಾಜ ರಚನೆಯ ಮೇಲೆ ಅದರಲ್ಲಿಯೂ ಉತ್ತರ ಕರ್ನಾಟಕದ ಮೇಲೆ ಪರಿಣಾಮಕಾರಿಯಾಯಿತು.

ಜಾತಿ ಪದ್ಧತಿಯ ವಿರುದ್ಧದ ಟೀಕೆ, ಮಹಿಳೆಯರನ್ನು ಒಳಗೊಳ್ಳುವ ವಿಷಯದಲ್ಲಿ - ವೇದ, ಪುರಾಣ, ದೇವಾಲಯಗಳನ್ನು ವಿರೋಧಿಸದಿದ್ದರೂ - ಇನ್ನೂ ಹಲವೆಡೆಯಿಂದ ಯೋಚನೆ ಮೂಡಿಬಂತು. ಮಾಧ್ವರ ದ್ವೈತ ಸಿದ್ಧಾಂತ, ಅದರ ವ್ಯಾಪ್ತಿಯಲ್ಲಿ ಮೂಡಿದ ಹರಿದಾಸ ಪಂಥ, ರಾಮಾನುಜರ ವಿಶಿಷ್ಟಾದ್ವೈತ ಅದರ ಪ್ರಭಾವಕ್ಕೊಳಗಾಗಿ ಜನವಿಭಾಗಗಳ ನಡುವೆ ಈ ವಿಚಾರಗಳು ಹರಡಿದವು.

ಈ ಚಳುವಳಿ 2ನೆಯ ಸಹಸ್ರಮಾನದಲ್ಲಿ ಕರ್ನಾಟಕದ ಮಾನವ ಸಮುದಾಯ ಹಾಕಿದ ದೊಡ್ಡ ಹೆಜ್ಜೆ. ಈ ಚಳುವಳಿಯ ಸತ್ವವನ್ನು ಸೋಲನ್ನು ಗುರುತಿಸಿ ಮೂರನೆಯ ಸಹಸ್ರಮಾನದಲ್ಲಿಯಾದರೂ ಹೊಸ ಸನ್ನಿವೇಶದ ಅಗತ್ಯಗಳಿಗನುಗುಣವಾಗಿ ಸಾಧಿಸಬೇಕಾಗಿದೆ.

(ಮುಂದುವರಿಯುವುದು)

21ನೇ ಶತಮಾನದ ಹೊಸ್ತಿಲಲ್ಲಿ
ಹೊಸ ಸಹಸ್ರಮಾನದ ಪರಿವರ್ತನೆಯ
ಸವಾಲುಗಳ ಹಿಡಿದು
ಮುಂದಡಿ ಇಡುತ್ತಿರುವ ಎಲ್ಲರಿಗೂ,
ವಿಶೇಷವಾಗಿ ನಮ್ಮ ಓದುಗರಿಗೆ
ಸಹಸ್ರಮಾನದ ಶುಭಾಶಯಗಳ
- ಐಕ್ಯರಂಗ

ಮಾಲಕರಿಗೆ ಅನುಕೂಲವಾಗುವ ಶಾಸನಗಳನ್ನು ತರುವ ಹುನ್ನಾರವೂ ನಡೆದಿರುವುದನ್ನು ಸಭೆ ಬಲವಾಗಿ ವಿರೋಧಿಸಿತು. ಇವನ್ನೆಲ್ಲ ವಿರೋಧಿಸಲು ಒಂದು ದೇಶವ್ಯಾಪಿ ಕಾರ್ಯಾಚರಣೆಗಿಳಿಯಲು ಸಭೆ ನಿರ್ಧರಿಸಿತು.

ಜನವರಿ 11-2000 - ನೇರ ಕಾರ್ಯಾಚರಣೆಗೆ ರಾಷ್ಟ್ರೀಯ ಅಭಿಮತ ಸಂಗ್ರಹ: ಹೊಸ ಸಹಸ್ರಮಾನವು ಆರಂಭವಾಗುವ ಸಂದರ್ಭದಲ್ಲಿ ಸಿ.ಪಿ.ಎಸ್.ಟಿ.ಯು. ನೇತೃತ್ವದಲ್ಲಿ, ಜನವರಿ 11 ರಂದು ಕೇಂದ್ರ ಸರಕಾರವು ತನ್ನ ನೀತಿಯನ್ನು ಬದಲಿಸುವವರೆಗೂ ದೀರ್ಘಕಾಲದ ನೇರ ಕಾರ್ಯಾಚರಣೆ ನಡೆಸಲು ಸಾರ್ವಜನಿಕ ಉದ್ದಿಮೆಗಳ ನೌಕರರ ಅಭಿಮತವನ್ನು ಸಂಗ್ರಹಿಸಲಾಗುವುದು. ಮಾತ್ರವಲ್ಲದೆ ಅಭಿಮತ ಸಂಗ್ರಹದ ಪ್ರತಿಗಳನ್ನು ಕೇಂದ್ರ ಸರಕಾರಕ್ಕೆ ಕಳುಹಿಸಲಾಗುವುದು. ಸಾರ್ವಜನಿಕ ಉದ್ದಿಮೆಗಳ ಕೇಂದ್ರವಾಗಿರುವ ಬೆಂಗಳೂರಿನಲ್ಲಿ ಈ ಬಗ್ಗೆ ಈಗಾಗಲೇ ತಯಾರಿ ನಡೆದಿದೆ. ಕೆ.ಜಿ.ಎಫ್., ಮೈಸೂರು, ಭದ್ರಾವತಿ ಮೊದಲಾದ ಕಡೆಗಳಲ್ಲೂ ಚಟುವಟಿಕೆಗಳು ಆರಂಭಗೊಂಡಿವೆ. ಈ ನೇರ ಕಾರ್ಯಾಚರಣೆಗೆ ಜನಸಮೂಹದ ಬೆಂಬಲ ಅಗತ್ಯ. ಅಂತೆಯೇ ಜನವರಿ 20 ರಂದು ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ (ಎನ್.ಪಿ.ಎಂ.ಓ) ನವದೆಹಲಿಯಲ್ಲಿ ಸಮಾವೇಶ ನಡೆಸಲಿದೆ.

ಉಳಿದ ಕಾರ್ಯಕ್ರಮ ಹೀಗಿವೆ

. ಇಡೀ ಸಾರ್ವಜನಿಕ ವಲಯದ ಕಾರ್ಮಿಕರ ರಾಷ್ಟ್ರವ್ಯಾಪಿ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ತಯಾರಿ ನಡೆಸುವುದು.

. ದೇಶದ ಎಲ್ಲಾ ಸಾರ್ವಜನಿಕ ವಲಯದ ಘಟಕಗಳಲ್ಲಿ ಒಂದು ದಿನ ಎಚ್ಚರಿಕೆ ಮುಷ್ಕರ(ಈ ಬಗ್ಗೆ ದಿನಾಂಕವನ್ನು ಒಂದು ವಾರದೊಳಗೆ ಪ್ರಕಟಿಸಲಾಗುವುದು)


. ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಇತರ ಕೈಗಾರಿಕಾವಾರು ಕಾರ್ಮಿಕ ಒಕ್ಕೂಟಗಳೊಂದಿಗೆ ಸಮಾಲೋಚನೆ ನಡೆಸಿ ಖಾಸಗೀಕರಣದ ವಿರುದ್ಧ ಸಂಸತ್ತಿನ ಮುಂದಿನ ಬಜೆಟ್ ಅಧಿವೇಶನದ ವೇಳೆಯಲ್ಲಿ ಒಂದು ಜಂಟಿ ರಾಷ್ಟ್ರೀಯ ಸಮಾವೇಶ.

ಈ ವಿಸ್ತೃತ ಸಭೆಯ ನೇತೃತ್ವದಲ್ಲಿ ಡಿಸೆಂಬರ್ 17 ರಂದು ನವದೆಹಲಿಯಲ್ಲಿ ಕೇಂದ್ರ ಕೈಗಾರಿಕಾ ಮಂತ್ರಾಲಯವಿರುವ 'ಉದ್ಯೋಗ ಭವನ' ದ ಎದುರು ಸಾವಿರಾರು ಸಾರ್ವಜನಿಕ ವಲಯದ ನೌಕರರು ಭಾರೀ ಮತಪ್ರದರ್ಶನ ನಡೆಸಿ ಸರಕಾರದ ಜನ-ವಿರೋಧಿ, ರಾಷ್ಟ್ರ-ವಿರೋಧಿ ನೀತಿಗಳ ಬಗ್ಗೆ ನೌಕರರ ಕ್ರೋಧವನ್ನು ಆಳರಸರ ಗಮನಕ್ಕೆ ತಂದರು. ಖಾಸಗೀಕರಣದ ಸೂಚನೆಗಳನ್ನು ಕೈಬಿಡಬೇಕು. ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕೆ ಸಕಲ ಕ್ರಮಗಳನ್ನು ಕೈಗೊಳ್ಳಬೇಕು, ಸಂಬಂಧಪಟ್ಟ ಉದ್ದಿಮೆಗಳ ಕಾರ್ಮಿಕರಿಗೆ ಬಾಕಿಯಿರುವ ಸಂಬಳವನ್ನು ಪೂರ್ಣವಾಗಿ ಪಾವತಿ ಮಾಡಬೇಕು, DPE ನ ಅಡ್ಡಗಾಲು ಹಾಕುವ ನಿರ್ದೇಶನಗಳನ್ನೆಲ್ಲಾ ಹಿಂದಕ್ಕೆ ತಗೊಳ್ಳಬೇಕು ಎಂಬ ಘೋಷಣೆಗಳು ಮೊಳಗಿದವು. ಎಐಟಿಯುಸಿ ಪ್ರಧಾನಕಾರ್ಯದರ್ಶಿ ಕೆ.ಎನ್.ಮಹೇಂದ್ರ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ, ಬೆಂಗಳೂರು ಜೆ.ಎ.ಎಫ್. ಪರವಾಗಿ ಮೈಕೆಲ್ ಫರ್ನಾಂಡೀಸ್, ಹೈದರಾಬಾದ್ ಸಂಯೋಜನಾ ಸಮಿತಿಯ ವೈ.ಆದಿನಾರಾಯಣ, ಸಿಐಟಿಯು ಕಾರ್ಯದರ್ಶಿ ಚಿತ್ರಬ್ರತ ಮಜುಂದಾರ್, ಸುಬಾಷಿಣಿ ಅಲಿ ಹಾಗೂ ಸಂಸತ್ ಸದಸ್ಯ ದೀಪಂಕರ್ ಮುಖರ್ಜಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಮತಪ್ರದರ್ಶನದಿಂದ ಒಂದು ಮನವಿ ಪತ್ರವನ್ನು ಕೈಗಾರಿಕಾ ಮಂತ್ರಿಗಳಿಗೆ ಸಲ್ಲಿಸಲಾಯಿತು.

ಕಾಂ. ಎಸ್.ಸೂರ್ಯನಾರಾಯಣ ರಾವ್ ಅವರು ಹೇಳಿದಂತೆ, "ಸಾರ್ವಜನಿಕ ಉದ್ದಿಮೆಗಳ ರಕ್ಷಣೆ ಮತ್ತು ಬೆಳವಣಿಗೆ ದೇಶದ ಆರ್ಥಿಕ ಸ್ವಾವಲಂಬನೆಯನ್ನು ಕಾಪಾಡುವುದು' ಅಂತೆಯೇ ದೇಶದ ಒಳಿತನ್ನು ಬಯಸುವ ಎಲ್ಲಾ ವಿಭಾಗದ ಜನರು, ಈ ಹೋರಾಟವನ್ನು ಯಶಸ್ಸಿಗೊಳಿಸಲು ಪಣ ತೊಡಬೇಕು.

(ಸೂರಿಯವರ ಸಂದರ್ಶನ ಪುಟ 4 ನೋಡಿ)

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ
ಕನ್ನಡಕ್ಕೆ: ವಿಶ್ವಕುಂದಾಪುರ

ಭಾಗ 19

ಕಳೆದ ಸಂಚಿಕೆಯಲ್ಲಿ ಜ್ಯೋತಿಬಸುರವರು ಬಂಗಾಳದಲ್ಲಿ 'ಆಹಾರಕ್ಕಾಗಿ ಹಾಹಾಕಾರ' ವೆದ್ದಾಗ ಹಸಿವು ರ್‍ಯಾಲಿಗಳ ಮೇಲೆ ಯಾವುದೇ ಪ್ರಚೋದನೆ ಇಲ್ಲದೆ ಪೋಲೀಸ್ ನಡೆಸಿದ ಗೋಲಿಬಾರ್, ದೌರ್ಜನ್ಯ ಜನರ ಪ್ರಾಣ ತೆಗೆದುಕೊಂಡಾಗ ಅದರ ವಿರುದ್ಧ ವಿಧಾನಸಭೆಯಲ್ಲಿ ಪ್ರತಿಭಟಿಸಿದ್ದರ ಬಗ್ಗೆ ಓದಿದ್ದೀರಿ. ಈ ಸಂಚಿಕೆಯಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿ ಸಂಯುಕ್ತ ಸಮಾಜವಾದಿ ಸಂಘಟನೆ ಎಂಬ ಪ್ರತಿಪಕ್ಷ ರಂಗ ಉದಯವಾದ ಬಗ್ಗೆ ಓದಿ

ಪ್ರಪ್ರಥಮ ಕಾಂಗ್ರೆಸ್ ವಿರೋಧಿ ಕೂಟ

195[illegible] ಮೇ ದಿನವನ್ನು ಎಲ್ಲ ಎಡ ಮನೋಭಾವದ ಟ್ರೇಡ್‌ಯೂನಿಯನ್ ಗಳು ಒಂದೇ ವೇದಿಕೆಯಡಿ ಆಚರಿಸಿದವು. ವಿಶಾಲ ಎಡಪಂಥೀಯ ಆದರ್ಶಗಳ ಆಧಾರದಲ್ಲಿ ದೇಶದಲ್ಲಿ ಒಗ್ಗಟ್ಟು ಸಾಧಿಸ ಬೇಕೆಂಬ ಯೋಚನೆ ಚಿಗುರಿದ್ದೇ ಆ ಕಾಲಘಟ್ಟದಲ್ಲಿ. ಸರಿಯಾಗಿ ಆ ಸಮಯದಲ್ಲೇ ಚುನಾವಣೆ ಬಂತು. 1952 ರ ಜನವರಿಯಲ್ಲಿ ಚುನಾವಣೆ ನಡೆಯುತ್ತಿದ್ದರೂ ನಾವು ಅದನ್ನು ಗಂಭೀರವಾಗಿ ಪರಿಗಣಿಸಿ ಅಕ್ಟೋಬರ್‌ನಿಂದಲೇ ಕೆಲಸ ಶುರುಮಾಡಿದೆವು.

ಈ ನಡುವೆ, ಪಶ್ಚಿಮ ಬಂಗಾಳ ಪ್ರಾಂತೀಯ ಸಮಿತಿಯ ಸಮ್ಮೇಳನ ನಡೆಯಿತು. ಕಾಕಾಬಾಬು ಕಾರ್ಯದರ್ಶಿಯಾಗಿ ಆಯ್ಕೆಯಾದರು. ನಾನು ಸಮಿತಿ ಸದಸ್ಯರಲ್ಲಿ ಒಬ್ಬನಾಗಿ ಆಯ್ಕೆಯಾದೆ. ಅಜಯ್ ಘೋಷ್ ಅಷ್ಟು ಹೊತ್ತಿಗಾಗಲೇ ಹೊಸ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು.

ಚುನಾವಣೆಯಲ್ಲಿ ಭಾಗವಹಿಸಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿತು. ಪ್ರಣಾಳಿಕೆಯನ್ನೂ ವಿತರಿಸಲಾಯಿತು. ಕಾಂಗ್ರೆಸ್ ಪಕ್ಷ ಮುಖ್ಯ ವೈರಿಯೆಂದು ಪ್ರಣಾಳಿಕೆ ಹೇಳಿತು. ಹಾಗೂ ಅದನ್ನು ಸೋಲಿಸಲು ಎಲ್ಲಾ ಪ್ರತಿಪಕ್ಷಗಳು ಒಂದಾಗಬೇಕೆಂದು ಕರೆ ನೀಡಿತು. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಬೇಕು ಮತ್ತು ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು ಎಂಬ ಬೇಡಿಕೆಯನ್ನು ಮುಂದಿಡಲಾಯಿತು.

ಆ ರೀತಿ ಮಾಡದಿದ್ದರೆ ಚುನಾವಣೆ ಒಂದು ಅಣಕವಾಗುತ್ತದೆ ಎಂಬುದು ನಮ್ಮ ನಿಲುವು.

ಎಲ್ಲ ರಾಜಕೀಯ ಕೈದಿಗಳ ಬಿಡುಗಡೆ, ಆಹಾರ ಬಿಕ್ಕಟ್ಟು ಮತ್ತು ನಿರಾಶ್ರಿತರ ಪುನರ್ವಸತಿ ಬೇಡಿಕೆ ವಿಷಯಗಳು ಸಾರ್ವತ್ರಿಕ ಚುನಾವಣೆಯಿಂದ ಪ್ರತ್ಯೇಕವಾದ ವಿಚಾರವಲ್ಲ ಎಂಬುದು ನಮ್ಮ ಅಭಿಮತವಾಗಿತ್ತು.

ಇನ್ನೂ 500 ರಾಷ್ಟ್ರೀಯವಾದಿಗಳು ರಾಜ್ಯದ ಸೆರೆಮನೆಗಳಲ್ಲಿ ಇದ್ದಾರೆ ಹಾಗೂ ಇತರ 43 ಜನರ ವಿರುದ್ಧ ವಾರಂಟ್ ಇದೆ ಎಂದು ಪಶ್ಚಿಮ ಬಂಗಾಳ ಪ್ರಾಂತೀಯ ಸಮಿತಿ 1951 ನವೆಂಬರ್ 11 ರಂದು ಹೊರಡಿಸಿದ ಹೇಳಿಕೆಯೊಂದರಲ್ಲಿ ತಿಳಿಸಿತು. ಚುನಾವಣೆಗೆ ಮುನ್ನ ಅವರು ಬಿಡುಗಡೆ ಹೊಂದಬೇಕಿತ್ತು. ಈ ಬಂಧಿಗಳ ಪಟ್ಟಿಯೊಂದನ್ನು ಪಕ್ಷ ಸಿದ್ಧಪಡಿಸಿತು.

ಗಣೇಶ್ ಘೋಷ್, ರಣೇನ್ ಸೇನ್(ಇಬ್ಬರೂ ಕಲ್ಕತ್ತ), ಅಬ್ದುಲ್ ರಜಾಕ್ ಖಾನ್, ಅಜಿತ್ ಗಂಗೂಲಿ, ನಿತ್ಯಾನಂದ ಚೌಧರಿ(ಮೂವರೂ 24 ಪರಗಣ), ಭೂಪಾಲ್ ಪಂಥಾ, ಜತಿನ್ ಮೈತ್ರಿ, ರವಿ ಮೈತ್ರ(ಮೂವರೂ ಮಿಡ್ನಾಪುರ), ಸತ್ಯೇಂದ್ರ ನಾರಾಯಣ ಮಜುಂದಾರ್(ಡಾರ್ಜಿಲಿಂಗ್), ಸುಶಿತಲ್ ರಾಯ್ ಚೌಧರಿ(ಹೂಗ್ಲಿ), ವಿಜಯ್ ಮೋದಕ್(ಹೂಗ್ಲಿ) ಮತ್ತು ವಿನಯ್ ಚೌಧರಿ (ಬರ್ದ್ವಾನ್) ಇವರ ಹೆಸರುಗಳೂ ಆ ಪಟ್ಟಿಯಲ್ಲಿ ಸೇರಿದ್ದವು. ಅವರೆಲ್ಲರೂ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿದ್ದರು.

ಜಿಗುಟು ಧೋರಣೆ

ನಾವು ಆರಂಭಿಸಿದ ಸಹಿ ಸಂಗ್ರಹ ಆಂದೋಲನಕ್ಕೆ ಭಾರಿ ಪ್ರತಿಕ್ರಿಯೆ ಕಂಡು ಬರುತ್ತಿತ್ತು. ಆದರೆ ಚುನಾವಣೆಗೆ ಮುನ್ನ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ನವೆಂಬರ್ 12, 1951 ರಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು. ಹಾಗಾಗಿ ಡಾ. ರಾಯ್‌ರ ಜಿಗುಟಿನ ಧೋರಣೆಯ ಹಿನ್ನೆಲೆಯಲ್ಲಿ ನಮ್ಮ ಚಳುವಳಿಗೆ ಹೊಸ ಹುರುಪು ದೊರೆಯಿತು.

ನಮಗೆ ಅನೇಕ ಸಂಕಷ್ಟಗಳು ಎದುರಾದವು. ಪಕ್ಷ ಆಗಷ್ಟೆ ಕರಾಳ ಯುಗವೊಂದರಿಂದ ಹೊರಬಂದಿತ್ತು, ಸಾಂಸ್ಥಿಕ ವ್ಯವಸ್ಥೆ ಇನ್ನೂ ಇರಲಿಲ್ಲ. ಬಹುತೇಕ ಮುಖಂಡರು ಇನ್ನೂ ಭೂಗತರಾಗಿದ್ದರು. ಅಥವಾ ಜೈಲಿನಲ್ಲಿದ್ದರು. ಇವೆಲ್ಲದರ ಜತೆಗೆ ಹಣಕಾಸಿನ ಮುಗ್ಗಟ್ಟು ಕೂಡ ತೀವ್ರವಾಗಿತ್ತು. ಇವೆಲ್ಲದರ ನಡುವೆಯೂ ನಾವು ಚುನಾವಣೆ ಕಣಕ್ಕೆ ಧುಮುಕಿ ಮುನ್ನುಗ್ಗಿದೆವು.

ಇತರರ ಜತೆ ಮೈತ್ರಿ


ಅಕ್ಟೋಬರ್‌ನಲ್ಲಿ ಇತರ ಕೆಲವು ಪಕ್ಷಗಳ ಜತೆ ನಾವು ಒಂದು ರೀತಿಯ ಹೊಂದಾಣಿಕೆ ಮಾಡಿಕೊಂಡೆವು. ನವೆಂಬರ್ 3 ರಂದು 88 ಅಭ್ಯರ್ಥಿಗಳ ಪಟ್ಟಿಯೊಂದನ್ನು ನಾವು ಬಿಡುಗಡೆ ಮಾಡಿದೆವು. ಪ್ರಾಂತೀಯ ಸಮಿತಿಯ ಒಂದು ಹೇಳಿಕೆಯನ್ನು ನಾನು ಸುದ್ದಿಗಾರರಿಗೆ ಬಿಡುಗಡೆ ಮಾಡಿದೆ. ಇತರ ಪಕ್ಷಗಳ ಜತೆಗಿನ ಹೊಂದಾಣಿಕೆಯನ್ನು ಗಮನದಲ್ಲಿಟ್ಟುಕೊಂಡೇ ಈ ಪಟ್ಟಿ ಸಿದ್ಧಪಡಿಸಲಾಗಿದೆ, ಗೊಂದಲಕ್ಕೆ ಅವಕಾಶವೇ ಇಲ್ಲ ಎಂದು ಹೇಳಿಕೆಯಲ್ಲಿ ಸ್ಪಷ್ಟಪಡಿಸಲಾಗಿತ್ತು.

ಕಾಂಗ್ರೆಸ್ ವಿರೋಧಿ ಸಂಯುಕ್ತ ರಂಗವೊಂದನ್ನು ರೂಪಿಸುವುದು ತುಂಬಾ ಅಗತ್ಯ ಎಂದು ಹೇಳಿಕೆ ಪ್ರತಿಪಾದಿಸಿತು. ಅದು ಕಾರ್ಯಸಾಧ್ಯವೂ ಆಗಿತ್ತು. ಎಲ್ಲ ಕೋಮುವಾದ ವಿರೋಧಿ, ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಪರ ಶಕ್ತಿಗಳು ಈ ರಂಗದಲ್ಲಿ ಇರಬೇಕು ಮತ್ತು ಕನಿಷ್ಟ ಕಾರ್ಯಕ್ರಮವೊಂದನ್ನು ಅಂದಿನ ತುರ್ತು ಅಗತ್ಯ ಎಂದು ಅಭಿಪ್ರಾಯಪಡಲಾಗಿತ್ತು. ಏಕತೆ-ಮಾತುಕತೆಯಲ್ಲಿ ಇದು ಮಹತ್ವದ ಅಂಶವಾಗಿತ್ತು. ಹಾಗೂ ಎಲ್ಲ ಸಮಾಲೋಚನೆಗಳಲ್ಲಿ ಅದುವೇ ಪ್ರಧಾನ ಪಾತ್ರ ವಹಿಸಿತು.

ಫಾರ್ವರ್ಡ್ ಬ್ಲಾಕ್, ಶರತ್ ಬೋಸ್ ಸ್ಥಾಪಿಸಿದ ಸೋಷಲಿಸ್ಟ್ ರಿಪಬ್ಲಿಕನ್ ಪಾರ್ಟಿ, ಬೋಲ್ಶೆವಿಕ್ ಪಾರ್ಟಿ ಆಫ್ ಇಂಡಿಯಾ, ಐ.ಎನ್.ಎ, ಪೀಪಲ್ಸ್ ಮೂವ್‌ಮೆಂಟ್ ಮತ್ತಿತರ ಗುಂಪುಗಳು ಮತ್ತು ವ್ಯಕ್ತಿಗಳು ಒಂದಾಗಿ ಸಂಯುಕ್ತ ಸಮಾಜವಾದಿ ಸಂಘಟನೆ(United Socialist Oranisation) ರಚಿತವಾಯಿತು. ಅದು ನವೆಂಬರ್ 23 ರಂದು ನಮ್ಮ ಜತೆ ಚುನಾವಣೆ ಹೊಂದಾಣಿಕೆ ಮಾಡಿಕೊಂಡಿತು. ಈ ರೀತಿಯಾಗಿ ಅದೇ ಪ್ರಪ್ರಥಮ ಬಾರಿಗೆ ಕಾಂಗ್ರೆಸ್ ವಿರೋಧಿ ಪ್ರತಿಪಕ್ಷ ರಂಗವೊಂದು ಉದಯವಾಯಿತು......

(ಮುಂದುವರಿಯುವುದು)

ಕೇಂದ್ರ ಸರ್ಕಾರದ ನೌಕರ ವಿರೋಧಿ, ದೇಶದ್ರೋಹಿ ಉದಾರೀಕರಣ ನೀತಿಯನ್ನು ಬಗ್ಗುಬಡಿಯಲು ಸಾರ್ವಜನಿಕ ಉದ್ದಿಮೆಗಳ ನೌಕರರು ಒಂದಾಗಿ ಹೋರಾಟಕ್ಕಿಳಿದಿದಾರೆ. ಈ ಸಂದರ್ಭದಲ್ಲಿ ಹಿರಿಯ ಕಾರ್ಮಿಕ ನೇತಾರ, ಸಿಐಟಿಯು ರಾಜ್ಯಾದ್ಯಕ್ಷ ಹಾಗೂ ಕೇಂದ್ರ ಸಾರ್ವಜನಿಕ ಉದ್ದಿಮೆಗಳಾದ ಬಿ.ಹೆಚ್.ಇ.ಎಲ್. ಮತ್ತು ಬಿಇಎಲ್ ನೌಕರ ಸಂಘಟನೆಗಳ ಮುಖಂಡರಾದ ಕಾ. ಸೂರ್ಯನಾರಾಯಣ ರಾವ್ ಅವರೊಂದಿಗಿನ ಸಂದರ್ಶನ



● ***ಸಾರ್ವಜನಿಕ ಉದ್ದಿಮೆಗಳ ನೌಕರರ ಸಂಘಟನೆಗಳ ಪ್ರತಿನಿಧಿಗಳು ನವದಹೆಲಿಯಲ್ಲಿ ಸಭೆ ಸೇರಿದ ಹಿನ್ನೆಲೆಯಾವುದು?***

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಘನ ಕೈಗಾರಿಕೆಗಳನ್ನು ಸ್ಥಾಪಿಸಲು ನೆಹರೂ ಸರಕಾರ ಬಯಸಿದಾಗ ಇಲ್ಲಿನ ಕೈಗಾರಿಕೋದ್ಯಮಿಗಳು ಯಾವುದೇ ಆಸಕ್ತಿ ತೋರಿಸಲಿಲ್ಲ. ತೊಡಗಿಸಿದ ಹಣ ವಾಪಾಸು ಬರುವುದೋ ಇಲ್ಲವೋ ಎನ್ನುವ ಭಯವಿತ್ತು. ಶ್ರೀಮಂತ ರಾಷ್ಟ್ರಗಳಾದ ಅಮೆರಿಕಾ, ಜರ್ಮನಿ, ಜಪಾನ್ ಯಾವುದೇ ದೇಶಗಳು ಸಹಾಯಕ್ಕೆ ಬರಲಿಲ್ಲ. ಬದಲಾಗಿ ಸಮಾಜವಾದಿ ರಾಷ್ಟ್ರಗಳ ಸಹಾಯದಿಂದ ಸರಕಾರಿ ಕ್ಷೇತ್ರದಲ್ಲಿ, ಕಬ್ಬಿಣ, ಉಕ್ಕು, ವಿದ್ಯುತ್, ತೈಲ,ಕಾಗದ ಮೊದಲಾದ ಮೂಲಭೂತ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಆ ಮೂಲಕ ದೇಶವು ಹಲವು ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಯಿತು.

ಇದೀಗ ರಾಜೀವ್ ಗಾಂಧಿ ಸರಕಾರದಿಂದ ಆರಂಭಗೊಂಡ ಉದಾರೀಕರಣ ನೀತಿ ಬಿಜೆಪಿ ನೇತೃತ್ವದ ವಾಜಪೇಯಿ ಸರಕಾರದ ಅಡಿಯಲ್ಲಿ ತೀವ್ರಗೊಳ್ಳುತ್ತಿದೆ. ಕೈಗಾರಿಕಾ ಒಕ್ಕೂಟದ ಮಾಲಿಕರು ಖಾಸಗೀಕರಣ ನೀತಿಯನ್ನು ತುರ್ತಾಗಿ ಜಾರಿಗೊಳಿಸಬೇಕೆಂದು ಒತ್ತಾಯಿಸುತ್ತಿದ್ದು ವಾಜಪೇಯಿ ಸರಕಾರ 'ಜೀ ಹುಜೂರ್' ಎಂದು ಜಾರಿಗೊಳಿಸುತ್ತಿದೆ. ಉದಾಹರಣೆಗೆ ವಿಮಾ ಸಂಸ್ಥೆಗಳಿಗೆ ಸಂಬಂಧಪಟ್ಟ ಮಸೂದೆ. ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಗಳಾದ ತೈಲ, ಗ್ಯಾಸ್, ಟೆಲಿಕಾಂ, ಬ್ಯಾಂಕ್, ವಿಮೆ ಮೊದಲಾದ ಕ್ಷೇತ್ರಗಳಲ್ಲಿ ಖಾಸಗಿಯವರಿಗೆ ಅದರಲ್ಲೂ ವಿಶೇಷವಾಗಿ ವಿದೇಶಿ ಬಂಡವಾಳಕ್ಕೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಕ್ಷೇತ್ರದ ಮೇಲೆ ಬರುತ್ತಿರುವ ತೀವ್ರ ದಾಳಿಯನ್ನು ಎದುರಿಸಲು ಸಾರ್ವಜನಿಕ ಉದ್ದಿಮೆಗಳ ಎಲ್ಲಾ ನೌಕರರ ಸಂಘಟನೆಗಳು ಒಂದಾಗಿ ಹೋರಾಟ ನಡೆಸಲು ಡೆಲ್ಲಿ ಸಭೆ ನಿರ್ಧರಿಸಿತು.

● ***ಸಾರ್ವಜನಿಕ ಉದ್ದಿಮೆ ನೌಕರರ ಪರಿಸ್ಥಿತಿ ಹೇಗಿದೆ?***

ನೌಕರರ ಸಂಖ್ಯೆಯಲ್ಲಿ ತೀವ್ರ ಕಡಿತ ಉಂಟಾಗಿದೆ. ಆದ್ದರಿಂದ ಪ್ರತಿಯೊಬ್ಬ ನೌಕರರ ಮೇಲೂ ಕೆಲಸದ ಹೊರೆ ಹೆಚ್ಚಾಗಿದೆ. ಮಾತ್ರವಲ್ಲದೆ ಕಳೆದ ಮೂರು ವರ್ಷಗಳಿಂದ ಹೊಸ ವೇತನ ಒಪ್ಪಂದ ಆಗಿಲ್ಲ. ಕೆಲವೊಂದು ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿವೆ ಎಂಬ ನೆಪವೊಡ್ಡಿ ವೇತನ ನೀಡುತ್ತಿಲ್ಲ.

ಜತೆಯಲ್ಲಿ ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆಗಳ ಇಲಾಖೆ(ಡಿ.ಪಿ.ಇ) ಯು ಮುಂದಿನ ಒಪ್ಪಂದದ ಕಾಲಾವಧಿ 10 ವರ್ಷ ಇರಬೇಕು ಎಂದು ಶರತ್ತು ಹಾಕಿದೆ. ಈಗಿರುವ ಐದು ವರ್ಷದ ಒಪ್ಪಂದವು ಜಾರಿಗೆ ಬಂದು ಎಂಟು ವರ್ಷವಾದರೂ, ಹೊಸ ಒಪ್ಪಂದ ಆಗದೆ ಇರುವಾಗ 10 ವರ್ಷದ ಒಪ್ಪಂದ ಆದರೆ ನೌಕರರ ಗತಿಯೇನು? ಆ ನಿಟ್ಟಿನಲ್ಲಿ ತೀವ್ರವಾದ ಹೋರಾಟ ನಡೆಸದೆ ಬೇರೆ ದಾರಿಯೇ ಇಲ್ಲ.

● ***ದೆಹಲಿಯಲ್ಲಿ ನಡೆದ ಸಭೆಯಲ್ಲಿ ನೀವು ಭಾಗವಹಿಸಿದ್ದೀರಿ. ಪ್ರಮುಖ ನಿರ್ಧಾರಗಳನ್ನು ವಿವರಿಸುತ್ತೀರಾ***

ಸಿಪಿಎಸ್‌ಟಿಯು ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಬಹುತೇಕ ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಹೆಚ್.ಎಂ.ಎಸ್., ಬೆಂಗಳೂರಿನ ಜಂಟಿ ಹೋರಾಟ ಸಮಿತಿ (ಜೆ.ಎ.ಎಫ್) ಹೈದರಾಬಾದಿನ ಸಾರ್ವಜನಿಕ ಉದ್ದಿಮೆ ನೌಕರರ ಸಂಘಟನೆಗಳ ಸಮನ್ವಯ ಸಮಿತಿ-ಹೀಗೆ ಹಲವಾರು ಮುಖಂಡರು ಭಾಗವಹಿಸಿದ್ದರು. ಕಾಂಗ್ರೆಸ್ಸಿನ ಬೆಂಬಲಿತ ಇಂಟಕ್ ಮತ್ತು ಬಿಜೆಪಿ ಬೆಂಬಲಿತ ಬಿ.ಎಂ.ಎಸ್. ನೇರವಾಗಿ ಇದರಲ್ಲಿ ಭಾಗವಹಿಸದಿದ್ದರೂ ಅವರ ಬೆಂಬಲಿಗರು ಭಾಗವಹಿಸಿದ್ದಾರೆ. ಕೇಂದ್ರ ಸರಕಾರದ ಧೋರಣೆಯ ವಿರುದ್ಧ ನೌಕರರನ್ನು ಹೋರಾಟಕ್ಕೆ ಸಜ್ಜುಗೊಳಿಸುತ್ತಾ, ಜನವರಿಯಲ್ಲಿ ಒಂದು ದಿನದ ಎಚ್ಚರಿಕೆ ನೀಡುವ ಮುಷ್ಕರ ನಡೆಸುವುದು ಹಾಗೂ ಅದಕ್ಕೂ ಸರಕಾರ ತನ್ನ ನಿರ್ಧಾರ ಬದಲಿಸದಿದ್ದಲ್ಲಿ, ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದು. ಇದಕ್ಕಾಗಿ ಹೊಸ ಸಹಸ್ರಮಾನದ ಜನವರಿ 11 ರಂದು ರಾಷ್ಟ್ರಾದ್ಯಂತ ಸಾರ್ವಜನಿಕ ಉದ್ದಿಮೆಯ ನೌಕರರ ಅಭಿಪ್ರಾಯವನ್ನು ಸಂಗ್ರಹಿಸಲಾಗುವುದು. ಹಾಗೂ ಅಭಿಪ್ರಾಯದ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು. ಇವು ಪ್ರಮುಖ ನಿರ್ಧಾರಗಳು.

● ***ಮುಷ್ಕರ ಮತ್ತು ಇತರೆ ಹೋರಾಟಗಳನ್ನು ಯಶಸ್ವಿಗೊಳಿಸಲು ಹಾಕಿಕೊಂಡ ಕಾರ್ಯಕ್ರಮಗಳೇನು?***

ನಮ್ಮ ರಾಜ್ಯವು ಸಾರ್ವಜನಿಕ ಉದ್ದಿಮೆಗಳ ಕೇಂದ್ರವಾಗಿದೆ. ಕರ್ನಾಟಕದ ಆರ್ಥಿಕ ಬೆಳವಣಿಗೆಗೆ ಇವು ಬಹಳ ಸಹಕಾರಿಯಾಗಿದೆ. ಪ್ರತಿಷ್ಠಿತ ಕೇಂದ್ರ ಉದ್ಯಮಗಳಾದ ವಿದ್ಯುಚ್ಛಕ್ತಿ ಉಪಕರಣಗಳನ್ನು ತಯಾರಿಸುವ ಬಿಹೆಚ್‌ಇಎಲ್, ರಕ್ಷಣಾ ಕೈಗಾರಿಕೆಗಳಿಗೆ ಸಂಬಂಧಪಟ್ಟ, ಟಿ.ವಿ., ಕಲರ್‌ಟ್ಯೂಬ್ ತಯಾರಿಸುವ ಭಾರತ ಎಲೆಕ್ಟ್ರಾನಿಕ್ಸ್(ಬಿಇಎಲ್) ವಿಮಾನ ಕಾರ್ಖಾನೆ(ಹೆಚ್.ಎ.ಎಲ್) ಪ್ರಸಿದ್ಧ ವಾಚುಗಳನ್ನು ತಯಾರಿಸುವ ಹೆಚ್.ಎಂ.ಟಿ. ಕೋಲಾರದ ಚಿನ್ನದ ಗಣಿ, ಬಿ.ಇ.ಎಂ.ಎಲ್. ಕೈಗಾರಿಕೆಗಳು 1 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿವೆ. ಹಾಗೆಯೇ ರಾಜ್ಯ ಸರಕಾರದ ಎನ್.ಜಿ.ಇ.ಎಫ್., ಮೈಸೂರು ಲ್ಯಾಂಪ್ಸ್, ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಕಾಗದದ ಕಾರ್ಖಾನೆ ಮತ್ತು ಅವುಗಳ ಮೇಲೆ ಅವಲಂಬಿತವಾಗಿರುವ ಸಣ್ಣ ಕೈಗಾರಿಕೆಗಳು ಲಕ್ಷಾಂತರ ಜನರಿಗೆ ಉದ್ಯೋಗ ಒದಗಿಸಿದೆ. ಸರಕಾರದ ಉದಾರೀಕರಣ ನೀತಿ, ಆಮದು ರಫ್ತು ನೀತಿ, ಅದಕ್ಷ ಆಡಳಿತ, ಭ್ರಷ್ಟಾಚಾರ ಮುಂತಾದ ಕಾರಣಗಳಿಂದ ಅವುಗಳು ಮುಚ್ಚುವ ಪರಿಸ್ಥಿತಿ ಬಂದಿದೆ. ಇಲ್ಲವೇ ರೋಗಗ್ರಸ್ತವಾಗಿವೆ.

ಇವುಗಳನ್ನು ಸಾಮಾನ್ಯ ನೌಕರರಿಗೆ ಮತ್ತು ಜನರಿಗೆ ವಿವರಿಸಬೇಕಾಗಿದೆ. ಗುಂಪು ಚರ್ಚೆ, ದ್ವಾರ ಸಭೆ, ಪ್ರಚಾರ ಪ್ರಕ್ಷೋಭೆಗಳನ್ನು ನಡೆಸಿ ಅವರ ತಿಳುವಳಿಕೆ ಹೆಚ್ಚಿಸಬೇಕಾಗಿದೆ. ಸಾರ್ವಜನಿಕ ವಲಯದ ರಕ್ಷಣೆ, ಕೇವಲ ಕೆಲಸದ ಭದ್ರತೆಯ ರಕ್ಷಣೆ ಮಾತ್ರವಲ್ಲ ದೇಶದ ಆರ್ಥಿಕ ಸ್ವಾವಲಂಬನೆಯನ್ನು ರಕ್ಷಿಸುವ ದೇಶಪ್ರೇಮಿ ಹೋರಾಟ ಎಂದು ಮನದಟ್ಟು ಮಾಡಿಕೊಡಲು ಸಮಾವೇಶಗಳನ್ನು ನಡೆಸಲಾಗುವುದು. ಹಾಗೆಯೇ ವಿದ್ಯಾರ್ಥಿ, ಯುವಜನರ, ಮಹಿಳೆಯರ ರೈತರ ಬೆಂಬಲವನ್ನು ಕೋರಿ ಹೋರಾಟ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲಾಗುವುದು.

● ***ಉದಾರೀಕರಣ ನೀತಿ ಜಾರಿಯಾದ ನಂತರ ಹಲವಾರು ಸರಕಾರಗಳು ಬಂದು ಹೋಗಿವೆ, ಏನಾದರೂ ವ್ಯತ್ಯಾಸ ಕಾಣುತ್ತಿದೆಯೇ?***


1984 ರಿಂದಲೇ ಉದಾರೀಕರಣ ನೀತಿಯ ಭಾಗವಾಗಿ ಹೊಸ ಆರ್ಥಿಕ ನೀತಿ ಜಾರಿಗೆ ಬಂದ ನಂತರ ಹಲವಾರು ಸರಕಾರಗಳು ಬಂದು ಹೋಗಿವೆ. ಆದರೆ ಇದೀಗ ಅಧಿಕಾರ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರಕಾರ ಒಂದೇ ಸಮನೆ ಅವುಗಳನ್ನು ಜಾರಿಗೊಳಿಸುತ್ತಿವೆ. ಹಿಂದಿನ ಕಾಂಗ್ರೆಸ್ ಮತ್ತು ಸಂಯುಕ್ತ ರಂಗದ ಸರಕಾರಗಳು ಪ್ರತಿಭಟನೆಗೆ ಸ್ವಲ್ಪಮಟ್ಟಿಗಾದರೂ ಮಣಿಯುತ್ತಿದ್ದವು. ಕಾರ್ಮಿಕರ, ನೌಕರರ ಒತ್ತಡ ಬಂದಾಗ ಹಿಂದೆ ಸರಿಯುತ್ತಿತ್ತು. ಉದಾ: ವಿಮಾ ಸಂಸ್ಥೆಗಳ ಖಾಸಗೀಕರಣ ಮಸೂದೆ. ಬಿಜೆಪಿ ಸರಕಾರ ರಭಸದಿಂದ ಖಾಸಗೀಕರಣವನ್ನು ಮುಂದುವರಿಸುತ್ತಿದ್ದು ಜನರ ಅಭಿಪ್ರಾಯಕ್ಕೆ ಯಾವುದೇ ಮನ್ನಣೆ ನೀಡುತ್ತಿಲ್ಲ.

ಐಎಂಎಫ್, ವಿಶ್ವಬ್ಯಾಂಕುಗಳ ಶರತ್ತುಗಳಿಗೆ, ವಿದೇಶಿ ಬಂಡವಾಳಿಗರ ಒತ್ತಡಕ್ಕೆ ತಲೆಬಾಗುವ ಈಸರಕಾರದ ವಿರುದ್ಧ ಸಾರ್ವಜನಿಕ ಉದ್ದಿಮೆ ನೌಕರರು ಐಕ್ಯತೆಯಿಂದ ಹೋರಾಟ ನಡೆಸಬೇಕಾಗಿದೆ.

ಕೊನೆಯದಾಗಿ, ಕರ್ನಾಟಕದ ಕಾರ್ಮಿಕರು ಮತ್ತು ನೌಕರರಲ್ಲಿ ನನ್ನ ವಿನಂತಿ ಏನೆಂದರೆ ಇಲ್ಲಿನ ಸಾರ್ವಜನಿಕ ಉದ್ದಿಮೆಗಳು ರಾಜ್ಯದ ಮತ್ತು ಕೇಂದ್ರದ ಆರ್ಥಿಕ ಬೆಳವಣಿಗೆಗೆ ಸಹಾಯಮಾಡಿವೆ. ಅವುಗಳನ್ನು ಉಳಿಸಿಕೊಳ್ಳುತ್ತ ಬೆಳೆಸಬೇಕಾಗಿದೆ. ಆದರೆ ಇಲ್ಲಿರುವ ಕೆಲವು ಸುಧಾರಣಾವಾದಿ ಮುಖಂಡತ್ವ ನೌಕರರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದೆ. ಆದ್ದರಿಂದ ಸಿಐಟಿಯು ಮತ್ತು ಜೆಎಂಎಫ್‌ಗೆ ಸೇರಿದ ನೌಕರ ಸಂಘಟನೆಗಳ ಮೇಲೆ ದೊಡ್ಡ ಜವಾಬ್ದಾರಿ ಇದೆ. ಈ ಶೋಷಣೆಯ ಸಮಾಜದಲ್ಲಿ ಕಾರ್ಮಿಕರು ಮಾತ್ರವಲ್ಲ ಇಡೀ ದೇಶ ಸಂಕಷ್ಟಕ್ಕೆ ಒಳಗಾಗಬೇಕಾಗುತ್ತದೆ ಎಂಬ ಕಟು ಸತ್ಯವನ್ನು ಅವರಿಗೆ ವಿವರಿಸಬೇಕಾಗಿದೆ.

1982ರಲ್ಲಿ ದೀರ್ಘ ಹೋರಾಟ ನಡೆಸಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದ ಪರಂಪರೆಯನ್ನು ತಡೆ ಹಿಡಿದ ಕೀರ್ತಿ ಸಾರ್ವಜನಿಕ ಉದ್ದಿಮೆಗಳ ನೌಕರರಿಗೆ ಸೇರುತ್ತದೆ. ಕೇಂದ್ರ ಸರಕಾರವು ತನ್ನ ನಿಲುವಿನಲ್ಲಿ ಸಂಪೂರ್ಣ ಬದಲಾವಣೆ ತರುವವರೆಗೆ ನಾವು ದೀರ್ಘ ಹೋರಾಟ ನಡೆಸಬೇಕಾಗಿದೆ. ಆ ನಿಟ್ಟಿನಲ್ಲಿ ನಾವು ಮುನ್ನಡೆಯೋಣ. ●

ಸಾಧ್ಯವಾಗದಿರುವುದು ಪ್ರಧಾನ ಮಂತ್ರಿಗಳ ಹೇಳಿಕೆಗಳು ಮತ್ತು ಆಶ್ವಾಸನೆಗಳು



ವಿಮಾನ ಅಪಹರಣ

ಮುಗಿಯದ ಪಿಡುಗು

ಡಿಸೆಂಬರ್ 24 ರ ಸಂಜೆ ಇಂಡಿಯನ್ ಏರ್ ಲೈನ್ಸ್ ವಿಮಾನದ ಅಪರಹರಣದ ಸುದ್ದಿ ಕೇಳಿ ತಲ್ಲಣಗೊಂಡ ಇಡೀ ದೇಶ ಡಿಸೆಂಬರ್ 21 ರ ಸಂಜೆ ಎಲ್ಲಾ ಅಪಹೃತರ ಬಿಡುಗಡೆ ಸುದ್ದಿ ಕೇಳಿ ನಿಟ್ಟುಸಿರು ಬಿಟ್ಟಿತು. ಆದರೆ ಎಂಟು ದಿನಗಳಲ್ಲಿ ವಾಜಪೇಯಿ ಸರಕಾರ ಈ ಬಿಕ್ಕಟ್ಟನ್ನು ಎದುರಿಸಿದ ರೀತಿ, ಕೊನೆಗೂ ಅಪಹರಣಕಾರರ ಬೇಡಿಕೆಗೆ ತಲೆಬಾಗಿ ಮೂವರು ಪ್ರಮುಖ ಉಗ್ರಗಾಮಿಗಳನ್ನು ಬಿಡುಗಡೆ ಮಾಡಬೇಕಾದ ಸನ್ನಿವೇಶ ಕಾರ್ಗಿಲ್ ಘಟನೆಯಂತೆ ದೇಶದ ಭದ್ರತೆಯ ಬಗ್ಗೆ ಪ್ರಜ್ಞಾವಂತರಲ್ಲಿ ಹಲವು ಪ್ರಶ್ನೆಗಳನ್ನು ಎಬ್ಬಿಸಿದೆ.

ಡಿಸೆಂಬರ್ 24 ಸಂಜೆ ನೇಪಾಳ ರಾಜಧಾನಿ ಕಾಠ್ಮಂಡುವಿನಿಂದ ದಿಲ್ಲಿಗೆ ಹೊರಟ ಇಂಡಿಯನ್ ಏರ್‌ಲೈನ್ಸ್‌ನ 187 ಪ್ರಯಾಣಿಕರನ್ನು ಹೊತ್ತ ವಿಮಾನವನ್ನು ಶಸ್ತ್ರ ಸಜ್ಜಿತ ಉಗ್ರಗಾಮಿಗಳು ಅಪಹರಿಸಿದ ಸುದ್ದಿ ಬಂತು. ವಿಮಾನವನ್ನು ಲಾಹೋರಿಗೆ ಒಯ್ಯಲಾಯಿತು. ಅಲ್ಲಿ ಪಾಕಿಸ್ತಾನೀ ಅಧಿಕಾರಿಗಳು ಇಳಿಯಲು ಅನುಮತಿ ನೀಡದ್ದರಿಂದ ಅಮೃತಸರಕ್ಕೆ ಬಂತು ಅನುಮತಿಯಿಲ್ಲದೇ ಇಳಿಯಿತು. ಆ ವೇಳೆಗೆ ವಿಮಾನದಲ್ಲಿನ ಇಂಧನ ಖಾಲಿಯಾಗುವ ಸೂಚನೆಯಿದ್ದುದರಿಂದ ಪೈಲಟನ್ನು ಬೆದರಿಸಿ, ನಾಲ್ಕಾರು ಪ್ರಯಾಣಿಕರನ್ನು ಕೊಲ್ಲಲಾಗಿದೆ ಎಂಬ ಸುಳ್ಳು ಮಾಹಿತಿ ನೀಡಿ ಇಂಧನ ತುಂಬುವಂತೆ ಕೇಳಲಾಯಿತು. ಸುಮಾರು 40 ನಿಮಿಷಗಳಿಗೂ ಹೆಚ್ಚು ಕಾಲ ಅಮತೃತಸರ ವಿಮಾನ ನಿಲ್ದಾಣದಲ್ಲಿದ್ದ ವಿಮಾನವನ್ನು ಇಂಧನ ತುಂಬುವ ಮೊದಲೇ ಅಪಹರಣಕಾರರು ಲಾಹೋರಿನತ್ತ ಒಯ್ಯುವಂತೆ ಮಾಡಿದರು. ಅಲ್ಲಿ ಜಬರದಸ್ತಿಯಾಗಿ ಇಳಿದು ಇಂಧನ ತುಂಬಿಸಿಕೊಂಡು ವಿಮಾನ ಅಬುಧಾಬಿಗೆ ಹೋಯಿತು. ಅಲ್ಲಿ 26 ಪ್ರಯಾಣಿಕರನ್ನು ಬಿಡುಗಡೆ ಮಾಡಲು ಜತೆಗೆ ಒಬ್ಬ ಪ್ರಯಾಣಿಕ ರೂಪಿನ್ ಕಟ್ಯಾಲ್‌ನ ಹೆಣವನ್ನು ಇಳಿಸಲಾಯಿತು. ಅಲ್ಲಿಂದ ಅಫಘಾನಿಸ್ತಾನದ ರಾಜಧಾನಿ ಕಾಬೂಲ್‌ನತ್ತ ಬಲವಂತದ ಪ್ರಯಾಣ, ಅಲ್ಲೂ ಇಳಿಯಲು ಅನುಮತಿ ನಿರಾಕರಣೆ. ಕೊನೆಗೂ ಆ ದೇಶದ ಇನ್ನೊಂದು ನಗರ ಕಂದಹಾರ್‌ನಲ್ಲಿ ವಿಮಾನ ಬಂದಿಳಿಯಿತು. ಅಲ್ಲಿಂದ ಈ ಪ್ರಕರಣದ ಇನ್ನೊಂದು ಅಧ್ಯಾಯ ಆರಂಭವಾಯಿತು.

ಅಫಘಾನಿಸ್ತಾನದಲ್ಲಿ ಅಧಿಕಾರ ನಡೆಸುತ್ತಿರುವ ತಾಲಿಬಾನ್ ತಾವು ಅಪಹರಣಕಾರರ ಜತೆ ಸಂಧಾನ ನಡೆಸುವುದಾಗಿ ಹೇಳಿದರು. ಅಪಹರಣಕಾರರು ಕಾಶ್ಮೀರಿ ಪ್ರತ್ಯೇಕತಾವಾದಿಗಳ ಉಗ್ರಗಾಮಿ ಸಂಘಟನೆ ಹರ್ಕತ್-ಉಲ್-ಅನ್ಸಾರ್‌ನ ಬಂಧಿತ ಮುಖಂಡ ಮೌಲಾನಾ ಇ ಮಸೂರ್ ಅಝರ್ ಮತ್ತಿತರ ನಾಲ್ಕು ಬಂಧಿತ ಉಗ್ರಗಾಮಿಗಳ ಬಿಡುಗಡೆ ಮಾಡದಿದ್ದರೆ ಪ್ರಯಾಣಿಕರ ಸಹಿತ ವಿಮಾನವನ್ನು ಸ್ಫೋಟಿಸುವುದಾಗಿ ಬೆದರಿಸಿದರು. ಇಲ್ಲಿ ದಿಲ್ಲಿ ವಿಮಾನ ನಿಲ್ದಾಣದಲ್ಲಿ ಕಾದಿಟ್ಟ ಪ್ರಯಾಣಿಕರ ಬಂಧುಗಳು ಸರಕಾರ ನಿಧಾನವಾಗಿ ಕೆಲಸ ನಡೆಸುತ್ತಿದೆ ಎಂದು ಪ್ರತಿಭಟನೆ ನಡೆಸಿದರು.

ಡಿಸೆಂಬರ್ 27 ರಂದು ಪ್ರಧಾನಮಂತ್ರಿಗಳು ಕರೆದ ಪ್ರತಿಪಕ್ಷಗಳ ಮುಖಂಡರ ಸಭೆಯಲ್ಲಿ ಚರ್ಚಿಸಿದ ನಂತರ ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆ ಮಾಡಲಾಯಿತು -

ಅಪಹರಣ ಪ್ರಕರಣದ ವಿವಿಧ ಆಯಾಮಗಳ ಬಗ್ಗೆ ಮಾಹಿತಿಯನ್ನು ವಿದೇಶಾಂಗಮಂತ್ರಿಗಳು ಪ್ರತಿಪಕ್ಷಗಳಿಗೆ ನೀಡಿದರು. ಪರಿಸ್ಥಿತಿ ತ್ವರಿತವಾಗಿ ಬದಲಾಗುತ್ತಿರುವುದರಿಂದ ಸರಕಾರಕ್ಕೆ ಮಾತ್ರವೇ ಯಾವಾಗ ಏನು ಕ್ರಮ ಕೈಗೊಳ್ಳಲು ಸಾಧ್ಯ ಎಂದು ಪ್ರತಿಪಕ್ಷಗಳು ಭಾವಿಸಿ, ಆದರೆ ಸರಕಾರ ಏನೇ ನಿರ್ಣಯ ಕೈಗೊಂಡರೂ ಎರಡು ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು - ಮೊದಲನೆಯದಾಗಿ, ಪ್ರಯಾಣಿಕರ, ವಿಮಾನಸಿಬ್ಬಂದಿಯ ಸುರಕ್ಷಿತತೆ ಮತ್ತು ಭದ್ರತೆ ಹಾಗೂ ಎಲ್ಲಕ್ಕೂ ಮಿಗಿಲಾಗಿ ದೇಶದ ಒಟ್ಟಾರೆ ಹಿತಾಸಕ್ತಿಯ ರಕ್ಷಣೆ'

ಭಾರತ ಸರ್ಕಾರದ ಒಂದು ತಂಡ ನಂತರ ಮಾತುಕತೆಗೆ ಕಂದಹಾರ್‌ಗೆ ಹೋಯಿತು. ಅಪಹರಣಕಾರರ ಬೇಡಿಕೆಗಳು ಹೆಚ್ಚಿದವು. ಇನ್ನೂ 30 ಬಂಧಿತ ಉಗ್ರಗಾಮಿಗಳ ಬಿಡುಗಡೆ, 20 ಕೋಟಿ ಡಾಲರು (ಸುಮಾರು 900 ಕೋಟಿ ರೂ) ಕೊಡಬೇಕು ಹಾಗೂ ಜಮ್ಮುಕಾಶ್ಮೀರದ ಹರ್ಕತ್-ಉಲ್-ಅನ್ಸಾರ್‌ನ ಮುಖ್ಯಸ್ಥ ಸಜ್ಜದ್ ಅಫ್ಘಾನಿಯ ಕಳೇಬರ ಕೊಡಬೇಕು ಎಂಬ ಬೇಡಿಕೆಯನ್ನಿಟ್ಟರು. ನಂತರ ಕೊನೆಯ ಈ ಎರಡು ಬೇಡಿಕೆಗಳನ್ನು ಕೈಬಿಡುವ ಚೌಕಾಶಿ ನಡೆಸಿದರು. ಬೇಗನೇ ಸಂಧಾನಕ್ಕೆ ಬಾರದಿದ್ದರೆ ವಿಮಾನವನ್ನು ಅಫಘಾನಿಸ್ತಾನದಿಂದ ಹಾರಿಸಲಾಗುವುದು ಎಂದು ತಾಲಿಬಾನ್ ಕೂಡಾ ಬೆದರಿಕೆ ಹಾಕಿತು. ಅಂತಿಮವಾಗಿ ಭಾರತ ಸರಕಾರ ಹರ್ಕತ್-ಉಲ್-ಅನ್ಸಾರ್‌ನ ಸ್ಥಾಪಕ ಮುಖಂಡ ಮೌಲಾನಾ ಮಸೂರ್ ಅಝರ್ ಜತೆಗೆ ಇನ್ನಿಬ್ಬರು ಪ್ರಮುಖ ಉಗ್ರಗಾಮಿ ಮುಖಂಡರಾದ ಮುಷ್ತಾಕ್ ಅಹ್ಮದ್ ಝರ್ಗರ್ ಮತ್ತು ಅಹ್ಮದ್ ಒಮರ್ ಸೈಯದ್ ಶೇಖ್‌ನನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿತು. ವಿದೇಶಾಂಗ ಮಂತ್ರಿ ಜಸ್ವಂತ್ ಸಿಂಗ್ ಅಪಹರಣಕಾರರೊಂದಿಗೆ ನೇರವಾಗಿ ಮಾತುಕತೆಯಲ್ಲಿ ಭಾಗವಹಿಸಲು ಕಂದಾಹಾರ್‌ಗೆ ಹೋಗುತ್ತೇನೆ" ಎಂದು ಡಿಸೆಂಬರ್ 31 ರ ಸಂಜೆ ಕಂದಾಹಾರ್‌ಗೆ ಹೋದರು. ಮೂವರು ಉಗ್ರಗಾಮಿ ಮುಖಂಡರನ್ನು ಒಯ್ಯಲಾಯಿತು. ತಾಲಿಬಾನ್‌ಗೆ ಅವರನ್ನು ಒಪ್ಪಿಸಲಾಯಿತು. ಇದನ್ನು ಖಚಿತ ಮಾಡಿಕೊಂಡು ಅಪಹರಣಕಾರರು ವಿಮಾನ ಬಿಟ್ಟು ಬಿಡುಗಡೆ ಹೊಂದಿದ ಮುಖಂಡರೊಡನೆ ಹೊರಟುಹೋದರು. ಒತ್ತೆಯಾಳುಗಳಾಗಿದ್ದ ಇಂಡಿಯನ್ ಏರ್‌ಲೈನ್ಸ್‌ನ ಐ.ಸಿ.-814 ಯಾನದ 159 ಪ್ರಯಾಣಿಕರು ಮತ್ತು ಸಿಬ್ಬಂದಿ 8 ದಿನಗಳ ದುಃಸ್ವಪ್ನದ ನಂತರ ಭಾರತಕ್ಕೆ ಮರಳಿದರು.

ಈಗ ಒಬ್ಬ ಪ್ರಯಾಣಿಕ ಬಿಟ್ಟು ಇತರರೆಲ್ಲರೂ ಸುರಕ್ಷಿತವಾಗಿ ಮರಳಿದ ನಂತರ ಈ ಇಡೀ ಘಟನೆಯ ಬಗ್ಗೆ ಜಿಜ್ಞಾಸೆ ಆರಂಭವಾಗಿದೆ. ಇದರಲ್ಲಿ ಮುಖ್ಯವಾದದ್ದು ಅಮೃತಸರ ವಿಮಾನ ನಿಲ್ದಾಣದಲ್ಲಿ ಕನಿಷ್ಟ 40 ನಿಮಿಷಗಳು ವಿಮಾನ ತಂಗಿದ್ದಾಗ ಏನಾದರೂ ಕಾರ್ಯಾಚರಣೆ ನಡೆಸಲು ಸಾಧ್ಯವಿರಲಿಲ್ಲವೇ? ಈ ವಿಫಲತೆಗೆ ಹೊಣೆ ಯಾರು? ಈ ಬಗ್ಗೆ ಹಲವು ಬಗೆಯ ಮಾತುಗಳು ಕೇಳಿಬರುತ್ತಿವೆ. ಈ ಎಲ್ಲಾ ಅಂಶಗಳ ಬಗ್ಗೆ ಸರಿಯಾದ ತನಿಖೆ ಆಗಬೇಕಾಗಿದೆ.

ವಿಮಾನ ಅಪಹರಣ ಮಾಡಿ ಅಫಘಾನಿಸ್ತಾನಕ್ಕೆ ಒಯ್ದ ಅಪಹರಣಕಾರರು ತಮ್ಮ ಬೇಡಿಕೆಗಳನ್ನು ಮುಂದಿಟ್ಟಾಗಲೇ ಇದರ ಹಿಂದಿದ್ದ ಆಟ ಸ್ಪಷ್ಟವಾಗಿತ್ತು. ಕಾರ್ಗಿಲ್‌ನಲ್ಲಿ ಹತೋಟಿ ರೇಖೆಯ ಒಳಗೆ ನುಸುಳಿಕೆಯೊಂದಿಗೆ ಆರಂಭವಾದ ಆಟವಿದು. ಸೇನೆ ಮತ್ತು ಪೋಲೀಸ್ ನೆಲೆಗಳ ಮೇಲೆ ಸತತವಾಗಿ ನಡೆಯುತ್ತಿರುವ ಧಾಳಿ. ವಿಶೇಷ ಕಾರ್ಯಾಚರಣೆ ಗುಂಪಿ(ಎಲ್.ಓ.ಜಿ) ನ ಮುಖ್ಯ ಕಚೇರಿಯ ಮೇಲೆ ಇತ್ತೀಚಿನ ಧಾಳಿ ಇವು ಈ ಆಟದಲ್ಲಿ ಬದಲಾದ ಕಾರ್ಯತಂತ್ರವನ್ನು ತೋರಿಸುತ್ತಿದೆ. ಸರಕಾರ ಇದನ್ನೆಲ್ಲಾ ಎದುರಿಸುವಲ್ಲಿ ವಿಫಲವಾದಂತೆಯೂ ತೋರುತ್ತಿದೆ.

ಇವೆಲ್ಲಾ ಒಂದು ಆತಂಕಕಾರಿ ಸನ್ನಿವೇಶದತ್ತ ಬೊಟ್ಟು ಮಾಡಿ ತೋರುತ್ತಿವೆ. ಇಲ್ಲಿ ಎದ್ದು ಕಾಣುವ ಸಂಗತಿಯೆಂದರೆ ಅಂತರ್‍ರಾಷ್ಟ್ರೀಯ ಭಯೋತ್ಪಾದಕತೆಯ ಬಗ್ಗೆ ದನಿ ಎತ್ತರಿಸಿ ಮಾತನಾಡುವ ಪಾಶ್ಚಿಮಾತ್ಯ ದೇಶಗಳ ಆಳರಸರ ದನಿ ಈ ಪ್ರಕರಣದಲ್ಲಿ ಮಾತ್ರ ಅಷ್ಟು ಗಟ್ಟಿಯಾಗಿ ಕೇಳಬಂದಿಲ್ಲ. ಅಮೆರಿಕಾದ ಸರಕಾರಕ್ಕೆ ಕೂಡಾ ವಿಮಾನ ಅಪಹರಣವನ್ನು ಅಧಿಕೃತವಾಗಿ ಖಂಡಿಸಲು ನಾಲ್ಕು ದಿನಗಳೇ ಹಿಡಿಸಿದಿವು! ಕೊಸೊವನ್ನರನ್ನು 'ರಕ್ಷಿಸಲು' ಯುಗೋಸ್ಲಾವಿಯದ ರಾಜಧಾನಿಯ ಮೇಲೆ ಧಾಳಿ ಮಾಡಬೇಕು ಎಂದು ಹಾರಾಡಿದ್ದ ಬ್ರಿಟನ್ ಪ್ರಧಾನಿ ಈ ಭಯೋತ್ಪಾದಕ ಕೃತ್ಯದ ವಿರುದ್ಧ ಚಕಾರವೆತ್ತಲಿಲ್ಲ.

ಭಾರತದಲ್ಲೂ ಬಿಜೆಪಿ ಅಧಿಕಾರದಲ್ಲಿಲ್ಲದೆ ಪ್ರತಿಪಕ್ಷವಾಗಿದ್ದರೆ ಹೇಗೆ ಆರ್ಭಟ ಮಾಡುತ್ತಿತ್ತು ಎಂಬುದು ಅದರ ಮಿತ್ರಪಕ್ಷ ಶಿವಸೇನೆಯ ವರ್ತನೆಯನ್ನು ನೋಡಿಯೇ ಊಹಿಸಿಕೊಳ್ಳಬಹುದು. ಅಧಿಕಾರದಲ್ಲಿ ಅದು ಭಿನ್ನವಾಗಿ ವರ್ತಿಸಿಲ್ಲ ಮಾತ್ರವಲ್ಲ, ಕಾಶ್ಮೀರ ಪ್ರಶ್ನೆ ಇನ್ನಷ್ಟು ಹದಗೆಡುವಂತೆ ಮಾಡುವುದರತ್ತವೂ ಇದು ದೇಶದ ಗಮನ ಸೆಳೆದಿದೆ. ಅಡ್ವಾಣಿಯವರ 'ಪರಿಣಾಮಕಾರಿ ಪ್ರಭುತ್ವ' 'ಬಲಿಷ್ಠ ಪ್ರಭುತ್ವ' ಇತ್ಯಾದಿ ದುಡಿಯುವ ಜನಕೋಟಿಯ ವಿರುದ್ಧ ಮಾತ್ರವೇ ಇರಬಹುದೇ?

ಅಂತೂ ಕೊನೆಗೆ ಉಗ್ರಗಾಮಿಗಳು ಪ್ರಯಾಣಿಕರನ್ನು ಬಿಡುಗಡೆ ಮಾಡಿದ್ದಾರೆ. ಇದು ಸಮಾಧಾನದ ವಿಷಯ. ಆದರೆ ಒಟ್ಟು ವಿವರಗಳನ್ನು ಪರಿಶೀಲಿಸಿದ ನಂತರವೇ ಇಡೀ ಪ್ರಕರಣದ ಒಳಹೊರಗು ಬಯಲಾಗುವುದು.

- ಕೆ.ವಿ.

ತಪ್ಪಿದ ದುರಂತ, ಹೆಚ್ಚಿದ ಆತಂಕ

ಕೊನೆಗೂ ದುರಂತವೊಂದು ತಪ್ಪಿದಂತಾಯಿತು. ಅಪಹೃತ ವಿಮಾನದ ಪ್ರಯಾಣಿಕರು ಮತ್ತು ಸಿಬ್ಬಂಧಿಯವರು ಸುರಕ್ಷಿತವಾಗಿ ಹಿಂತಿರುಗಿದ್ದು ದೇಶಕ್ಕೇ ಸಂತೋಷ ಸಂಭ್ರಮವನ್ನು ತಂದಿದೆ. ಆದರೆ ಭಾರತ ಸರ್ಕಾರವು ಅಪಹರಣಕಾರರ ಬೇಡಿಕೆಗಳನ್ನು ಇತ್ಯರ್ಥಗೊಳಿಸಿದ ರೀತಿ ಅನೇಕ ಆತಂಕದ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ.

ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸುತ್ತಿರುವ ಪಾಕಿಸ್ತಾನಿ ಮೂಲದ ತೀವ್ರಗಾಮಿ ಗುಂಪುಗಳು ವಿಮಾನ ಅಪಹರಣದ ಈ ಕೃತ್ಯವನ್ನು ಎಸಗಿವೆ. ಇದು, ಕಾಶ್ಮೀರ ಪ್ರದೇಶದಲ್ಲಿ ವಿಚ್ಛಿದ್ರಕಾರಿ ಚಟುವಟಿಕೆಗಳನ್ನು ತೀವ್ರಗೊಳಿಸುವ ಅವರ ಯೋಜನೆಯ ಭಾಗವಾಗಿದೆ. ಕಾರ್ಗಿಲ್ ಮೂಲಕ ಗಡಿಯೊಳಗೆ ನುಸುಳಲು ಅವರು ನಡೆಸಿದ ಪ್ರಯತ್ನದ ಮುಂದುವರಿಕೆಯಾಗಿದೆ. ಭಾರತದ ಜೈಲಿನಲ್ಲಿದ್ದ ಮೂವರು ಕುಖ್ಯಾತ ಭಯೋತ್ಪಾದಕರ ಬಿಡುಗಡೆಯಿಂದಾಗಿ ಕಾಶ್ಮೀರ ಕಣಿವೆಯಲ್ಲಿನ ಭಯೋತ್ಪಾದಕ ಚಟುವಟಿಕೆಗಳಿಗೆ ಭಾರೀ ಕುಮ್ಮಕ್ಕು ಸಿಕ್ಕಂತಾಗಿದೆ. ಇವರ ಬಿಡುಗಡೆಗೆ ವಾಜಪೇಯಿ ಸರ್ಕಾರ ಒಪ್ಪುವ ಮೂಲಕ ಅಪಹರಣಕಾರರಿಗೆ ಅವರ ಗುರಿಸಾಧಿಸಲು ಸಾಧ್ಯವಾಗಿಸಿದೆ. ಇದರಿಂದಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ವಿಚ್ಛಿದ್ರಕಾರಿ ಹಿಂಸೆ ತೀವ್ರವಾಗಲಿದ್ದು ರಕ್ಷಣಾ ಸಿಬ್ಬಂಧಿಗಳಲ್ಲಿ ಆತಂಕಕ್ಕೆ ಕಾರಣವಾಗಿದೆ.

ಅಪಹರಣದ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಅಂತರಾಷ್ಟ್ರೀಯ ಸಮುದಾಯದ ಪರಿಣಾಮಕಾರಿ ನೆರವು ಪಡೆಯುವಲ್ಲಿ ಭಾರತ ಸರ್ಕಾರ ವಿಫಲವಾಗಿದೆ. ಅಫಘಾನಿಸ್ತಾನದ ತಾಲಿಬಾನರ ನೈಜ ಪಾತ್ರವನ್ನು ಬಿಂಬಿಸುವಲ್ಲಿಯೂ ಸರ್ಕಾರ ಹಿಂದೇಟುಹಾಕುತ್ತಿರುವುದು ಸಂದೇಹಕ್ಕೆ ಎಡೆಮಾಡಿದೆ.

ಇಡೀ ಅಪಹರಣ ಪ್ರಕರಣದ ಬಗ್ಗೆ ಈ ಅವಧಿಯಲ್ಲಿ ಭಾರತ ಸರ್ಕಾರ ನೀಡುತ್ತಿದ್ದ ಹೇಳಿಕೆಗಳು ಪರಸ್ಪರ ವಿರೋದಾಭಾಸದಾಗಿದ್ದವು, ದಾರಿತಪ್ಪಿಸುವಂತಾಗಿದ್ದವು. ಐಎಸ್.ಐನ ಚಟುವಟಿಕೆಗಳ ಒಂದು ಪ್ರಮುಖ ಕೇಂದ್ರವಾಗಿರುವ ಕಠ್ಮಂಡುವಿನಲ್ಲಿ ಗೂಢಾಚಾರ ವ್ಯವಸ್ಥೆಯ ವಿಫಲತೆಗೆ ಸರ್ಕಾರ ವಿವರಣೆ ನೀಡಬೇಕು. ಅಮೃತಸರ ವಿಮಾನ ನಿಲ್ದಾಣದಲ್ಲಾದ ಕರ್ತವ್ಯಚ್ಯುತಿಗೆ ಸರ್ಕಾರ ಏನು ಹೇಳುತ್ತದೆ? ಆದ್ದರಿಂದ ಈ ಘಟನಾವಳಿಗಳ ಕುರಿತಾಗಿ ಉಚ್ಚಮಟ್ಟದ ಸ್ವತಂತ್ರ ವಿಚಾರಣೆ ನಡೆದು ಯಾರ್ಯಾರ ತಪ್ಪು ಎಷ್ಟೆಷ್ಟು ಎನ್ನುವುದನ್ನು ಕಂಡುಹಿಡಿಯುವುದು ಅಗತ್ಯವಾಗಿವೆ.

ಡಾ ಶಂಕರ್ ದಯಾಳ್ ಶರ್ಮ ನಿಧನ

ಭಾರತದ ಹಿಂದಿನ ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮ ಡಿಸೆಂಬರ್ 26 ರ ರಾತ್ರಿ ನಿಧನರಾದರು. ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅವರೊಬ್ಬ ಸ್ವಾತಂತ್ರ್ಯ ಹೋರಾಟಗಾರ ... ಸಾರ್ವಜನಿಕ ಜೀವನದಲ್ಲಿ ಅವರು ಧರ್ಮನಿರಪೇಕ್ಷ ಮತ್ತು ಪ್ರಜಾಸತ್ತಾತ್ಮಕ ನೀತಿಗಳಿಗೆ ದೃಢ ಬದ್ಧತೆ ತೋರಿದವರು. ಅವರು ಆಳ ಅಧ್ಯಯನ ಮತ್ತು ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಮೇಳೈಸಿದ್ದ ವ್ಯಕ್ತಿ. ... ಗಳಿಗೆಯೆಂದರೆ 1992 ರಲ್ಲಿ ಬಾಬ್ರಿ ಮಸೀದಿ ಧ್ವಂಸವಾದಾಗ ಸಂವಿಧಾನದ ಧರ್ಮನಿರಪೇಕ್ಷ ನೀತಿಗಳನ್ನು ಎತ್ತಿ ಹಿಡಿಯುವಲ್ಲಿ ಅವರು ತೋರಿದ ದೃಢ ನಿಲುವು ಅವರ ನಿಧನದಿಂದ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳನ್ನು ಮುಂದೊಯ್ದು ಹಾಗೂ ಸಾರ್ವಜನಿಕ ಜೀವನದಲ್ಲಿ ಉನ್ನತ ಮಾದರಿಯನ್ನು ಹಾಕಿಕೊಟ್ಟ ಒಬ್ಬ ಪ್ರಮುಖ ಮುಖಂಡರನ್ನು ಕಳಕೊಂಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಓದುಗರ ಗಮನಕ್ಕೆ

ವಿದ್ಯುಚ್ಛಕ್ತಿಯ ಅಡಚಣೆ ಮತ್ತು ತಾಂತ್ರಿಕ ಸಮಸ್ಯೆಯಿಂದಾಗಿ ಕಳೆದ ವಾರ ಪತ್ರಿಕೆ ಪ್ರಕಟಗೊಳ್ಳಲಿಲ್ಲ. ಇದಕ್ಕಾಗಿ ವಿಷಾಧಿಸುತ್ತೇವೆ.

- ವ್ಯವಸ್ಥಾಪಕರು

ದೇಶ ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿಡುತ್ತಿದ್ದಂತೆ, ದೇಶದ ಗಣತಂತ್ರ ಐವತ್ತು ... ನರಕಮಾಡಲು 'ಒಮ್ಮತ' ಹೊಂದಿರುವಂತೆ ಕಂಡರೆ, ಇನ್ನೊಂದೆಡೆ ಆರ್ಥಿಕ ... ತರಬಾರದು ಎಂದೂ ಹೇಳಲಾಗುತ್ತಿದೆ. ಇದರ ಹಿಂದೆ ಇರುವ ವಾಸ್ತವತೆ ಏನು? ... ದಿವಾಳಿಯೆಬ್ಬಿಸುವ ನೀತಿಗಳ ವಿರುದ್ಧ ಜನಗಳ ಪ್ರತಿರೋಧ ಹೆಚ್ಚುತ್ತದೆ. ಬಿಜೆಪಿ ... ಜನಗಳ ಈ ಹೋರಾಟದಲ್ಲಿ ಕೋಟಿಗಟ್ಟಲೆ ಭಾರತೀಯರ ಬದು...

ಹರ್ಕಿಶನ್ ಸಿಂಗ್ ಸುರ್ಜಿತ್

ಕಾಂಗ್ರೆಸ್, ಬಿಜೆಪಿ ಮತ್ತು ಮೂರನೇ ಪರ್ಯಾಯ

ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಕೂಡಾ ಆಳುವ ವರ್ಗಗಳ ಅಂದರೆ ಬಂಡವಾಳಶಾಹಿ-ಭೂಮಾಲಕ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪಕ್ಷಗಳು ಎಂದು ಮತ್ತೆ-ಮತ್ತೆ ಹೇಳುತ್ತಾ ಬಂದಿದ್ದೇವೆ. ಆದರೂ ಇವೆರಡನ್ನು ಒಂದು ವಿಷಯದಲ್ಲಿ ಮಾತ್ರ ಭಿನ್ನವಾಗಿ ಕಾಣಲೇಬೇಕಾಗುತ್ತದೆ ಎಂದೂ ಹೇಳುತ್ತಾ ಬಂದಿದ್ದೇವೆ. ಈ ವಿಷಯವೆಂದರೆ ಧರ್ಮನಿರಪೇಕ್ಷತೆ. ಆದರೆ ಇದು ಭಾರತದ ಐಕ್ಯತೆಗೆ ಬಹಳ ಮಹತ್ವದ ವಿಷಯ ಕಾಂಗ್ರೆಸ್ ಈಗಲೂ ತನ್ನ ಧರ್ಮನಿರಪೇಕ್ಷ ನೆಲೆಯನ್ನು ಉಳಿಸಿಕೊಂಡಿದೆ ಎಂದೂ ನಾವು ಹೇಳುತ್ತಿದ್ದೇವೆ. ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಈ ಪಕ್ಷ ಕೋಮುವಾದಿ ಶಕ್ತಿಗಳಿಂದ ದೂರವಿದ್ದು ಧರ್ಮನಿರಪೇಕ್ಷತೆಯನ್ನು ಪ್ರತಿಪಾದಿಸಿದ್ದರಿಂದ ಅಲ್ಪಸಂಖ್ಯಾತರು ಮತ್ತು ಇತರ ದಮನಕ್ಕೊಳಗಾದ ವಿಭಾಗಗಳನ್ನು ಅಣಿನೆರೆಸುವಲ್ಲಿ ಶಕ್ತವಾಯಿತು. ನಿಜ, ಈ ಜನವಿಭಾಗಗಳ ಹಲವು ಬೇಡಿಕೆಗಳಿಗೆ ಅದು ದನಿ ನೀಡಿದ್ದರೂ ಬಹಳಷ್ಟು ಈಗಲೂ ಈಡೇರಿಲ್ಲ. ವರ್ಷಾನುಗಟ್ಟಳೆ ಕೇವಲ ಆಶ್ವಾಸನೆಗಳನ್ನಷ್ಟೆ ಕೇಳಿ ಕೊಂಡು ಬಂದ ಜನತೆ ಕಾಂಗ್ರೆಸ್ಸಿನ ಬಗ್ಗೆ ಭ್ರಮನಿರಸನ ಹೊಂದಿದರು.

ಸಾರ್ವತ್ರಿಕ ಆಶ್ವಾಸನೆಗಳಷ್ಟೇ ಅಲ್ಲ, ತೆಲಂಗಾಣಾ ಹೋರಾಟ ಮತ್ತು ಇತರ ಹಲವು ಹೋರಾಟಗಳ ಒತ್ತಡದಿಂದಾಗಿ ಭೂಸುಧಾರಣೆ, ಕೃಷಿ ವಲಯದಲ್ಲಿ ಬದಲಾವಣೆಗಳನ್ನು ತರುವುದಾಗಿಯೂ ಕಾಂಗ್ರೆಸ್ ಭರವಸೆ ನೀಡಿತ್ತು. ಈ ನಿಟ್ಟಿನಲ್ಲಿ ಹಲವು ಶಾಸನಗಳು ಬಂದರೂ ಇವೆಲ್ಲಾ ಇನ್ನೂ ಜಾರಿಗೆ ಬಂದಿಲ್ಲ. ಈ ಎಲ್ಲಾ ಕಾರಣಗಳಿಂದ ಕಾಂಗ್ರೆಸ್ ಪಕ್ಷದ ಮುಖ್ಯ ಜನಾಧಾರವಾಗಿದ್ದ ದಲಿತರು, ಇತರ ಹಿಂದುಳಿದವರು, ಅಲ್ಪಸಂಖ್ಯಾತರು ಕಾಂಗ್ರೆಸ್‌ನಿಂದ ದೂರಹೋದರು. ಇದರಿಂದಾಗಿ ಕಾಂಗ್ರೆಸ್ ಭಾರೀ ಬೆಲೆ ತೆರಬೇಕಾಗಿ ಬಂದಿದೆ.

ಇತ್ತೀಚಿನ ಲೋಕಸಭಾ ಚುನಾವಣೆಗಳ 545 ಸ್ಥಾನಗಳಲ್ಲಿ ಕಾಂಗ್ರೆಸ್ ಗೆದ್ದದ್ದು ಕೇವಲ 113. ಕಾಂಗ್ರೆಸ್ ಅಧಿಕಾರ ಕಳಕೊಂಡದ್ದನ್ನು ಕಂಡ ಬಂಡವಾಳಶಾಹಿ-ಭೂಮಾಲಕರ ಶಕ್ತಿಗಳು ಈಗ ಬಿಜೆಪಿಯ ಹಿಂದೆ ನೆರೆದಿದ್ದಾರೆ. ಆದರೆ ಇದೊಂದು ಕೋಮುವಾದಿ ಪಕ್ಷ. ಆದರ ಹಿತಾಸಕ್ತಿಗಳು ದೇಶದ ಐಕ್ಯತೆಯ ಮತ್ತು ಒಕ್ಕೂಟ ಸ್ವರೂಪದ ಹಿತಾಸಕ್ತಿಗಳಿಗೆ ತದ್ವಿರುದ್ಧವಾದವುಗಳು. ಬಿಜೆಪಿ ಸಂಸತ್ತಿನಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಮೂಡಿ ಬಂದಿದೆ ಅಲ್ಲದೆ ಮೂಲತ: ಜಾತ್ಯಾತೀತ ಪಕ್ಷಗಳಾದ ವಿವಿಧ ಪ್ರಾದೇಶಿಕ ಪಕ್ಷಗಳೊಂದಿಗೆ ಮೈತ್ರಿಕೂಟ ರಚಿಸುವಲ್ಲಿ ಅದು ಯಶಸ್ವಿಯಾಗಿದೆ. ಈ ಯಶಸ್ಸಿಗೂ ಕಾರಣ ಕಾಂಗ್ರೆಸ್‌ನ ದೀರ್ಘಕಾಲದ ದುರಾಡಳಿತ. ಹೀಗೆ ಸ್ಥೂಲವಾಗಿ ಎರಡು ಬಂಡವಾಳಶಾಹಿ-ಭೂಮಾಲಕ ಕೂಟಗಳು ಈಗ ನಮ್ಮೆದುರು ಇವೆ.

ಎಡ, ಪ್ರಜಾಪ್ರಭುತ್ವವಾದಿ ಮತ್ತು ಧರ್ಮನಿರಪೇಕ್ಷ ಪಕ್ಷಗಳ ಒಂದು ಶಕ್ತಿಯಾಗಿ ಮೂಡಿ ಬರುತ್ತಿದೆ. ಆದರೆ ಸ್ವಂತ ಬಲದ ಮೇಲೆ ಒಂದು ಪರ್ಯಾಯವನ್ನು ಜನಗಳ ಮುಂದಿಡುವಷ್ಟು ಬಲ ಅದಕ್ಕೆ ಇನ್ನೂ ಬಂದಿಲ್ಲ. ಮೇಲೆ ಹೇಳಿದ ಎರಡು ಕೂಟಗಳೂ ಆಳುವ ವರ್ಗಗಳನ್ನೇ ಪ್ರತಿನಿಧಿಸುವ ಪಕ್ಷಗಳು ಎಂಬುದರಿಂದಾಗಿ ನಾವು ಜನಸಾಮಾನ್ಯರ ಹಿತಾಸಕ್ತಿಗಳತ್ತ ಗಮನ ನೀಡುವ ಒಂದು ಮೂರನೇ ಪರ್ಯಾಯವನ್ನು ಬೆಳೆಸಲು ಶ್ರಮಿಸುತ್ತಿದ್ದೇವೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ, ಎರಡರಿಂದಲೂ ಸಮಾನದೂರ ಇರಬೇಕು ಎಂಬ ಸಿದ್ಧಾಂತವನ್ನು ನಾವು ವಿರೋಧಿಸಿದರೂ, ಕಾಂಗ್ರೆಸ್ ಪಕ್ಷದ ವರ್ಗಗುಣದ ಬಗ್ಗೆ ನಮಗೇನೂ ಭ್ರಮೆಯಿಲ್ಲ.

ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆಯ ವಿಷಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನ ಶಾಮೀಲು ಇವೆರಡೂ ಒಂದೇ ರೀತಿಯ ಅಂದರೆ ಆಳುವ ವರ್ಗಗಳ ಹಿತಾಸಕ್ತಿಗಳನ್ನೇ ಪ್ರತಿನಿಧಿಸುವಂತವು ಎಂಬುದಕ್ಕೆ ದೊರೆತಿರುವ ಇತ್ತೀಚಿನ ನಿದರ್ಶನ. ಬಿಜೆಪಿಯ ಪ್ರಸ್ತಾವಗಳನ್ನು ಬೆಂಬಲಿಸುವಾಗ ಕಾಂಗ್ರೆಸ್ ಈ ಬಗ್ಗೆ ತಾನು ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದೇನೆ ಎಂಬ ಕಾರಣ ಮುಂದೆ ಮಾಡುತ್ತದೆ. ಆದರೆ ಇದು ಬಂಡವಾಳಶಾಹಿ-ಭೂಮಾಲಕ ವರ್ಗಗಳ ಹಿತಾಸಕ್ತಿಗಳನ್ನು ಬೆಳೆಸಲು ಒಂದು ನೆವಮಾತ್ರ. ಏಕೆಂದರೆ ಈ ಪಕ್ಷ ಮೇಲೆ ಹೇಳಿದಂತೆ ದಲಿತರು, ಹಿಂದುಳಿದವರು, ಮತ್ತಿತರ ಜನವಿಭಾಗಗಳಿಗೂ ಪ್ರಣಾಳಿಕೆಯಲ್ಲಿ ಭರವಸೆ ನೀಡಿದೆ. ಆದರೆ ಈ ಬಗ್ಗೆ ಇಂತಹ ಆಸಕ್ತಿ ಮಾತ್ರ ತೋರಿಲ್ಲ.

ಆರ್ಥಿಕ ವಿಚಾರಗಳಲ್ಲಂತೂ, ಅದರಲ್ಲೂ ಉದಾರೀಕರಣ, ಖಾಸಗೀಕರಣದ ವಿಷಯಗಳಲ್ಲಂತೂ ಎರಡು ಪಕ್ಷಗಳಲ್ಲಿ ವ್ಯತ್ಯಾಸವೇ ಇಲ್ಲ, ಬಿಜೆಪಿ ಕಾಂಗ್ರೆಸ್ಸಿಗಿಂತ ವೇಗವಾಗಿ ಈ ದಾರಿಯಲ್ಲಿ ಹೋಗುತ್ತಿದೆಯಷ್ಟೆ. ಆದ್ದರಿಂದಲೇ ಪ್ರಸಕ್ತ ಸಂಸತ್ ಅಧಿವೇಶನದ ಆರಂಭದಲ್ಲೇ ಸೋನಿಯಾ ಗಾಂಧಿಯವರು ತಮ್ಮ ಪಕ್ಷ ಈ ಸರಕಾರದ ಬಗ್ಗೆ ಸಕಾರಾತ್ಮಕ ನಿಲುವು ತಳೆಯುತ್ತದೆ ಎಂದು ಹೇಳಲಿಲ್ಲವೇ!

ಸಿಟಿಬಿಟಿ ವಿಷಯದಲ್ಲೂ ಬದಲಾವಣೆ?

ವಿದೇಶಾಂಗ ನೀತಿಯ ವಲಯದಲ್ಲಿ ಕೊರಿಯಾ ಯುದ್ಧದ ನಂತರ ಅಂದರೆ 1950 ರ ದಶಕದ ಆರಂಭದಿಂದ ವಿಶೇಷವಾಗಿ ಅಲಿಪ್ತ ಆಂದೋಲನ ಮೂಡಿಬಂದ ನಂತರ ಬಹುಪಾಲು ವಿದೇಶಾಂಗ ವಲಯದಲ್ಲಿ ಭಾರತ ಒಂದು ಸ್ವತಂತ್ರ ನೀತಿಯನ್ನು ಅವಲಂಬಿಸಿತು. ಇದರಿಂದಾಗಿ ಅಲಿಪ್ತ ಆಂದೋಲನದಲ್ಲಿ, ಶಾಂತಿಗಾಗಿ ಹಾಗೂ ಯುದ್ಧದ ವಿರುದ್ಧ ಮತ್ತು ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟಗಳಲ್ಲಿ ತೊಡಗಿದ ಜನಗಳಿಗೆ ಬೆಂಬಲ, ಸೌಹಾರ್ದ ನೀಡಿತು. ಆದರೆ ಬಿಜೆಪಿ ಈ ದೀರ್ಘಕಾಲದ ನೀತಿಗಳನ್ನು ತಿರುಗುಮುರುಗೊಳಿಸಿತು. ಅದೀಗ ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಸಂತುಷ್ಟ ಗೊಳಿಸುವ ನೀತಿ ಅನುಸರಿಸುತ್ತಿದೆ. ಮೊದಲಿಂದಲೂ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಭಾರತದ ಮೇಲೆ ಕಣ್ಣಿತ್ತು. ಈಗ ತನ್ನ ಆಕಾಂಕ್ಷೆ ಈಡೇರಿಸಿಕೊಳ್ಳುವ ಒಂದು ಅವಕಾಶ ಅದಕ್ಕೆ ದಕ್ಕಿದಂತಾಗಿದೆ. ಅಮೆರಿಕಾ ಈಗ ಭಾರತ-ಪಾಕಿಸ್ತಾನ ಸಂಬಂಧಗಳಲ್ಲಿ ಭಾರತದ ಪಕ್ಷ ವಹಿಸುತ್ತದೆ ಎಂದು ಬಿಜೆಪಿಯ ನಿರೀಕ್ಷೆ. ಆದರೆ ಇದು ಒಂದು ಭ್ರಮೆಯಷ್ಟೆ. ಏಕೆಂದರೆ ವಿಶ್ವದ ಮೇಲೆ ಯಜಮಾನಿಕೆ ನಡೆಸುವಲ್ಲಿ ತನಗೆ ಪ್ರಯೋಜನಕಾರಿ ಎಂಬ ಕಾರಣಕ್ಕೆ ಮಾತ್ರವೇ ಭಾರತ ತನ್ನ ಜತೆಗಿರಬೇಕೆಂದು ಅಮೆರಿಕಾ ಬಯಸುತ್ತದೆ. ಆದರೆ ಇದಕ್ಕಾಗಿ ಅದು ದೀರ್ಘಕಾಲದ ತನ್ನ ಮಿತ್ರನಾದ ಪಾಕಿಸ್ತಾನವನ್ನು ಕೈಬಿಡುವುದಿಲ್ಲ. ಅಷ್ಟೇ ಅಲ್ಲ, ಪಾಕಿಸ್ತಾನ ಇಸ್ಲಾಮೀ ದೇಶಗಳ ಸಂಘಟನೆಯು ಒಬ್ಬ ಮುಖಂಡನಾದ್ದರಿಂದಲೂ ಅಮೆರಿಕಾ ತನ್ನ ಪ್ರಯೋಜನದ ದೃಷ್ಟಿಯಿಂದ ಹಾಗೆ ಮಾಡುವುದಿಲ್ಲ. ಇನ್ನೂ ಕಾಶ್ಮೀರ ಒಂದು ಸ್ವತಂತ್ರ ದೇಶವಾಗ ಬೇಕೆಂಬುದೂ ಅಮೆರಿಕದ ಬಯಕೆ. ಏಕೆಂದರೆ ಅದರ ಮೂಲಕ ಈ ಪ್ರದೇಶದಲ್ಲಿ ಪ್ರಭಾವ ಬೀರಲು ಅದರಿಂದ ಸುಲಭವಾಗುತ್ತದೆ. ಇತ್ತೀಚಿಗೆ ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತ ವಹಿಸಿಕೊಂಡಾಗ ಅಮೆರಿಕಾ ಅದರೊಂದಿಗೆ ಸಂಬಂಧಗಳನ್ನು ಕಡಿದುಕೊಳ್ಳಲಿಲ್ಲ, ಆದಷ್ಟು ಬೇಗನೇ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಮತ್ತೆ ಸ್ಥಾಪಿಸಬೇಕು ಎಂದಷ್ಟೇ ಹೇಳಿದೆ ಎಂಬುದನ್ನು ಗಮನಿಸಬೇಕು. ಆದ್ದರಿಂದ ಬಿಜೆಪಿ ಈಗ ಅನುಸರಿಸುತ್ತಿರುವ ದಾರಿ ಅಪಾಯಕಾರಿ.

ಈ ಹಿನ್ನೆಲೆಯಲ್ಲಿ ಸಿಟಿಬಿಟಿಗೆ ಸಹಿ ಹಾಕುವ ವಿಷಯವನ್ನೂ ನೋಡಬೇಕು. ಜಸ್ವಂತ್ ಸಿಂಗ್ - ಟಾಲ್ಬೋಟ್ ಗುಪ್ತ ಮಾತುಕತೆಗಳಲ್ಲಿ ಸಿಟಿಬಿಟಿಗೆ ಸಹಿಹಾಕುವುದಾಗಿ ಒಪ್ಪಿಕೊಂಡ ಮೇಲೆ ವಾಜಪೇಯಿ ಸರಕಾರ ಈಗ ಈ ಬಗ್ಗೆ 'ಒಮ್ಮತ' ಕಟ್ಟುವ ಕಸರತ್ತು ನಡೆಸಿದೆ. ವಾಸ್ತವ ವಾಗಿ ಒಮ್ಮತದ ಹೆಸರಿನಲ್ಲಿ ತನ್ನ ಅಭಿಪ್ರಾಯವನ್ನು ಒಪ್ಪಬೇಕು ಎನ್ನುತ್ತಿದೆ. ಕಾಂಗ್ರೆಸ್ ಈ ಹಿಂದೆ ಯಾವುದೇ ಹಿಂಜರಿಕೆಯಿಲ್ಲದೆ ಸಿಟಿಬಿಟಿಗೆ ಸಹಿ ಹಾಕುವುದನ್ನು ವಿರೋಧಿಸಿತ್ತು. ಆದರೆ ಈಗ ಪ್ರದಾನ ಮಂತ್ರಿ ಗಳೊಂದಿಗೆ ಮಾತುಕತೆಯ ನಂತರ ಈ ವಿಷಯದಲ್ಲೂ ತನ್ನ ನಿಲುವಿನಲ್ಲಿ ಅದು ತುಸು ಬದಲಾವಣೆ ಮಾಡಿದೆ. ತನ್ನ ಸಂಪೂರ್ಣ ವಿರೋಧವನ್ನು ಬಿಟ್ಟುಕೊಟ್ಟು, ಈ ಬಗ್ಗೆ ಇನ್ನಷ್ಟು ಚರ್ಚೆ ನಡೆಯಬೇಕೆಂದು ಈಗ ಅದು ಹೇಳುತ್ತಿದೆ.

ದೊಡ್ಡ ಬಂಡವಾಳಿಗರು ಬಹುಪಾಲು ಬಿಜೆಪಿಯ ಬೆನ್ನಿಗೆ ನಿಂತಿದ್ದರೂ, ಈಗಲೂ ಅವರು ಕಾಂಗ್ರೆಸ್ ಮೇಲೂ ಪ್ರಭಾವ ಬೀರುತ್ತಿದ್ದಾರೆ. ದೊಡ್ಡ ಬಂಡವಾಳಶಾಹಿಗಳಿಗೆ ಈಗ ಅಮೆರಿಕಾದೊಂದಿಗೆ ಬಲವಾದ ಸಂಬಂಧಗಳ್ಳು ಬೆಳೆಸಬೇಕು. ಆದ್ದರಿಂದ ಅವರನ್ನು ಸಂತುಷ್ಟ ಪಡಿಸಲು ಸಿಟಿಬಿಟಿಗೆ ಸಹಿ ಹಾಕುವುದಕ್ಕೆ ಕಾಂಗ್ರೆಸ್ ಒಪ್ಪುವಂತೆ ಪ್ರಭಾವ ಬೀರುವ ಸಾಧ್ಯತೆ ಇಲ್ಲವೆಂದಲ್ಲ.

ಮುಂದಿನ ಬಜೆಟ್‌ಗೂ ಬೆಂಬಲ?

ಕಾಂಗ್ರೆಸ್ ಪಕ್ಷ ಬಿಜೆಪಿ ಸರಕಾರ ಮುಂದೆ ಮಂಡಿಸಲಿರುವ ಬಜೆಟ್ ಸಂದರ್ಭದಲ್ಲೂ ಬೆಂಬಲದ ನಿಲುವು ತಳೆಯಬಹುದು ಎಂಬ ಬಗ್ಗೆ ಸಂಕೇತಗಳಿವೆ. ಕೆಲವು ವಿಷಯಗಳಲ್ಲಿ ಬೊಬ್ಬೆ ಎಬ್ಬಿಸಿದರೂ ಕೊನೆಗೆ ಸರಕಾರದ ಬೆಂಬಲಕ್ಕೆ ನಿಂತು ಅದರ ಕ್ರಮಗಳನ್ನು ಬೆಂಬಲಿಸುವ ಲಕ್ಷಣಗಳೇ ಹೆಚ್ಚು ಕಾಣುತ್ತಿದೆ.

ಇವನ್ನೆಲ್ಲಾ ನೋಡಿದರೆ ಆರ್ಥಿಕ ಧೋರಣೆಗಳ ವಿಷಯದಲ್ಲಂತೂ ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ಕಡೆಗಿವೆ. ಏಕೆಂದರೆ ಅವೆರಡೂ ಪ್ರತಿನಿಧಿಸುವುದು ಬಂಡವಾಳಶಾಹಿ- ಭೂಮಾಲಕರ ಹಿತಾಸಕ್ತಿಗಳನ್ನೇ ಅಲ್ಲದೆ ತಾನು ಕಳಕೊಂಡ ಜನಬೆಂಬಲವನ್ನು ಮತ್ತೆ ಪಡೆಯುವುದಾಗಿ ಸಾರುತ್ತಿದ್ದರೂ ಹೀಗೆ ಮಾಡಬೇಕಾದರೆ ಜನಗಳಲ್ಲಿ ಅಸಂತುಷ್ಟಿ ಬೆಳೆಯಲು ಕಾರಣವಾದ ತನ್ನ ನೀತಿಗಳನ್ನು ಬದಲಿಸಲು ಅದು ಸಿದ್ಧವಿಲ್ಲ. ಅತ್ತ ಬಾಬ್ರಿ ಮಸೀದಿ ಧ್ವಂಸದಲ್ಲಿ ಕಾಂಗ್ರೆಸ್ ತನ್ನ ನೀತಿಗಳಿಂದಾಗಿ ಪರೋಕ್ಷವಾಗಿ ನೆರವಾದ್ದರಿಂದ ಬೇಸತ್ತು ದೂರ ಸರಿದ ಅಲ್ಪಸಂಖ್ಯಾತರಿಗೆ ಕೂಡಾ ಇನ್ನೂ ಆ ಪಕ್ಷದ ಮೇಲೆ ನಂಬಿಕೆ ಬಂದಿಲ್ಲ. ಈ ರೀತಿ ನಂಬಿಕೆ ಬರಬೇಕಾದರೆ ಅಲ್ಪಸಂಖ್ಯಾತರನ್ನು ಕೇವಲ ಓಟ್‌ಬ್ಯಾಂಕುಗಳಾಗಿ ಕಾಣುವ ಕಾಂಗ್ರೆಸ್‌ನ ಕಣ್ಣೋಟದಲ್ಲಿ ತೀವ್ರ ಬದಲಾವಣೆಗಳಾಗಬೇಕು.

> ಒಂದೆಡೆ ಬಿಜೆಪಿಯಂತಹ ಕೋಮುವಾದಿ ಪಕ್ಷ ಸರಕಾರದ ನೇತೃತ್ವ ವಹಿಸಿ ತನ್ನದೇ ಅಜೆಂಡಾ ಜಾರಿಗೆ ತರುತ್ತಿರುವಾಗ, ಕಾಂಗ್ರೆಸ್ ಅದನ್ನು ಎದುರಿಸುವ ಉತ್ಸಾಹ ತೋರದಿರುವಂತಹ ಸ್ಥಿತಿಯಲ್ಲಿ ಒಂದು ಮೂರನೇ ಪರ್ಯಾಯ ಮೂಡಿಬಂದರೆ ಮಾತ್ರವೇ ಜನಗಳಲ್ಲಿ ನಿರೀಕ್ಷೆ ಮೂಡಬಲ್ಲದು.

ಮೂರನೇ ಪರ್ಯಾಯವೇ ಐಕ್ಯಕ ಆಶಾಕಿರಣ

1996 ರಿಂದಲೇ ನಾವು ಯಾವ ಪಕ್ಷವೂ ಏಕಾಂಗಿಯಾಗಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ, ಕಾಂಗ್ರೆಸ್‌ಗಂತೂ ಸಾಧ್ಯವೇ ಇಲ್ಲ, ಸಮಿಶ್ರ ಸರಕಾರಗಳ ಅವಧಿ ಈಗ ಬಂದಿದೆ ಎಂದು ಸಿಪಿಐ(ಎಂ) ಹೇಳುತ್ತಾ ಬರುತ್ತಿದೆ. ಕಾಂಗ್ರೆಸ್ ತನ್ನದೇ ವರ್ಗ ಕಣ್ಣೋಟದ ಮಿತಿಯಲ್ಲಾದರೂ ತನ್ನ ಧೋರಣೆಗಳಲ್ಲಿ ತೀವ್ರ ಬದಲಾವಣೆ ಮಾಡಿಕೊಳ್ಳದಿದ್ದರೆ ಅದು ಇನ್ನು ಮುಂದೆ ಕೂಡಾ ಒಂದು ಸಮಿಶ್ರ ರಂಗದ ಮುಖ್ಯ ಪಕ್ಷವಾಗಿಯಷ್ಟೆ ಅಧಿಕಾರಕ್ಕೆ ಬರಲು ಸಾಧ್ಯ. ಕೇವಲ ಮುಖಂಡರ ಬದಲಾವಣೆಯಿಂದ ಜನಬೆಂಬಲ ಮರಳಿ ಬರುವುದಿಲ್ಲ. ಅದಕ್ಕೆ ಬೇಕಾಗಿರುವುದು ಧೋರಣೆಗಳಲ್ಲಿ ತೀವ್ರ ಬದಲಾವಣೆ.

ಹೀಗೆ ಒಂದೆಡೆ ಬಿಜೆಪಿಯಂತಹ ಕೋಮುವಾದಿ ಪಕ್ಷ ಸರಕಾರದ ನೇತೃತ್ವ ವಹಿಸಿ ತನ್ನದೇ ಅಜೆಂಡಾ ಜಾರಿಗೆ ತರುತ್ತಿರುವಾಗ, ಕಾಂಗ್ರೆಸ್ ಅದನ್ನು ಎದುರಿಸುವ ಉತ್ಸಾಹ ತೋರದಿರುವಂತಹ ಸ್ಥಿತಿಯಲ್ಲಿ ಒಂದು ಮೂರನೇ ಪರ್ಯಾಯ ಮೂಡಿಬಂದರೆ ಮಾತ್ರವೇ ಜನಗಳಲ್ಲಿ ನಿರೀಕ್ಷೆ ಮೂಡಬಲ್ಲದು. ಬಿಜೆಪಿ ಹಿಂದೀ ಭಾಷಿಕ ಪ್ರದೇಶದಲ್ಲಿ ತನ್ನ ಪ್ರಭಾವ ಕಳಕೊಳ್ಳುತ್ತಿದೆ ಎಂಬುದನ್ನು ಉತ್ತರ ಪ್ರದೇಶದ ಬೆಳವಣಿಗೆಗಳು ಸೂಚಿಸುತ್ತಿವೆ. ಬಿಹಾರದಲ್ಲೂ ಬಿಜೆಪಿ ನಿರೀಕ್ಷಿಸಿದಷ್ಟು ಸುಲಭವೇನಿಲ್ಲ. ಇಲ್ಲಿ ಬಿಜೆಪಿ ಕಳ... ಕೊಂಡರೆ ಪಕ್ಷದೊಳಗೆ ಭ್ರಮನಿರಸನ ಉಂಟಾಗುತ್ತದೆ.

ಆದ್ದರಿಂದ ಈಗ ಪ್ರಜಾಪ್ರಭುತ್ವವಾದಿ ಶಕ್ತಿಗಳ ಮುಂದಿರುವ ಕೆಲಸವೆಂದರೆ ಈ ಪಿಡುಗಿನ ವಿರುದ್ಧ ಹೋರಾಟ ನಡೆಸುವುದು, ಅದರೊಂದಿಗೇ ಬಿಜೆಪಿಯೊಂದಿಗೆ ನಿಮ್ಮ ಮೈತ್ರಿ ಜನಗಳ ಆಕಾಂಕ್ಷೆಗಳಿಗೆ ಅನುಗುಣವಾಗಿಲ್ಲ ಎಂದು ಅದರ ಮಿತ್ರಪಕ್ಷಗಳು ಅರಿಯುವಂತೆ ಮಾಡುವುದು. ಈ ಮಿತ್ರರು ಕೋಮುವಾದಕ್ಕೆ ಎಡೆಮಾಡಿಕೊಡುವ ವಿಷಯಗಳಲ್ಲಿ ಮಾತ್ರವಲ್ಲ, ಆರ್ಥಿಕ ವಿಷಯಗಳಲ್ಲೂ ಬಿಜೆಪಿಗಿಂತ ತಮ್ಮನ್ನು ದೂರವಿರಿಸಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಏಕೆಂದರೆ ಸರಕಾರ ತನ್ನ ಧೋರಣೆಗಳನ್ನು ಜಾರಿಗೊಳಿಸಲಾರಂಭಿಸಿದಂತೆ ಜನಗಳ ಅಸಂತೃಪ್ತಿ ಹೆಚ್ಚುತ್ತದೆ.

ಈ ನೀತಿಗಳ ವಿರುದ್ಧ ಜನಗಳ ಪ್ರತಿರೋಧ ಹೆಚ್ಚುತ್ತಿರುವಾಗ ಸಿಪಿಐ(ಎಂ) ಮತ್ತು ಎಡಪಕ್ಷಗಳು ಅದರ ಮುಂಚೂಣಿಯಲ್ಲಿರಬೇಕು, ಇತರ ಧರ್ಮನಿರಪೇಕ್ಷ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳೊಂದಿಗೆ ಐಕ್ಯ ಕಾರ್ಯಾಚರಣೆಗಳನ್ನು ಬೆಳೆಸಬೇಕು. ಈ ಕಾರ್ಯಾಚರಣೆಗಳ ಮೂಲಕ ಜನಸಮೂಹಗಳಿಗೆ ಪರಿಹಾರ ಒದಗಿಸಬಹುದಾದ ಐಕ್ಯಕ ಪರ್ಯಾಯ ಮೂಡಿಬರುತ್ತದೆ.



...ಕನ್ನು ಮುಗಿಸುತ್ತಿದ್ದಂತೆ ಒಂದೆಡೆ ಆಳುವವರ್ಗಗಳ ಎರಡು ಕೂಟಗಳು ಜನಗಳ ಬದುಕನ್ನು ...ಳಿಗೆ ದೇಶದಲ್ಲಿ ಒಮ್ಮತ ಇದೆಯೆಂದೂ, ದೇಶದ ಹಿತಕ್ಕಾಗಿ ಇದರಲ್ಲಿ ರಾಜಕೀಯ ...ಆಧುನೀಕರಿಸುವ ಹೆಸರಲ್ಲಿ ವಾಸ್ತವವಾಗಿ ದೇಶವನ್ನು ಮತ್ತು ದೇಶದ ಜನಸಾಮಾನ್ಯರನ್ನು ...ಂಗ್ರೆಸ್ ಭಾರತವನ್ನು ಮಾರಲು ಕೈ ಮಿಲಾಯಿಸಿದರೆ ಜನತೆ ಅವರಿಬ್ಬರನ್ನು ತಿರಸ್ಕರಿಸುತ್ತಾರೆ. ...ಮಸ್ಯೆಗಳಿಗೆ ಪರಿಹಾರ ನೀಡಬಲ್ಲ ಏಕೈಕ ಪರ್ಯಾಯ ಮೂಡಿಬರುತ್ತದೆ.

ಸೀತಾರಾಂ ಯೆಚೂರಿ

ಆರ್ಥಿಕವನ್ನು ರಾಜಕೀಯದಿಂದ ಪ್ರತ್ಯೇಕಿಸಬೇಕು ಎಂಬ ಆಳುವ ವರ್ಗಗಳ ರಾಜಕೀಯ

ಜನಗಳ ಅಗತ್ಯವನ್ನು ನೋಡಿಕೊಳ್ಳಲು ಸರಕಾರವೆಂಬುದಿರುತ್ತದೆ. ಆದರೆ ವರ್ಗವಿಭಜಿತ ಸಮಾಜಗಳಲ್ಲಿ ಈ ಸರಕಾರಗಳು ಅಂತಿಮವಾಗಿ ಆಳುವ ವರ್ಗಗಳ ಹಿತಾಸಕ್ತಿಗಳನ್ನೇ ರಕ್ಷಿಸುತ್ತವೆ. ಆದರೆ ಜನಸಾಮಾನ್ಯರ ಹಿತರಕ್ಷಿಸುವ ನಾಟಕವಾದರೂ ಇರುತ್ತದೆ. ಭಾರತೀಯ ದೊಡ್ಡ ಬಂಡವಾಳಶಾಹಿಗಳು ಈಗ ಇಂತಹ ನಟನೆ ಕೂಡಾ ಅಗತ್ಯವಿಲ್ಲ ಎಂದು ಪ್ರಸಕ್ತ ಸರಕಾರಕ್ಕೆ ಹೇಳುತ್ತಿದ್ದಾರೆ. ವಾಜಪೇಯಿ ಸರಕಾರ ಅದಕ್ಕೆ ಜೀ ಹುಜೂರ್ ಎನ್ನುವುದಕ್ಕಿಂತಲೂ ಮುಂದೆ ಹೋಗಿದೆ ಎಂಬುದು ಸ್ಪಷ್ಟ. ಕಾಂಗ್ರೆಸ್ ಅದರ ಹಿಂದೆ ತಮಟೆ ಬಾರಿಸುವ ಹುಡುಗನ ಪಾತ್ರ ವಹಿಸುತ್ತಿದೆ ಎಂಬುದು ಇನ್ನಷ್ಟು ಸ್ಪಷ್ಟ.

ಆರ್ಥಿಕ ಉದಾರೀಕರಣಕ್ಕೆ ಈಗ ದೇಶದಲ್ಲಿ ಒಮ್ಮತ ಏರ್ಪಟ್ಟಿದೆ- ಇದು ಆಳುವ ವರ್ಗಗಳ ಬಾಡಿಗೆ ಲೇಖಕರುಗಳ ಸಮೂಹಗಾನದ ಮೂಲಕ ಹರಡಿಸಿರುವ ಭ್ರಮೆ. ಭಾರತದ ಆಳುವ ವರ್ಗಗಳಿಗಂತೂ ಭಾರತದ ಸಂಪನ್ಮೂಲಗಳನ್ನು ಲೂಟಿ ಮಾಡಲು, ಜನಸಾಮಾನ್ಯರ ಶೋಷಣೆಯನ್ನು ತೀವ್ರಗೊಳಿಸಲು ಇದುವರೆಗೆ ಸಿಕ್ಕ ಅವಕಾಶಗಳಲ್ಲೇ ಅತ್ಯುತ್ತಮ ರಾಜಕೀಯ ಅವಕಾಶ ಈಗ ದೊರೆತಂತಿದೆ. 1991 ರಲ್ಲಿ ಕಾಂಗ್ರೆಸ್ ಉದಾರೀಕರಣ ಆರಂಭಿಸಿದ ನಂತರ ಇಂತಹ ಸುಗ್ಗಿಯ ಸಂದರ್ಭ ಅವರಿಗೆ ಎಂದೂ ಸಿಕ್ಕಿರಲಿಲ್ಲ.

ಮೊದಲನೆಯದಾಗಿ, ಅಮೆರಿಕನ್ ಸಾಮ್ರಾಜ್ಯಶಾಹಿಗೆ ವಾಜಪೇಯಿ ಸರಕಾರ ಅತ್ಯಂತ ನೆಮ್ಮದಿ ತಂದಿರುವ ಭಾರತೀಯ ಸರಕಾರ. ಪರಮಾಣು ನೀತಿಯಿಂದ ಹಿಡಿದು ಆರ್ಥಿಕ 'ಸುಧಾರಣೆ'ಗಳ ವರೆಗೆ ವಾಜಪೇಯಿ ಸರಕಾರ ಅಮೆರಿಕನ್ ಒತ್ತಡಗಳಿಗೆ ಮಣಿಯಲು ಮಾತ್ರವಲ್ಲ ಇನ್ನೂ ಮುಂದೆ ಹೋಗಿ ಸಾಮ್ರಾಜ್ಯಶಾಹಿ ಹಿತಗಳನ್ನು ಈಡೇರಿಸಲೂ ಸಿದ್ಧವಾಗಿದೆ.

ಎರಡನೆಯದಾಗಿ, ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ನಮ್ರಭಾವದಿಂದ ಅವರ ಬಾಲ ಹಿಡಿದಿದೆ. ಅದಕ್ಕೆ ಕೊಡುವ ನೆಪ-'ಬಿಜೆಪಿ ನಮ್ಮ ಆರ್ಥಿಕ ಅಜೆಂಡಾವನ್ನು ಹೈಜಾಕ್ ಮಾಡಿದೆ"! 1991-96 ರ ಅವಧಿಯಲ್ಲಿ ಕಾಂಗ್ರೆಸ್ಸಿನ ಇವೇ ನೀತಿಗಳನ್ನು ಬಿಜೆಪಿ 'ಸ್ವದೇಶಿ' ಯೆಂಬ ಅಪ್ರಾಮಾಣಿಕವಾದ, ಅಗ್ಗದ ಜನಪ್ರಿಯತೆಯ ಘೋಷಣೆ ಹಾಕಿ ವಿರೋಧಿಸಿತ್ತು. ಆದರೆ ಈಗ ಆಳುವ ಕೂಟ ಮತ್ತು ಪ್ರಮುಖ ವಿರೋಧ ಪಕ್ಷ ಭಾರತವನ್ನು ಒತ್ತೆಯಿಡುವಲ್ಲಿ ಕೈಮಿಲಾಯಿಸಿವೆ.

ಮೂರನೆಯದಾಗಿ, ಈಗ ಕಾಂಗ್ರೆಸ್ಸೇತರ, ಬಿಜೆಪಿಯೇತರ ಆಳುವ ವರ್ಗಗಳ ಪಕ್ಷಗಳಂತೂ ಈ ಅವಧಿಯಲ್ಲಿ ಲಂಗುಲಗಾಮಿಲ್ಲದ ಉದಾರೀಕರಣ ಧೋರಣೆಗಳಲ್ಲಿ ಇನ್ನಷ್ಟು ಆತುರ ತೋರುವಂತೆ ಕಾಣುತ್ತಿದೆ. 'ಸಂಯುಕ್ತರಂಗ'ದ ಅವಧಿಯಲ್ಲಿ ಪರಿಸ್ಥಿತಿ ಭಿನ್ನವಾಗಿತ್ತು. ಭಾರತೀಯ ಉದ್ದಿಮೆದಾರರು ಚಿದಂಬರಂ ಬಜೆಟ್‌ಗಳನ್ನು ಸ್ವಾಗತಿಸಿದರೂ ಅವರ ಹಲವು ಪ್ರತಿಗಾಮಿ ಕ್ರಮಗಳನ್ನು - ಉದಾ: ವಿಮಾ ಖಾಸಗೀಕರಣ- ಪಾಸು ಮಾಡಿಸಿಕೊಳ್ಳಲಾಗಿರಲಿಲ್ಲ. ಮುಖ್ಯವಾಗಿ ಎಡಪಕ್ಷಗಳ ಆಕ್ಷೇಪಗಳಿಂದಾಗಿ ಅದು ಸಾಧ್ಯವಾಗಿರಲಿಲ್ಲ. ಈಗ ಇಂತಹ ಪರಿಸ್ಥಿತಿ ಇಲ್ಲ ಎಂದು ಸಾಮ್ರಾಜ್ಯಶಾಹಿಗಳಿಗೆ, ಆಳುವ ವರ್ಗಗಳಿಗೆ ಬಹಳ ನೆಮ್ಮದಿ. ಇತ್ತೀಚಿನ ಚುನಾವಣೆಗಳಲ್ಲಿ ಎಡ ಪಕ್ಷಗಳ ಬೆಂಬಲ ಅವಲಂಬಿಸಿದ ಪಕ್ಷಗಳು ಅಥವಾ ಕೂಟ ಅಧಿಕಾರಕ್ಕೆ ಬರದಂತೆ ಸರ್ವಪ್ರಯತ್ನವನ್ನು ನಡೆಸಿದ್ದರು.

ರಾಜಕೀಯ ಎಂದರೆ ಏನೆಂದು ಗೊತ್ತೇ ಸ್ವಾಮಿ?

ಇಂತಹ ರಾಜಕೀಯ ಸನ್ನಿವೇಶದಿಂದಾಗಿ ಭಾರತೀಯ ದೊಡ್ಡ ಬಂಡವಾಳಶಾಹಿಗಳು ಮತ್ತು ಮಾಧ್ಯಮಗಳಲ್ಲಿನ ಅವರ 'ದನಿ'ಗಳು ಅರ್ಥಶಾಸ್ತ್ರವನ್ನು ರಾಜಕೀಯದಿಂದ ಪ್ರತ್ಯೇಕಿಸಿ ಎಂದು ಯಾರೂ ಕೇಳದಿದ್ದರೂ ಸಲಹೆಗಳನ್ನು ಪುಂಖಾನುಪುಂಖವಾಗಿ ಕೊಡುತ್ತಿದ್ದಾರೆ. ರಾಜಕೀಯ ಎಂದರೆ ಮೂಲಭೂತವಾಗಿ ಆರ್ಥಿಕದೊಂದಿಗೆ ಹೆಣೆದುಕೊಂಡಿರುವ ವಿಷಯ ಎಂದು ಈ ಉದಾರೀಕರಣ ಮೊದಲಿನಿಂದಲೂ ಅರ್ಥಶಾಸ್ತ್ರವನ್ನು ರಾಜಕೀಯ ಅರ್ಥಶಾಸ್ತ್ರ ಎಂದೇ ಪರಿಗಣಿಸಲಾಗಿದೆ. ಯಾವುದೇ ನಾಗರೀಕ ಸಮಾಜದಲ್ಲಿ ಜನಗಳ ಬದುಕನ್ನು, ಸ್ಥಾನಮಾನವನ್ನು ನಿರ್ಧರಿಸುವಂತದ್ದು ಆರ್ಥಿಕ ನೀತಿಗಳೇ. ಸಮಾಜದ ಯಾವ ವರ್ಗ ಅಥವಾ ವರ್ಗಗಳು ರಾಷ್ಟ್ರೀಯ ಉತ್ಪನ್ನದ ಎಷ್ಟು ಭಾಗವನ್ನು ಪಡೆಯಬೇಕೆಂದು ನಿರ್ಧರಿಸುವುದೇ ರಾಜಕೀಯ ಧೋರಣೆಗಳು. ಹೀಗಿರುವಾಗ ರಾಜಕೀಯವನ್ನು ಆರ್ಥಿಕದಿಂದ ಬೇರ್ಪಡಿಸಬೇಕು ಎಂದರೆ ಅದರ ನಿಜವಾದ ಅರ್ಥ ದೊಡ್ಡ ಬಂಡವಾಳ ಶಾಹಿಗಳು ಮತ್ತು ದೊಡ್ಡ ಕಂಪನಿಗಳು ನಡೆಸಿರುವ ಲೂಟಿಯಲ್ಲಿ ಮಧ್ಯೆ ತಲೆಹಾಕಬಾರದು ಎಂದೇ ಅಲ್ಲವೇ?

ವಾಸ್ತವವಾಗಿ ಇದೇ ದೊಡ್ಡ ರಾಜಕೀಯ, ಬಡತನ, ನಿರುದ್ಯೋಗ, ನಿರಕ್ಷರತೆ, ಕಾಯಿಲೆ, ದಾರಿದ್ರ್ಯ ಇಂತವೆಲ್ಲಾ ಮುಜುಗರದ ವಿಷಯಗಳಿಂದ, ಇವನ್ನು ಎದುರಿಸುವ ರಾಜಕೀಯ ಒತ್ತಡಗಳಿಂದ ತಪ್ಪಿಸಿಕೊಳ್ಳಬೇಕೆಂಬ ಆಳುವ ವರ್ಗಗಳ ಬಯಕೆ ಅವರ ಈ ರಾಜಕೀಯದಲ್ಲಿ ಎದ್ದು ಕಾಣುತ್ತದೆ. ಜನಸಮೂಹಗಳ ಶೋಷಣೆಗೆ ಯಾವುದೇ ಮಿತಿಯಿರಬಾರದು. ಯಾರೂ ಈ ಬಗ್ಗೆ ಪ್ರಶ್ನೆ ಕೇಳಬಾರದು- ಇದೇ ಆಳುವ, ವರ್ಗಗಳ ರಾಜಕೀಯ!

ಬಿಜೆಪಿ ಹಾಡಿಗೆ ಕಾಂಗ್ರೆಸ್ ತಮಟೆ!

ಇವರಿಗೆಲ್ಲಾ ನಾವು ಹೇಳಬೇಕಾಗಿದೆ - ಸರಕಾರದ ಅಥವಾ ಆಡಳಿತ ಕೆಲಸ ಜನಗಳ ಕಲ್ಯಾಣವನ್ನು ನೋಡಿಕೊಳ್ಳುವುದು. ಸರಕಾರವೆಂದರೆ ಕಂದಾಯ, ವೆಚ್ಚಗಳ ಲೆಕ್ಕ ನೋಡುವ ಲೆಕ್ಕಿಗನಲ್ಲ. ನಾಗರಿಕ ಸಮಾಜಗಳಲ್ಲಿ ಜನಗಳ ಅಗತ್ಯವನ್ನು ನೋಡಿಕೊಳ್ಳಲು ಸರಕಾರವೆಂಬುದಿರುತ್ತದೆ. ಆಧರೆ ವರ್ಗವಿಭಜಿತ ಸಮಾಜಗಳಲ್ಲಿ ಈ ಸರಕಾರಗಳು ಅಂತಿಮವಾಗಿ ಆಳುವ ವರ್ಗಗಳ ಹಿತಾಸಕ್ತಿಗಳನ್ನೇ ರಕ್ಷಿಸುತ್ತವೆ. ಆದರೆ ಜನಸಾಮಾನ್ಯರ ಹಿತರಕ್ಷಿಸುವ ನಾಟಕವಾದರೂ ಇರುತ್ತದೆ. ಭಾರತೀಯ ದೊಡ್ಡ ಬಂಡವಾಳಶಾಹಿಗಳು ಈಗ ಇಂತಹ ನಟನೆ ಕೂಡಾ ಅಗತ್ಯವಿಲ್ಲ ಎಂದು ಪ್ರಸಕ್ತ ಸರಕಾರಕ್ಕೆ ಹೇಳುತ್ತಿದ್ದಾರೆ. ವಾಜಪೇಯಿ ಸರಕಾರ ಅದಕ್ಕೆ ಜೀ ಹುಜೂರ್ ಎನ್ನುವುದಕ್ಕಿಂತಲೂ ಮುಂದೆ ಹೋಗಿದೆ ಎಂಬುದು ಸ್ಪಷ್ಟ. ಕಾಂಗ್ರೆಸ್ ಅದರ ಹಿಂದೆ ತಮಟೆ ಬಾರಿಸುವ ಹುಡುಗನ ಪಾತ್ರ ವಹಿಸುತ್ತಿದೆ ಎಂಬುದು ಇನ್ನಷ್ಟು ಸ್ಪಷ್ಟ.

ಹೀಗೆ ಈಗಿನ ವಾಜಪೇಯಿ ಸರಕಾರದ ಆಳ್ವಿಕೆಯಲ್ಲಿ ಭಾರತೀಯ ಗಣತಂತ್ರವನ್ನು 'ಭಾರತ ಪ್ರೈವೇಟ್ ಲಿಮಿಟೆಡ್ ಕಂಪನಿ' ಯಾಗಿ ಪರಿವರ್ತಿಸುವ ಪ್ರಕಿದ್ರಯೆಗೆ ಹೊಸ ಒತ್ತು ಸಿಕ್ಕಿದೆ. ವಾಜಪೇಯಿ ಸರಕಾರದ 'ಎರಡನೇ ತಲೆಮಾರಿನ' ಸುಧಾರಣೆಗಳು ಭಾರತೀಯ ಜನತೆಯ ಆಸ್ತಿಗಳನ್ನು ಹಾಗೂ ಭಾರತೀಯ ಆರ್ಥಿಕದ ನಿಯಂತ್ರಣವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ, ಭಾರತೀಯ ದೊಡ್ಡ ಬಂಡವಾಳಿಗರಿಗೆ ವಹಿಸಿಕೊಡುವ ಹುನ್ನಾರಗಳಷ್ಟೆ.

ಈಗ ಭಾರತ ಕೈಗೊಂಡಿರುವ ಆರ್ಥಿಕ ಉದಾರೀಕರಣದ ನೀತಿಗಳು ಒಂದೆಡೆ ಭಾರತದ ಆರ್ಥಿಕವನ್ನು ಒತ್ತೆಯಿಟ್ಟರೆ, ಇನ್ನೊಂದೆಡೆ ಬಹುಪಾಲು ಜನಗಳ ಮೇಲೆ ತೀವ್ರ ಧಾಳಿಗಳನ್ನು ಮಾಡುತ್ತಿವೆ ಎಂಬುದನ್ನು ಕಂಡಿದ್ದೇವೆ. ದೇಶದ ಸಾಲದ ಹೊರೆ 1996-97 ರ ನಂತರ ಸುಮಾರಾಗಿ ದ್ವಿಗುಣಗೊಂಡಿದೆ. ಸಾಲಕ್ಕೆ ತೆರಲಿರುವ ಬಡ್ಡಿಯ ಮೊತ್ತವೇ ...ವಾಗಿ ಭಾರತದ ಹಣಕಾಸು ಕೊರತೆಯಷ್ಟಾಗುತ್ತದೆ. ಅಂದರೆ ಸರಕಾರ ಹೇಳುವಂತೆ ಹಣಕಾಸು ಕೊರತೆ ಇಳಿಸಬೇಕಾದರೆ ಭಾರತವನ್ನು ಇನ್ನಷ್ಟು ಒತ್ತೆಯಿಡುವುದನ್ನು ನಿಲ್ಲಿಸಿದರೇ ಸಾಕು. ಆದರೆ ಈ ಒತ್ತೆಯಿಡುವ ಕೆಲಸವನ್ನು ಸರಕಾರ ಇನ್ನಷ್ಟು ತೀವ್ರಗೊಳಿಸುತ್ತಿದೆ. ನೇರ ತೆರಿಗೆಗಳ ಅಥವಾ ಆದಾಯ ತೆರಿಗೆಗಳ ವಸೂಲಾತಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಕಂಪನಿ ತೆರಿಗೆಗಳ ವಸೂಲಿಯಂತೂ ಹೆಚ್ಚಿಯೇ ಇಲ್ಲ. ಅಂದರೆ ಆದಾಯ ಕಮ್ಮಿಯಾಗುತ್ತಿದೆ. ಆಗ ಖರ್ಚು ಕಮ್ಮಿ ಮಾಡಬೇಕು ಎಂಬ ಒತ್ತಾಯವೂ ಬರುತ್ತದೆ. ಸರಕಾರ ಪ್ರಮುಖ ರಂಗಗಳಲ್ಲಿ ಖರ್ಚನ್ನು ಕಡಿತ ಮಾಡುತ್ತದೆ. ಇದರಿಂದ ನೇರ ದುಷ್ಪರಿಣಾಮ ಬೀಳುವುದು ಜನಸಾಮಾನ್ಯರ ಬದುಕಿನ ಮೇಲೆ. ಶಿಕ್ಷಣ, ಆರೋಗ್ಯ ವ್ಯವಸ್ಥೆ ಬಹುಪಾಲು ಭಾರತೀಯ ಜನಗಳ ಬದುಕಿಗೆ ನಿಲುಕಲಾರದಂತಾಗುತ್ತದೆ.

ಇದೆಂತಾ ರಾಮರಾಜ್ಯ? ಇದೆಂತಾ ವಾನರ ಸೇನೆ?

ವಾಜಪೇಯಿ ಸರಕಾರ ಈ ಜನಸಾಮಾನ್ಯರ ಅಗತ್ಯಗಳತ್ತ ಗಮನ ನೀಡುವ ಬದಲು ಇನ್ನಷ್ಟು 'ಸುಧಾರಣೆ'ಗಳ ಬಗ್ಗೆ ಶಿಫಾರಸು ಮಾಡಲು ದೊಡ್ಡ ಉದ್ದಿಮೆದಾರರ ಮುಖಂಡತ್ವದಲ್ಲಿ ಎರಡು ಗುಂಪುಗಳನ್ನು ರಚಿಸಿದೆ. ಅವರಿಗೇನು ಕೆಲಸ? ಅಂಬಾನಿಗಳು ಶಿಕ್ಷಣದ ಖಾಸಗೀಕರಣ ಹೇಗೆ ಎಂದು ಶಿಫಾರಸು ಮಾಡಬೇಕು, ಗೋಯೆಂಕಾಗಳು ಸಾರ್ವಜನಿಕ ವಲಯದ ಖಾಸಗೀಕರಣದ ಬಗ್ಗೆ ಶಿಫಾರಸು ಮಾಡಬೇಕು ಇತ್ಯಾದಿ ಇತ್ಯಾದಿ. ದೊಡ್ಡ ಬಂಡವಾಳಿಗರ ಸಂಸ್ಥೆ ಸಿ.ಐ.ಐ.(ಭಾರತೀಯ ಉದ್ದಿಮೆಗಳ ಮಹಾ ಒಕ್ಕೂಟ) ಈಗ ಬಿಜೆಪಿ ನೇತೃತ್ವದ ವಿಕೃತ 'ರಾಮರಾಜ್ಯ'ದ ವಾನರ ಸೇನೆಯಾಗಿ ಬಿಟ್ಟಿದೆ.

ಇನ್ನೂ ಭಂಡತನದ ಕೆಲಸವೆಂದರೆ ಈ ಸಿ.ಐ.ಐ.ನವರು ತಮ್ಮನ್ನೇ ಸರಕಾರದ ಒಂದು ಟಾಸ್ಕ್ ಫೋರ್ಸ್ ಆಗಿ ಮಾಡಿಕೊಂಡು ಇತ್ತೀಚಿಗೆ ಮೂರು ರಾಷ್ಟ್ರೀಕೃತ ಬ್ಯಾಂಕುಗಳನ್ನು ಮುಚ್ಚಬೇಕು, ಇತರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸರಕಾರದ ಬಂಡವಾಳವನ್ನು 25% ಕ್ಕಿಳಿಸಿ ಖಾಸಗೀಕರಿಸಬೇಕು ಎಂದು ಶಿಫಾರಸು ಮಾಡಿದ್ದಾರೆ. ಯುಕೋ ಬ್ಯಾಂಕ್, ಯುಬಿಐ ಮತ್ತು ಇಂಡಿಯನ್ ಬ್ಯಾಂಕ್ ಮುಚ್ಚುವ, ಶಿಫಾರಸಿಗೆ ಅವರು ಕೊಟ್ಟಿರುವ ಕಾರಣ ಈ ಬ್ಯಾಂಕುಗಳ 'ಫಲ ನೀಡದ ಆಸ್ತಿ'ಗಳ ಪ್ರಮಾಣ ಅಂದರೆ ಸುಸ್ತಿ ಸಾಲಗಳ ಪ್ರಮಾಣ ಬಹಳ ಜಾಸ್ತಿಯಿದೆ ಎಂದು. ಫಲ ನೀಡದ ಆಸ್ತಿ ಅಥವಾ NPA ಎಂದರೆ ಬ್ಯಾಂಕಿನ ಮರುಪಾವತಿಯಾಗದ ಸಾಲಗಳು ಸರಕಾರದ ಬಹಳ ಅರೆಮನಸ್ಸಿನಿಂದಲೇ ಕೊಟ್ಟ ಅಂಕಿ-ಅಂಶಗಳ ಪ್ರಕಾರ ರಾಷ್ಟ್ರೀಕೃತ ಬ್ಯಾಂಕುಗಳು ನೀಡಿದ ಸಾಲಗಳಲ್ಲಿ 51710 ಕೋಟಿ ರೂ. ಗಳಷ್ಟು ಇನ್ನೂ ಅವಕ್ಕೆ ಮರುಪಾವತಿಯಾಗದೆ ಉಳಿದಿವೆ. ಇದರಲ್ಲಿ 3000 ಕೋಟಿ ರೂ. ಗಳಿಗಿಂತಲೂ ಹೆಚ್ಚು ಈ ಸಿಐಐ ನ ಸದಸ್ಯರೇ ಮರುಪಾವತಿ ಮಾಡದೇ ಉಳಿಸಿಕೊಂಡ ಸಾಲಗಳು. ಇನ್ನೂ ತಮಾಶೆಯ ಸಂಗತಿಯೆಂದರೆ ಈ ಶಿಫಾರಸು ಮಾಡಿದ ಸಿಐಐನ ತಂಡದ ಒಂಭತ್ತು ಸದಸ್ಯರಲ್ಲಿ ಐದು ಸದಸ್ಯರು ತಾವೇ ಮುಚ್ಚಬೇಕೆಂದು ಶಿಫಾರಸು ಮಾಡಿದ ಬ್ಯಾಂಕುಗಳಿಗೇ 107 ಕೋಟಿ ರೂ.ಗಳಷ್ಟು ಸಾಲವನ್ನು ಮರುಪಾವತಿ ಮಾಡಬೇಕಾಗಿದೆ!

'ರಾಷ್ಟ್ರೀಯ ಹಿತಾಸಕ್ತಿ'ಯ ಹೆಸರು ಹೇಳಿಕೊಂಡು ಭಾರತೀಯ ಜನತೆಗೆ ಇಂತಹ ಮೋಸ ಮಾಡಲಾಗುತ್ತದೆ. ಸಿಐಐಗೆ ನಿಜವಾಗಿ 'ರಾಷ್ಟ್ರೀಯ ಹಿತಾಸಕ್ತಿ'ಯ ಆತಂಕ ಇದ್ದರೆ ಮೊದಲು ತನ್ನ ಸದಸ್ಯರು ರಾಷ್ಟ್ರೀಕೃತ ಬ್ಯಾಂಕುಗಳಿಗೆ ಮರುಪಾವತಿ ಮಾಡದೆ ಕಾನೂನುಬಾಹಿರವಾಗಿ ಉಳಿಸಿಕೊಂಡ ಸಾಲಗಳನ್ನು ತೀರಿಸುವಂತೆ ಹೇಳಲಿ. ಈ ರೀತಿ ಜನತೆಯ ಹಣವನ್ನು ಖಾಸಗೀ ಲಾಭಕ್ಕಾಗಿ ದುರುಪಯೋಗಪಡಿಸಿ ಕೊಳ್ಳುವ, ಸಾಲ ತೀರಿಸದೆ ಬ್ಯಾಂಕುಗಳನ್ನು ದಿವಾಳಿಯೆಂದು ಸಾರುವ ನೀತಿ ಬಾಹಿರ ಉದ್ಯಮಿಗಳಿಂದ ಠೇವಣಿದಾರರನ್ನು ಹಾಗೂ ದೇಶವನ್ನು ಉಳಿಸಿಕೊಳ್ಳಲೆಂದೇ ತಾನೇ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದ್ದು? ಠೇವಣಿದಾರರ ಜೀವಮಾನದ ಉಳಿತಾಯಗಳನ್ನೆಲ್ಲಾ ನುಂಗಿ ನೀರು ಕುಡಿದ ಆ 'ಸುವರ್ಣಯುಗ' ಕ್ಕೆ ಮತ್ತೆ ಹೋಗೋಣ ಎನ್ನುತ್ತಿದ್ದಾರೆ ಈ ಭಾರತೀಯ ಮಹಾ ಉದ್ಯಮಿಗಳು. ಶ್ರೀಯುತ ವಾಜಪೇಯಿ ಮತ್ತು ಕಂಪನಿ ಅದಕ್ಕೆ ಸಂತೋಷದಿಂದ 'ಜಿ ಹುಜೂರ್' ಎನ್ನುತ್ತಿದ್ದಾರೆ!

ಇದೇ ರೀತಿ ಖಾಸಗೀಕರಣದ ಕೂಗು ಕೂಡಾ 'ರಾಷ್ಟ್ರೀಯ ಹಿತಾಸಕ್ತಿ'ಗಳ ಹೆಸರಲ್ಲಿ ಬರುತ್ತಿದೆ. ಇಲ್ಲಿ ಕೊಡುವ ಕಾರಣ ಸಾರ್ವಜನಿಕ ವಲಯ ಅರಕ್ಷವಾಗಿದೆ ಎಂದು. ಹಗೆ ಆಪಾದಿಸುವವರು ಯಾರು? ಆರು ಲಕ್ಷ ಘಟಕಗಳು ರೋಗಗ್ರಸ್ತವಾಗಿರುವ ಅಥವಾ ಮುಚ್ಚಿರುವ ಖಾಸಗೀ ಕಂಪನಿ ವಲಯದವರು. ಇದು ಅವರ ದಕ್ಷತೆಯ ಪ್ರಮಾಣ!

ಹೀಗೆ 'ಎರಡನೇ ತಲೆಮಾರಿನ ಸುಧಾರಣೆಗಳು' ಭಾರತದ ಅಳಿದುಳಿದ ಆಸ್ತಿಗಳನ್ನೆಲ್ಲಾ ಮಾರುವ ನಗ್ನ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಭಾರತೀಯ ಜನಗಳ ಶೋಷಣೆಯನ್ನು ತೀವ್ರಗೊಳಿಸಬಯಸುವ ಭಾರತೀಯ ಆಳುವ ವರ್ಗಗಳ ವರ್ಗ ಆಳ್ವಿಕೆಯ ನಗ್ನ ಅಭಿವ್ಯಕ್ತಿ ಇದು. ಆರ್ಥಿಕವನ್ನು ರಾಜಕೀಯದಿಂದ ಬೇರ್ಪಡಿಸುವ ಪ್ರಯತ್ನದಲ್ಲಿ ಅವರು ಮಾಡುತ್ತಿರುವುದು ಅಮಾನವೀಯ ವರ್ಗ ಆಳ್ವಿಕೆಯಿಂದ ಜನಸಾಮಾನ್ಯರ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ. ಅವರ ಪ್ರಕಾರ ರಾಜಕೀಯವೆಂದರೆ ಜನಸಮೂಹಗಳ ಜೀವನದ ಮಟ್ಟವನ್ನು ಏರಿಸುವಂತಹ ಅತ್ಯಂತ ಮೂಲಭೂತ ಪ್ರಶ್ನೆಗಳಿಗೆ ತಲೆಕೆಡಿಸಿಕೊಳ್ಳದೆ ಮಂದಿರ, ಮಸೀದಿ, ಮೀಸಲಾತಿ ಇತ್ಯಾದಿಗಳಿಂದಲೇ ತೃಪ್ತಿ ಪಡುವುದು ಇದನ್ನೇ ನಾವು ಆಳುವ ವರ್ಗದ ರಾಜಕೀಯ ಎನ್ನುವುದು ಜನಸಾಮಾನ್ಯರ ಅಗತ್ಯಗಳನ್ನು ನಿರ್ಲಕ್ಷಿಸಬೇಕು, ಅವರ ಸಂಕಟಗಳನ್ನು ಹೆಚ್ಚಿಸಬೇಕು ಎಂಬ ರಾಜಕೀಯ ಇದು.

ಈ 'ಸುಧಾರಣೆ'ಗಳನ್ನು ಒಯ್ಯುತ್ತಿರುವ ವೇಗ ಸಾಮ್ರಾಜ್ಯಶಾಹಿಗಳ ಮತ್ತು ಭಾರತೀಯ ಆಳುವ ವರ್ಗಗಳ ಹತಾಶೆಯನ್ನು ಸೂಚಿಸುತ್ತದೆ. ಭಾರತೀಯ ಜನತೆ ಈ ರೀತಿ ನಮ್ಮ ಆರ್ಥಿಕವನ್ನು ಒತ್ತೆ ಇಡಲು ಬಿಡುವುದಿಲ್ಲ. ಬಿಜೆಪಿ ಮತ್ತು ಕಾಂಗ್ರೆಸ್ ಭಾರತವನ್ನು ಮಾರಲು ಕೈಮಿಲಾಯಿಸಿದರೆ ಜನತೆ ಅವರಿಬ್ಬರನ್ನು ತಿರಸ್ಕರಿಸುತ್ತಾರೆ. ದೇಶದ ಹಿತಾಸಕ್ತಿಗಳೇ, ಈ ದೇಶದ ಶತಕೋಟಿ ಜನಗಳ ಬದುಕೇ ಪರಮೋಚ್ಚ ಎಂದು ನಂಬಿರುವ ದೇಶಪ್ರೇಮಿ ಭಾರತಿಯರೆಲಾಈ 'ಸುಧಾರಣೆ' ಗಳನ್ನು ವಿರೋಧಿಸಲು ಒಂದಾಗಿ ಎದ್ದು ನಿಲ್ಲಬೇಕು. ಏಕೆಂದರೆ ಇವು ಭಾರತವನ್ನು ಆಧುನೀಕರಿಸುವ ಹೆಸರಲ್ಲಿ ವಾಸ್ತವವಾಗಿ ಕೊನೆಗೆ ಭಾರತವನ್ನು ಮತ್ತು ಅದರ ಜನಗಳನ್ನು ದಿವಾಳಿಯೆಬ್ಬಿಸುವಂತವು.





ವರ್ತೂರು ಕ್ಷೇತ್ರದ ನಾಗರಿಕ ಬವಣೆಗಳು

ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ವರ್ತೂರು ವಿಧಾನ ಸಭಾ ಕ್ಷೇತ್ರವು ಸುಮಾರು ಐದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ನಾಲ್ಕು ಲಕ್ಷದ 20 ಸಾವಿರ ಮತದಾರರು ಈ ಕ್ಷೇತ್ರದಲ್ಲಿ ಹರಡಿಕೊಂಡಿದ್ದಾರೆ. ಪ್ರಮುಖವಾದ ಎಲ್ಲ ರಾಜಕೀಯ ಪಕ್ಷಗಳ ರಾಜಕಾರಣಿಗಳು ಈ ಕ್ಷೇತ್ರದಲ್ಲಿ ಅಧಿಕಾರದ ರುಚಿ ಅನುಭವಿಸಿದ್ದಾರೆ. ಆದರೆ ರಾಜಕಾರಣದ ರುಚಿ ಸಾಮಾನ್ಯ ಜನತೆಗೆ ದಕ್ಕದಾಗಿದೆ.

ಇಡೀ ವರ್ತೂರು ಕ್ಷೇತ್ರವನ್ನು ಸುತ್ತಿ ಬಂದರೆ ಇಂದಿಗೂ ನಾಗರಿಕರ ಬವಣೆಗಳು ಕಣ್ಣುಕುಕ್ಕುತ್ತವೆ. ನೀರು, ಶೌಚಾಲಯ, ವಿದ್ಯುದ್ದೀಪ, ಚರಂಡಿ, ಕಸದ ವಿಲೇವಾರಿ, ಸ್ಲಂ ನಿವಾಸಿಗಳಿಗೆ ಹಕ್ಕು ಪತ್ರ ಬಸ್ಸಿನ ಸೌಕರ್ಯ, ರೇಷನ್ ಕಾರ್ಡು ಮುಂತಾದವುಗಳ ಸಮರ್ಪಕ ವ್ಯವಸ್ಥೆಯಿಲ್ಲದೆ ಜನತೆ ಪರಿತಪಿಸುತ್ತಿದ್ದಾರೆ.

ಪಾಪ ಪುಣ್ಯ ಹಣೆಬರಹಕ್ಕೆ ಶಾಪ ಹಾಕಿ ಸುಸ್ತಾಗಿರುವ ನಾಗರೀಕರು ಈಗೀಗ ಸಮಸ್ಯೆಗಳ ಮೂಲವನ್ನು ಅರಿಯುವ ಪ್ರಯತ್ನ ಮಾಡುತ್ತಿದ್ದಾರೆ. ಕಷ್ಟಗಳ ಕೂಪಕ್ಕೆ ತಳ್ಳಿದವರು ಯಾರು ಸದಾಕಾಲ ವಂಚಿಸುತ್ತಲೇ ಹಣೆಬರಹದ ಪುರಾಣ ಕಟ್ಟುತ್ತಿರುವವರು ಯಾರು ಎನ್ನುವ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಿರುವ ಜನತೆ ತಮ್ಮ ಬವಣೆಗಳ ವಿರುದ್ಧ ಒಳ್ಳೆಯ ದಿನಗಳಿಗಾಗಿ ಸಜ್ಜಾಗಳಾಗಿ ಪ್ರತಿಭಟನೆಗಳಿಗೂ ಅಣಿ ನೆರೆದಿದ್ದಾರೆ.

ನೀರಿಗಾಗಿ ಕಣ್ಣೀರಿಡುವ ನೀರೆಯರು

ನೀರಿನಿಂದ ನಾಗರೀಕತೆ ಎಂಬ ಮಾತಿಗೆ ತದ್ವಿರುದ್ಧ ಈ ವರ್ತೂರು ಕ್ಷೇತ್ರ. ಕ್ಷೇತ್ರದಲ್ಲಿ ಎರಡು ನಗರಸಭೆಗಳು ಆಡಳಿತದಲ್ಲಿವೆ. ಒಂದು ಕೆ. ಆರ್. ಪುರಂ ನಗರ ಸಭೆ ಮತ್ತೊಂದು ಮಹದೇವಪುರ ನಗರ ಸಭೆ. ಎರಡೂ ನಗರಸಭೆಗಳು, ವಿಧಾನಸಭಾ ಲೋಕಸಭಾ ಸದಸ್ಯರು ಕ್ಷೇತ್ರದಲ್ಲಿ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ವಹಿಸಲಿಲ್ಲವೆಂದರೆ ಜನರಿಗೆ ಬದುಕುವ ಭರವಸೆ ಎಲ್ಲಿಂದ ಬರಬೇಕು ಅಂದಾಜು ಮಾಡಿ. ಇತ್ತಕಡೆ ಕಾರ್ಪೋರೇಷನ್ ನೀರೂ ಇಲ್ಲ, ಅತ್ತಕಡೆ ಸಿ.ಎಂ.ಸಿ.ಗಳ ಲಕ್ಷ್ಯವೂ ಇಲ್ಲ ಹೆಂಗಸರ ಕಣ್ಣೀರಿಗೆ ಕೊನೆಯೂ ಇಲ್ಲ ಎಂಬಂತಾಗಿದೆ ಅಲ್ಲಿನ ಸ್ಥಿತಿ.

ಖಾಸಗಿ ಮನೆಗಳು ಹಾಗೂ ತೋಟಗಳ ಮೂಲಕ ನೀರು ಸರಬರಾಜು ಮಾಡುವ ಮಾಲೀಕರು ಒಂದು ವಾರಕ್ಕೊಮ್ಮೆ ನೀರು ಬಿಟ್ಟು ಕೊಡಕ್ಕೆ 25 ಪೈಸೆಯಂತೆ ಹಣ ವಸೂಲಿ ಮಾಡುವುದು ಕ್ಷೇತ್ರದ ತುಂಬೆಲ್ಲಾ ಮಾಮೂಲಿ ಸಂಗತಿ. ಕೆಲವು ಪ್ರದೇಶಗಳಲ್ಲಿ (ಉದಾ : ಉದಯನಗರ) ನೀರು ಸರಬರಾಜುದಾರರು ನೀರನ್ನು ಬಿಟ್ಟಾಗ ಹಿಡಿದು ತುಂಬಿಸಿಕೊಳ್ಳಬೇಕು. ತಿಂಗಳಿಗೆ ನೂರು ರೂಪಾಯಿಗಳನ್ನು ಬಾಯ್ಮುಚ್ಚಿಕೊಂಡು ಕೊಡಬೇಕು. ಸದ್ದು ಮಾಡಿದರೆ ನೀರು ಕಟ್, ಬೇರೆ ಬದಲಿ ವ್ಯವಸ್ಥೆಯ ಪ್ರಶ್ನೆಯೇ ಇಲ್ಲ. ಒಂದೊಂದು ಏರಿಯಾಗಳಿಗೆ ಒಬ್ಬೊಬ್ಬರು ನೀರಿನ ಬಾಸ್ಗಳು. ಏಕಚಕ್ರಾಧಿಪತಿಗಳು. ಸ್ವಂತ ಮನೆಗಳಿಲ್ಲದ ಬಾಡಿಗೆದಾರರ ಪರಿಸ್ಥಿತಿಯನ್ನು ನೆನೆದರೆ ಮಾತು ಗೊತ್ತಿಲ್ಲದ ಶಿಲಾಯುಗದ ಜನತೆ ನೆನಪಾಗುತ್ತಾರೆ.

ಇಡೀ ಕ್ಷೇತ್ರದಲ್ಲಿ ಎಲ್ಲೂ ಸಹ ಒಂದೇ ಒಂದು ಸಾರ್ವಜನಿಕ ಕೊಳಾಯಿಗಳಿಲ್ಲ. ಉಚಿತವಾಗಿ ನೀರನ್ನು ಒದಗಿಸಿ ಬಡಬಗ್ಗರಿಗೆ ನೆರವು ನೀಡುವ ಉದಾಹರಣೆಗಳಿಲ್ಲ. ಕೆಲವು ಕಡೆ ಕೊಳವೆ ಬಾವಿಗಳನ್ನು ತೋಡಿಸಲಾಗಿದೆ. ಒಂದು ಬಿಂದಿಗೆ ನೀರನ್ನು ತುಂಬಿಸಲು ಒಂದು ಗಂಟೆ ಒತ್ತಬೇಕು. ಮೇಲಾಗಿ ಕಡು ಉಪ್ಪು ನೀರು ಕಿಲುಬು ವಾಸನೆ. ಪ್ರಭಾವಿ ವ್ಯಕ್ತಿಗಳ ಮನೆಗಳ ಮುಂದೆಯೇ ಕೊಳವೆ ಬಾವಿಗಳನ್ನು ಹಾಕುವ ಪರಿಪಾಠವಿರುವುದರಿಂದ ನೀರನ್ನು, ಭೂಮಿಯನ್ನು ಪರೀಕ್ಷಿಸಿ ಬಾವಿ ಕೊರೆವ ಪ್ರಶ್ನೆ ಬರುವುದೇ ಇಲ್ಲ. ಹೀಗಾಗಿ ಬಹುತೇಕ ಕಡೆಗಳಲ್ಲಿ ಯೋಗ್ಯವಾದ ನೀರನ್ನು ಪೂರೈಸುವ ಕೊಳವೆ ಬಾವಿಗಳು ಇಲ್ಲವಾಗಿವೆ.

ನೀರಿಗಾಗಿ ಪ್ರಾರಂಭವಾದ ಜಗಳಗಳು ಕೊಲೆಯಲ್ಲಿ ಅಂತ್ಯಗೊಂಡ ಉದಾಹರಣೆಗಳು ನಮ್ಮ ಮುಂದಿವೆ. ಪೊಲೀಸ್ ಠಾಣೆಗಳಲ್ಲಿ ನೂರಾರು ಕೇಸುಗಳು ನೀರಿನ ಕಾರಣಕ್ಕಾಗಿ ದಾಖಲುಗೊಂಡಿವೆ. ನೀರಿಗಾಗಿನ ಜಗಳಗಳು ಕೋರ್ಟಿನ ಕಟಕಟೆಯನ್ನು ಪ್ರವೇಶಿಸಿವೆ. ಇಷ್ಟಾದರೂ ನೀರು ಪೂರೈಕೆಯ ಬಗ್ಗೆ ಸಂಬಂಧಿಸಿದ ಯಾರೊಬ್ಬರು ತಲೆ ಕೆಡಿಸಿಕೊಳ್ಳುತ್ತಿಲ್ಲ. ಬದಲಿಗೆ ಬೆಂಕಿ ಬಿದ್ದ ಮನೆಯಲ್ಲಿ ಜಂತಿ ಇರಿಯುವ ಕೆಲಸ ಮಾಡುತ್ತಿದ್ದಾರೆ. ಹುಟ್ಟು, ಸಾವು, ಜಗಳ ಕದನ ಎಲ್ಲದರಿಂದಲು ರಾಜಕೀಯ ಲಾಭ ಮಾಡುವ ಮಂದಿ ಕುಡಿಯುವ ನೀರನ್ನು ರಾಜಕೀಯಕ್ಕೆ ಸ್ವಾಹ ಮಾಡುತ್ತಿದ್ದಾರೆ. ನೀರಿನ ಧೊರೆಗಳು ರಾಜಕಾರಣಿಗಳು, ಸ್ಥಳೀಯ ಪುಢಾರಿಗಳು ಎಲ್ಲರೂ ಸೇರಿ ಜನಸಾಮಾನ್ಯರ ಮೇಲೆ ಸವಾರಿ ನಡೆಸುತ್ತಲೇ ಬಂದಿದ್ದಾರೆ.

ಈ ವಿಷ ವರ್ತುಲವನ್ನು ಭೇದಿಸಿ ಸ್ವಲ್ಪ ಮಟ್ಟಿಗಾದರು ತಂಪೆರೆಯುವ ಪ್ರಯತ್ನ ಮಾಡಿದ್ದರು ಹಿಂದೊಮ್ಮೆ ಸಿಪಿಎಂ ಪಕ್ಷದಿಂದ ಆರಿಸಿ ಬಂದಿದ್ದ ಶಾಸಕರು. ಚುನಾವಣಾ ಸಂದರ್ಭದಲ್ಲಿ ಪ್ರಚಾರಕ್ಕೆಂದು ಹಳ್ಳಿಗಳಿಗೆ ಹೋದಾಗ ಹಳ್ಳಿಗಳ ಜನ ಈ ಬಗ್ಗೆ ನೆನೆಪಿಸಿಕೊಳ್ಳುತ್ತಿದ್ದರು. ಸೂರ್ಯನಾರಾಯಣರಾವ್ ಕಾಲದ ಕಿರು ನೀರು ಯೋಜನೆ ಕೊಳವೆ ಬಾವಿನಲ್ಲಿ ಎಂದು ಹೇಳುತ್ತಾ ನಂತರ ಬಂದವರು ನೀರಿನ ಬಗ್ಗೆ ಯೋಚಿಸಲಿಲ್ಲ ಬಿಡಿ ಎಂದು ಹೇಳಿದ್ದೂ ಉಂಟು. ಎರಡೇ ವರ್ಷದ ಅಧಿಕಾರಾವಧಿಯಲ್ಲಿ ಶಕ್ತಿಮೀರಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ ಕಾಂ॥ ಸೂರಿಯವರನ್ನು ಜನತೆ ಮರೆತಿಲ್ಲ. ಜನತೆಯ ಹಿತಾಸಕ್ತಿಗಳಿಗೆ ಬದ್ದವಾಗಿ ದುಡಿಯುವ ರಾಜಕೀಯ ಪಕ್ಷಗಳು ಹಾಗೂ ರಾಜಕಾರಣಿಗಳಿಂದ ಮಾತ್ರ ಬವಣೆಗೆ ಮುಕ್ತಿ ಎಂಬುದಕ್ಕೆ ಇದೊಂದು ಸಣ್ಣ ಉದಾಹರಣೆ ಮಾತ್ರ.

ಕಸದ ತೊಟ್ಟಿ ಚರಂಡಿ ಎರಡೂ ಒಂದೇ

ಕಸ ಬಿಸಾಡಲು ಯೋಗ್ಯವಾದ ತೊಟ್ಟಿಗಳನ್ನು ಎಲ್ಲಿಯೂ ವ್ಯವಸ್ತೆಗೊಳಿಸಿಲ್ಲ. ಕಸ, ಕಡ್ಡಿ, ತ್ಯಾಜ್ಯ ವಸ್ತುಗಳನ್ನೆಲ್ಲಾ ಒಂದೆಡೆ ಹಾಕಿ ಸಮಯಕ್ಕೆ ಸರಿಯಾಗಿ ವಿಲೇವಾರಿ ಮಾಡಿ ಪರಿಸರ ನೈರ್ಮಲ್ಯ ಕಾಪಾಡುವ ವಿಚಾರವಂತು ಕನಸಿನ ಮಾತೇ ಆಗಿದೆ.

ತೊಟ್ಟಿಗಳಿಲ್ಲದ ಕಾರಣ ಕಸವನ್ನು ಚರಂಡಿಗಳಲ್ಲೇ ಬಿಸಾಡುವ ಅನಿವಾರ್ಯತೆ ಅಲ್ಲಿ ಸೃಷ್ಟಿಯಾಗಿದೆ. ಚರಂಡಿ ತುಂಬಿದ ನಂತರ ಕಸವನ್ನು ಕೊಳಚೆಯನ್ನು ತೆಗೆದು ರಸ್ತೆ ಬದಿ ಸುರಿಯುವುದು ಅದು ರಸ್ತೆಯಲ್ಲೆಲ್ಲಾ ಹರಡಿಕೊಂಡು ಅಲ್ಲೇ ಕೊಳೆತು ನಾರುವುದು ಎಲ್ಲೆಲ್ಲೂ ಕಾಣುವ ದೃಶ್ಯ.

ಚರಂಡಿಯ ನೀರು ಹರಿದು ಹೋಗುವ ವ್ಯವಸ್ಥೆ ಇಲ್ಲವೇ ಇಲ್ಲ. ಮನೆಗಳ ಮುಂದೆ ಗುಂಡಿಗಳನ್ನು ತೋಡುವುದು ಅದು ತುಂಬಿದ ನಂತರ ನೀರನ್ನು ಡಬ್ಬಗಳಲ್ಲಿ ತುಂಬಿಸಿ ಖಾಲಿ ಇರುವ ಜಾಗಗಳಲ್ಲಿ ಸುರಿಯುವುದು ಅಲ್ಲಿನ ಜನರಿಗೆ ಅಭ್ಯಾಸವಾಗಿ ಹೋಗಿದೆ. ಮಳೆಗಾಲ ಬಂತೆಂದರೆ ಚರಂಡಿಯ ನೀರು ರಸ್ತೆಯ ಮೇಲೆಲ್ಲಾ ಹರಿದಾಡುವುದರಿಂದ ಓಡಾಡಲು ಅತೀವ ಹಿಂಸೆಯಾಗುತ್ತದೆ. ಇಂತಹ ವಾತಾವರಣದಿಂದ ಹಲವಾರು ಸಾಂಕ್ರಾಮಿಕ ರೋಗಗಳ ಭೀತಿ ಯಾವಾಗಲೂ ಕಾಡುತ್ತಲೇ ಇರುತ್ತದೆ. ಹಲವಾರು ನಿವಾಸಿಗಳು ಡ್ರೈನೇಜ್ ವ್ಯವಸ್ಥೆಯಿಲ್ಲದ ಕಾರಣ ಲೆಟ್ರಿನ್ ತುಂಬಿದ ಕೂಡಲೇ ತೆಗೆದು ರಸ್ತೆಯಲ್ಲಿ ಸುರಿಯುತ್ತಾರೆ. ಅಶ್ವಥನಗರ, ವಿಜಿನಾಪುರ, ಜ್ಯೋತಿಪುರ, ಉದಯನಗರ ಕೆ.ಆರ್. ಪುರ, ಸಂಜಯನಗರ ಮುಂತಾದ ಸ್ಲಂ - ದೇಶಗಳ ಒಳ ಹೊಕ್ಕರೆ ವಾಕರಿಕೆ ಬಂದು ಮೂರ್ಛೆ ಹೋಗುವಂತಾಗುತ್ತದೆ. ಅಧಿಕಾರಿಗಳಾಗಲಿ ರಾಜಕಾರಣಿಗಳಾಗಲಿ ಮತ ಕೇಳುವ ಸಂದರ್ಭದಲ್ಲಿ ಮಾತ್ರ ಇಂತಹ ಪ್ರದೇಶಗಳನ್ನು ನೆನಪುಮಾಡಿಕೊಳ್ಳುತ್ತಾರೆ. ನಾಗರೀಕ ಸೌಲಭ್ಯಗಳನ್ನು ಕಲ್ಪಿಸಬೇಕೆನ್ನುವ ಆಲೋಚನೆ ಅಪ್ಪಿ-ತಪ್ಪಿಯೂ ಅವರಲ್ಲಿ ನುಸುಳುವುದಿಲ್ಲ. ಶೌಚಾಲಯಗಳ ಸೌಲಭ್ಯವಿಲ್ಲದ ಸಾವಿರಾರು ಮಂದಿ ಮಹಿಳೆಯರ ಪಾಡು ನಾಗರೀಕ ಸಮಾಜ ತಲೆತಗ್ಗಿಸುವಂತಹ ವಿಚಾರ.

ವರದಿ : ಪ್ರಭಾ ಮತ್ತು ಗೌರಮ್ಮ

ಶೌಚಾಲಯದಂತಹ ಕನಿಷ್ಠ ಸೌಲಭ್ಯವನ್ನಾದರೂ ಇಲ್ಲಿನ ಜನರಿಗೆ ಒದಗಿಸಿದ್ದರೆ ಐವತ್ತರ ಹರೆಯದ ಸ್ವತಂತ್ರ ಭಾರತದ ಬಗ್ಗೆ ಆ ಜನ ಹೆಮ್ಮೆ ಪಡುತ್ತಿದ್ದರೇನೊ.

ಹತ್ತಾರು ಜೀವಗಳನ್ನು ಬಲಿತೆಗೆದುಕೊಂಡ ಸೇತುವೆ

ಬೆಂಗಳೂರಿನಿಂದ ಕೊಲಾರಕ್ಕೆ ಹೋಗುವ ರಸ್ತೆಯಲ್ಲಿ ಉದಯನಗರದ ಸಮೀಪ ಸೇತುವೆ ಬಂದಿತ್ತು. ಅತ್ಯಂತ ಕಿರಿದಾಗಿದ್ದ ಆ ಸೇತುವೆ ಅಪಘಾತಗಳ ಸೇತುವೆಯೆಂದೇ ಹೆಸರಾಗಿತ್ತು. ಹತ್ತಾರು ಮಂದಿಯ ಜೀವ ಬಲಿಯಾಗುತ್ತಿದ್ದರೂ ಸೇತುವೆಯನ್ನು ವಿಸ್ತಾರ ಮಾಡುವ ಗೋಜಿಗೆ ಆಳುವ ಜನರ ಹೋಗಿರಲಿಲ್ಲ. ರೊಚ್ಚಿಗೆದ್ದ ಜನರು ಡಿವೈಎಫ್‌ಐ ನಂತಹ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಹಲವಾರು ಬಾರಿ ಪ್ರತಿಭಟನೆ ಮಾಡಿದ ನಂತರ ಈಗಷ್ಟೇ ವಿಸ್ತಾರಗೊಳಿಸುವ ಕೆಲಸ ನಡೆಯುತ್ತಿದೆ. ಆಮೆ ಗತಿಯಲ್ಲಿ ನಡೆಯುತ್ತಿರುವ ಕಾಮಗಾರಿಯಿಂದಾಗಿ ವಾಹನ ಸಂಚಾರ ತೀರ ಅಸ್ತವ್ಯಸ್ತಗೊಂಡಿದೆ. ಸುತ್ತಿ-ಬಳಸಿ ಪ್ರಯಾಣಿಸ ಬೇಕಾಗಿರುವುದರಿಂದ ಬಸ್ಸಿನ ದರಗಳು ಹೆಚ್ಚಾಗಿವೆ. ಕೆಲಸ ಹೇಗಾದರೂ ಸಾಗಲಿ ಸದ್ಯ ಸೇತುವೆ ದೊಡ್ಡದಾಗುತ್ತಿದೆಯಲ್ಲ ಎಂದು ಜನ ನಿಟ್ಟುಸಿರು ಬಿಟ್ಟು ಸಮಾಧಾನ ಪಡುವಂತಾಗಿದೆ.

ಎಲ್ಲಿ ನೋಡಿದರು ಹಳ್ಳ-ದಿಣ್ಣೆಗಳಿಂದ ಕೂಡಿದ ರಸ್ತೆಗಳು ಮಳೆ ಬಂದು ನೀರು ತುಂಬಿದರೆ ಹಳ್ಳ- ರಸ್ತೆಯ ವ್ಯತ್ಯಾಸ ತಿಳಿಯುವುದೇ ಇಲ್ಲ. ವಾಹನಗಳಿರಲಿ ಜನ ಸಹ ಸಂಚರಿಸುವುದು ತೀರಾ ಕಷ್ಟ. ಬಸ್ಸುಗಳು ಸಂಚರಿಸುವ ಮುಖ್ಯ ರಸ್ತೆಗಳಿಗೆ ಡಾಂಬರು ಇರುವುದಿಲ್ಲವೆಂದ ಮೇಲೆ ಉಳಿದ ರಸ್ತೆಗಳ ಬಗ್ಗೆ ಯೋಚಿಸುವಂತೆ ಇಲ್ಲವೇ ಇಲ್ಲ.

ಬಹುತೇಕ ಹಳ್ಳಿಗಳಿಗೆ ಸಮರ್ಪಕ ಸಾರಿಗೆ ವ್ಯವಸ್ಥೆ ಇಲ್ಲ. ದಿನಕ್ಕೆ ಒಂದು ಬಾರಿ ಅಥವಾ ಎರಡು ಬಾರಿ ಬಸ್ಸುಗಳು ಬಂದು ಹೋದರೆ ಮುಗಿಯಿತು. ಉಳಿದ ಸಮಯದಲ್ಲಿ ನಟರಾಜ ಸರ್ವೀಸೇ ದಿಕ್ಕು. ತುರ್ತು ಸಂದರ್ಭಗಳಲ್ಲಿ ಖಾಸಗಿ ವಾಹನಗಳ ಮಾಲಿಕರಿಗೆ ಕೈ ಜೋಡಿಸಬೇಕು. ಅಗತ್ಯ ಬಿದ್ದರೆ ಕಾಲಿಗೆ ಸಹ ಬಿದ್ದು ಹೆಚ್ಚಿನ ಹಣ ತೆತ್ತು ಸಹಾಯ ಕೋರಬೇಕು. ಇದು ರಸ್ತೆ-ಸಾರಿಗೆ ಸ್ಥಿತಿ.

ಸ್ಲಂ-ನಿವಾಸಿಗಳ ಗೋಳು ಗಗನ ಮುಟ್ಟಿದೆ

ಇಡೀ ಕ್ಷೇತ್ರದಲ್ಲಿ 15 ರಿಂದ 20 ಸ್ಲಂ ಗಳಿದ್ದು ಸಾವಿರಾರು ಕುಟುಂಬಗಳು ತೆಂಗಿನಗರಿಯ ಆಶ್ರಯದಲ್ಲಿ ಬದುಕು ದೂಡುತ್ತಿವೆ. ನೀರು, ದೀಪ, ಚರಂಡಿ, ರಸ್ತೆ ಕೇಳುವುದಿರಲಿ ಹತ್ತಾರು ವರ್ಷಗಳಿಂದ ಸ್ಲಂ- ನಿವಾಸಿಗಳಾಗಿರುವ ಇವರಿಗೆ ಹಕ್ಕು ಪತ್ರಗಳೇ ಇಲ್ಲ. ಯಾವಾಗ ಯಾರು ಬಂದು ಎತ್ತಂಗಡಿ ಮಾಡಿಸುತ್ತಾರೋ ಎನ್ನುವ ಅಭದ್ರತೆಯ ವಾತಾವರಣದಲ್ಲಿಯೇ ಕಾಲ ದೂಡಬೇಕಿದೆ.

ಮನುಷ್ಯರಾದವರು ಬದುಕಬಾರದಂತಹ ಉಸಿರುಗಟ್ಟಿಸುವ ವಾತಾವರಣದಲ್ಲಿ ಜೀವಿಸುತ್ತಿರುವ ಈ ಜನರಿಗೆ ರೌಡಿಗಳ ಕಾಟ ಬೇರೆ. ರೌಡಿಗಳು, ಪುಂಡ-ಪೋಕರಿಗಳನ್ನು ಎದುರುಹಾಕಿ ಕೊಂಡೇ ಜನ ಬಾಳ್ವೆ ಮಾಡಬೇಕು. ಹೆಂಗಸರು ಪರಿಸ್ಥಿತಿಯಂತೂ ಮತ್ತಷ್ಟು ಶೋಚನೀಯ. ಪಟ್ಟಭದ್ರರ ಬಿಗಿ ಮುಷ್ಟಿಯಲ್ಲಿಯೇ ಅವರ ಅಜ್ಞಾನುಸಾರವೇ ಬದುಕಬೇಕಾದ ಅಸಹನೀಯ ಸನ್ನಿವೇಶ ಹಲವಾರು ಸ್ಲಮ್ಮುಗಳಲ್ಲಿ. ರಾಜಕೀಯ ಪ್ರಭಾವ ಹೊಂದಿರುವ ಕೆಲವು ದುರುಳರು, ಒಂಭತ್ತು-ಹತ್ತು ಗುಡಿಸಲುಗಳನ್ನು ಹಾಕಿ ಉಳಿದವರಿಗೆ ಹಿಂಸೆ ಕೊಡುವುದೂ ಉಂಟು.

ಹಕ್ಕು ಪತ್ರ ಹಾಗೂ ಮೂಲಭೂತ ಸೌಕರ್ಯಗಳಿಗಾಗಿ ಆಗ್ರಹಿಸಿ ವಿವಿಧ ಸಂಘಟನೆಗಳು ಸೇರಿದ ಸ್ಲಂ ನಿವಾಸಿಗಳ ಹಿತರಕ್ಷಣಾ ಸಮಿತಿ" ಯೊಂದನ್ನು ರಚಿಸಿಕೊಂಡು ಹಲವು ಬಾರಿ ಹೋರಾಟ ನಡೆಸಿದ್ದರು. ಆಳುವ ಜನ ಕಣ್ಣು ತೆರೆದಿಲ್ಲ. ಜನವಾದಿ ಮಹಿಳಾ ಸಂಘಟನೆ, ಡಿವೈಎಫ್‌ಐ ಕರ್ನಾಟಕ ಪ್ರಾಂತ ರೈತ ಸಂಘಗಳು ಇಂತಹ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಪರಿಹಾರದ ದಾರಿಗಾಗಿ ಹೆಜ್ಜೆಹಾಕಿವೆ.

ವಿಧವಾ ವೇತನ, ವೃದ್ಧಾಪ್ಯವೇತನ, ರೇಷನ್‌ಕಾರ್ಡು ಮುಂತಾದವುಗಳ ಲಾಭ ಪಡೆಯ ಬೇಕಾದ ನೈಜ ಫಲಾನುಭವಿಗಳು ಇವುಗಳಿಂದ ವಂಚಿತರಾಗಿದ್ದಾರೆಂದೇ ಹೇಳಬೇಕು. ಕಛೇರಿಗಳಲ್ಲಿ ಲಂಚ, ನಗರಸಭೆಯಲ್ಲಿ ಲಂಚ, ಅಧಿಕಾರಿಗಳಿಗೆ ಲಂಚ, ಭ್ರಷ್ಟಾಚಾರ ಬಡಜನತೆಯನ್ನು ದಿಕ್ಕೆಡಿಸಿವೆ. ಯಾವುದೇ ಸರ್ಕಾರಿ ಯೋಜನೆಗಳ ಲಾಭ ಪಡೆಯಲು ಸಂಭಂಧಿಸಿದ ಜನ ಹಿಂದೆ ಸರಿಯುವಂತಾಗಿದೆ.

ಇದು ಸಾಲದೆಂಬಂತೆ ಸರ್ಕಾರ ಅಭಿವೃದ್ದಿಯ ಹೆಸರಿನಲ್ಲಿ ಸುಲಿಗೆ ಮಾಡಹೊರಟಿರುವುದು ಬೇರೆ. ಅಭಿವೃದ್ಧಿಯ ಸುಳಿವೂ ತೋರಿಸದೆ ಹಣ ವಸೂಲಿಗಷ್ಟೇ ಮುಂದಾಗುತ್ತಿರುವ ಸರ್ಕಾರದ ನೀತಿಯಿಂದ ಕ್ಷೇತ್ರದ ಜನ ಕಂಗಾಲಾಗಿದ್ದಾರೆ. ಡಿ.ವೈ.ಎಫ್.ಐ. ಬೆಟರ್‌ಮೆಂಟ್ charge ವಸೂಲಿಯ ವಿರುದ್ಧ ಪ್ರಬಲ ಹೋರಾಟ ನಡೆಸಿ ತಕ್ಷಣಿಕ ತಡೆ ತಂದಿದ್ದರು. ಮತ್ತೆ ಬೆಟರಮೆಂಟ್ ಸುಂಕ ವಸೂಲಿ ಮಾಡಲು ನೋಟೀಸ್‌ಗಳು ಬರುತ್ತಿವೆ.

ಜನಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ

ಕ್ಷೇತ್ರದ ಜನತೆಯನ್ನು ಇಷ್ಟೆಲ್ಲಾ ಸಮಸ್ಯೆಗಳು ಬಾದಿಸುತ್ತಿದ್ದರೂ ನಗರಸಭೆ ಸದಸ್ಯರಿಂದ ಹಿಡಿದು ಪಾರ್ಲಿಮೆಂಟ್ ಸದಸ್ಯರ ತನಕ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. "ಅಭಿವೃದ್ಧಿ ಬೇಕೆಂದರೆ ಹಣ ಖರ್ಚುಮಾಡಿ" ಎನ್ನುವ ಸವಾಲನ್ನೆಸೆದು ಸ್ವಂತ ಹಿತ ಕಾಪಾಡಿಕೊಳ್ಳುತ್ತಿದ್ದಾರೆ. ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸುವ ಗೋಜಿಗೆ ಯಾರೂ ಸಹ ಹೋಗಿಲ್ಲ. ಉಳ್ಳವರಿಗೆ ಸವಲತ್ತು ಉಳ್ಳದ ವರಿಗೆ ಆಪತ್ತು. ನಾವಂತು ಹೊಣೆಗಾರರಲ್ಲವೆಂದು ಜನಪ್ರತಿನಿಧಿಗಳು ಜವಾಬ್ದಾರಿಯಿಂದ ಕೈ ತೊಳೆದುಕೊಳ್ಳುತ್ತಿದ್ದಾರೆ. ಇನ್ನು ಜನಸಾಮಾನ್ಯರ ಅಳಲನ್ನು ಕೇಳುವವರು ಯಾರು? ಜನತೆಗೆ ಅರಿವನ್ನು ಮೂಡಿಸಲು ಹೋಗುವ ಪ್ರಗತಿಪರ ಸಂಘಟನೆಗಳ ಮುಖಂಡರನ್ನು ಜನರನ್ನು ಬೆದರಿಕೆ ಹಾಕುವ ಮೂಲಕ ತೆಪ್ಪಗಾಗಿಸಲು ಆಳುವ ಜನ ಮುಂದಾದ ಉದಾಹರಣೆಗಳು ಸಾಕಷ್ಟಿವೆ.

ಖಾಯಿಲೆ ಬಂದವರೇ ಮದ್ದು ಕುಡಿಯ ಬೇಕಾದಂತೆ ಕಷ್ಟದಲ್ಲಿರುವ ಜನತೆ ಒಗ್ಗಟ್ಟಾಗಿ ಹೋರಾಡುವುದರ ಮೂಲಕವಷ್ಟೇ ಮುಕ್ತಿ ಕಾಣಬೇಕು. ಜನರ ಕಷ್ಟ ಜನರಿಗೆ ಬಿಟ್ಟಿದ್ದು ಎನ್ನುವ ಆಳುವ ಜನರಿಗೆ ಪಾಠ ಕಲಿಸಲು ಕಷ್ಟಪಡುವ ಜನರೆಲ್ಲಾ ಒಂದಾಗಲೇ ಬೇಕಾಗಿದೆ. ಹೋರಾಟದ ಮದ್ದನ್ನು ಕುಡಿಯುವ ಮೂಲಕ ಸಾಮಾಜಿಕ ವ್ಯಾಧಿಗೆ ಪರಿಹಾರ ಕಾಣಬೇಕಿದೆ.



ಸ್ಲಂ ನಿವಾಸಿಗಳಲ್ಲಿ ಜಾಗೃತಿ ಮೂಡಿಸುತ್ತಿರುವ ಜನವಾದಿ ಮಹಿಳಾ ಸಂಘಟನೆ

ಉತ್ತರ ಕನ್ನಡ ರಾಜಧಾನಿಯಲ್ಲಿ

ಸರ್ಕಾರಿ ಔಷಧ ಖಾಸಗೀ ಸೇವೆಯಲ್ಲಿ

ವಿಠ್ಠಲ ಭಂಡಾರಿ

ಅನೇಕ ವರ್ಷಗಳಿಂದ ಕಾರವಾರದ ಜಿಲ್ಲಾ ಸರ್ಕಾರಿ ಆಸ್ಪತ್ರೆಯವರಿಗೆ, ದೂರುಗಳು ಬರುತ್ತಲೇ ಇತ್ತು. 'ಆಸ್ಪತ್ರೆಯಲ್ಲಿ ವೈದ್ಯರಿಲ್ಲ, ಆಸ್ಪತ್ರೆಯಲ್ಲಿ ಸರಿಯಾದ ಔಷಧಗಳಿಲ್ಲ, ಆಸ್ಪತ್ರೆಯಲ್ಲಿ ಸ್ವಚ್ಛತೆಯಿಲ್ಲ, ಆಸ್ಪತ್ರೆಯಲ್ಲಿ ಲಂಚಕೊಟ್ಟರೆ ಮಾತ್ರ ಮಂಚ" ಎಂದು ಜಿಲ್ಲೆ ದೂರದಿಂದ ಬಂದ ಮತ್ತು ಕಾರವಾರದ ಬಡ ರೋಗಿಗಳು ಹೇಳುತ್ತಲೇ ಇದ್ದರು. ಆದರೆ ಅದನ್ನು ಸರಿಪಡಿಸಿ ಬೇಕಾದವರು ಕಿವುಡರಾಗಿರುವುದರಿಂದ ಹಾಗೇ ಮುಂದುವರಿದಿತ್ತು. ಸಾವಕಾಶ ಅವ್ಯವಸ್ಥೆಯ ಕೂಪವಾಗಿ, ಲಂಚ ಭ್ರಷ್ಟಾಚಾರದ ಕೇಂದ್ರವಾಗಿ, ಬಡ ಜನರ ಜೀವ ಉಳಿಸುವ ಕೇಂದ್ರವಾಗುವ ಬದಲು ಜೀವದೊಂದಿಗೆ ಆಟವಾಡುವ ಅಮಾನವೀಯ ಯಮನರಮನೆಯಾಗಿ ಮಾರ್ಪಟ್ಟಿತು. ಸರ್ಕಾರದಿಂದ ಬಂದ ಔಷಧವನ್ನೇ ಮಾರಾಟಮಾಡಿ ಹಣ ಮಾಡುವ ಕಾಳಸಂತೆಕೋರರ ಅಡ್ಡೆಯಾಗಿ ಬೆಳೆದಿದ್ದು ಇಡೀ ಜಿಲ್ಲೆಯ ದುರ್ದೈವದ ಸಂಗತಿಯಾಗಿದೆ.

ಇತ್ತೀಚೆಗೆ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಎಲ್.ಕೆ.ಅಲೇಕ್ ಅವರ ಆಸಕ್ತಿಯ ಮೇರೆಗೆ ಜಿಲ್ಲಾ ಪೋಲೀಸ್ ವರಿಷ್ಠ ಜಿ.ಬಿ.ಥಬ್ಬಾ ಮತ್ತು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ದಾಳಿ ಮಾಡಿ ಜಿಲ್ಲಾ **ಆಸ್ಪತ್ರೆಯಲ್ಲಿ ನಡೆಯುತ್ತಿರುವ ಅತಿದೊಡ್ಡ ಔಷಧ ಮಾರಾಟ ಜಾಲವೊಂದನ್ನು ಪತ್ತೆ ಹಚ್ಚಿ 6 ಜನರನ್ನು ಬಂಧಿಸಿದರು. ಸುಮಾರು ಒಂದು ಲಕ್ಷ 25 ಸಾವಿರ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ಸರ್ಕಾರಿ ಔಷಧಗಳನ್ನು ಈ ದಾಳಿಯಲ್ಲಿ ವಶಪಡಿಸಿಕೊಳ್ಳಲಾಯಿತು.** ಈ ಔಷಧದ ಮಾರಾಟದಲ್ಲಿ ಆಸ್ಪತ್ರೆಯ ಸಿಬ್ಬಂದಿಗಳು ಮತ್ತು ಔಷಧ ಕೊಂಡು ಮಾರಾಟ ಮಾಡುವುದರಲ್ಲಿ ನಗರದ ಎರಡು ಪ್ರಮುಖ ಖಾಸಗೀ ನರ್ಸಿಂಗ್ ಹೋಂಗಳು ಶಾಮೀಲಾಗಿರುವುದು ಬೆಳಕಿಗೆ ಬಂದಿದೆ. ಏಕಕಾಲಕ್ಕೆ ಎಲ್ಲಾ ನರ್ಸಿಂಗ್ ಹೋಂ ಮೇಲೂ, ಔಷಧ ಅಂಗಡಿ ಮೇಲೂ ದಾಳಿ ಇಟ್ಟಿದ್ದರೆ...... ಎಂಬ ಉದ್ಗಾರ ಜನರಿಂದ ಬರುತ್ತಿದೆ. ಕಾರಣ ಅಂದು ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಡಾ. ಪಿಕಳೆಯವರ ಮನೆ ಕಾಂಪೌಂಡ್‌ನೊಳಗೆ ಔಷಧಿಯ ಸುಟ್ಟ ಘಾಟುವಾಸನೆ ನಗರದ ಜನರಿಗೆ ಬರುತ್ತಿತ್ತು ಎಂದು ಜನರಾಡಿಕೊಳ್ಳುತ್ತಿದ್ದಾರೆ.



ಜಿಲ್ಲಾ ಸಿವಿಲ್ ಆಸ್ಪತ್ರೆಯ ಕಿರಿಯ ಫಾರ್ಮಾಸಿಸ್ಟ್ ಒಬ್ಬರಾದ ವಿಷ್ಣುವಾಸುದೇವ ನಾಯ್ಕ ಅವರ ಮನೆಯಿಂದ 80 ಸಾವಿರ ರೂ. ಮೌಲ್ಯದ ಔಷಧ ಇನ್ನೊಬ್ಬ ಕಿರಿಯ ಫಾರ್ಮಾಸಿಸ್ಟ್ ಸೋಮಶೇಖರ ಮ್ಯಾಗೋಟಿ ಅವರ ಮನೆಯಿಂದ 90,000 ರೂ. ಮೌಲ್ಯದ ಔಷಧವನ್ನು ವಶಪಡಿಸಿಕೊಳ್ಳಲಾಯಿತು. ಇವರೊಂದಿಗೆ ನೇರ ಶಾಮೀಲಾಗಿದ್ದ ಹಿರಿಯ ಫಾರ್ಮಾಸಿಸ್ಟ್ ಗಣಪತಿ ಓಂ ನಾಯ್ಕ ಮತ್ತು ಔಷಧವನ್ನು ನಿರ್ದಿಷ್ಟ ಸ್ಥಳಕ್ಕೆ ತಲುಪಿಸುತ್ತಿದ್ದ ವ್ಯಕ್ತಿ ಸೈಯದ್ ಅಬ್ದುಲ್ ಮಸ್ಸೂರು ಇವರನ್ನು ಬಂಧಿಸಲಾಗಿದೆ.

ಈ ಜಾಲದಲ್ಲಿ ಅತ್ಯಂತ ದೊಡ್ಡ ಪಾಲುದಾರರು ಖಾಸಗೀ ಆಸ್ಪತ್ರೆಯನ್ನು ನಡೆಸುತ್ತಿದ್ದ ವೈದ್ಯರು. ಕಾರವಾರದ ನಂದನಗದ್ದೆಯ ಬ್ರಹ್ಮನರ್ಸಿಂಗ್ ಹೋಂ ನಡೆಸುತ್ತಿರುವ ವೈದ್ಯ ಡಾ. ಗುರುನಾಥ ಅಣ್ವೇಕರ ಅವರು 15 ಸಾವಿರ ಬೆಲೆಯ ಔಷಧ ಪತ್ತೆಯಾಯಿತು. ಔಷಧ, ಇಂಜೆಕ್ಷನ್ ಬಾಟಲಿಗಳ ಮೇಲೆ ಬಿಳಿ ಬಣ್ಣದಿಂದ ಸರ್ಕಾರಿ ಮುದ್ರೆಯನ್ನು ಒರಸಿ ಅದರ ಮೇಲೆ ಈತ ನಿಗದಿಪಡಿಸಿದ ಬೆಲೆಯನ್ನು ಬರೆಸುತ್ತಿದ್ದ. ಅನೇಕ ವರ್ಷಗಳಿಂದ ಸರ್ಕಾರಿ ಉಚಿತ ಔಷಧವನ್ನು ಖಾಸಗೀಯವರಿಗೆ ಮಾರಾಟ ಮಾಡಿ ಹಣ ಮಾಡುತ್ತಿದ್ದ ಬ್ರಹ್ಮನರ್ಸಿಂಗ್ ಹೋಂನ ಈತನನ್ನು ಬ್ರಹ್ಮಕೂಡ ರಕ್ಷಿಸಲಾರದೆ ಹೋದ.

ಇನ್ನೊಬ್ಬ ಖಾಸಗೀ ವೈದ್ಯ ಡಾ. **ಪ್ರಮೋದ್ ಪಾಯಿದೆ ಈತನ ಆಸ್ಪತ್ರೆಯಲ್ಲಿ ಹತ್ತು ಸಾವಿರ ಬೆಲೆಯ ಔಷಧ ಪತ್ತೆಯಾಯಿತು.** 'ಪೈದೆ ನರ್ಸಿಂಗ್ ಹೋಂ' ನಡೆಸುತ್ತಿರುವ ಈತ ಬಾಟಲಿಗಳ ಮೇಲಿನ ಮುದ್ರೆಯನ್ನು ಕೂಡ ಒರೆಸದೆ ರಾಜಾರೋಷವಾಗಿ ಮಾರುತ್ತಿದ್ದ ವ್ಯಕ್ತಿ. ತಾವು ಮಾಡುವ ಈ ಹೇಸಿಗೆ ಕೆಲಸಕ್ಕೆ ಸ್ವಲ್ಪವೂ ನಾಚಿಕೆ ಪಟ್ಟುಕೊಳ್ಳದ ಇವರಿಗೆ ಬೆಂಬಲಿಸುತ್ತಿದ್ದ, ಬೆಂಗಾವಲಾಗಿ ನಿಂತ ವ್ಯಕ್ತಿಗಳ, ಶಕ್ತಿಗಳ ಶೋಧ ಆಗಬೇಕಾಗಿದೆ. ಆರೋಪಿ ಪರವಾಗಿ ಜಾಮೀನಿಗಾಗಿ ವಾದಿಸಿದ ಪ್ರತಿಷ್ಠಿತ ವ್ಯಕ್ತಿಗಳಲ್ಲೊಬ್ಬರು ದಿನಕರ ದೇಸಾಯಿ ಸ್ಥಾಪಿಸಿದ ಸಂಸ್ಥೆಯ ಅಧ್ಯಕ್ಷರೂ ಆದ ಎಸ್.ಪಿ.ಕಾಮತರು. ಈ ಘಟನೆಯನ್ನು ದಿನಂಪ್ರತಿ ಬೆಳವಣಿಗೆಯನ್ನು ನಿರ್ಭಿಡೆಯಿಂದ ವರದಿ ಮಾಡಿದ 'ಕರಾವಳಿ ಮುಂಜಾವು' ಪತ್ರಿಕೆಯ ಸಂಪಾದಕರಿಗೆ ಜೋರಾಗಿ ಹೇಳಿದ್ದೇನೆಂದರೆ "ಈ ಚಿಕ್ಕ ಘಟನೆಗೆ ವಿನಾಕಾರಣ ಪ್ರಚಾರ ಕೊಟ್ಟಿರಿ" ಎಂದು.

ಸುಸಜ್ಜಿತ ಆಸ್ಪತ್ರೆಯಾಗಿ ಬೆಳೆಯಲು ಬೇಕಾದ ಎಲ್ಲಾ ಸೌಕರ್ಯಗಳಿವೆ. ಆದರೆ ಬೆಳೆಸಲು ಇಚ್ಛಾ ಶಕ್ತಿ ಬೇಕು ಅಷ್ಟೆ. ಸುಮಾರು 24 ಎಕರೆ ಭೂಮಿ ಆಸ್ಪತೆಯ ಉಪಯೋಗಕ್ಕಿದೆ. ಈಗಿರುವ ಕಟ್ಟಡದಲ್ಲಿಯೇ ಸುಮಾರು 300 ಹಾಸಿಗೆಗಳ ವ್ಯವಸ್ಥೆ ಮಾಡಬಹುದು. ಇದ್ದ ಕೆಲವು ಉಪಕರಣಗಳು ಉಪಯೋಗಿಸುತ್ತಿಲ್ಲ. ಇಡೀ ಆಸ್ಪತ್ರೆಯೇ ಒಂದು ಶವಾಗಾರದಂತಿದೆ. ಅಂದಮೇಲೆ ಶವಾಗಾರದ ಕತೆಯಂತೂ ಹೇಳಬೇಕೆ? ಅಲ್ಲಿಟ್ಟ ಶವವೇ ಅಲ್ಲಿಯ ಅವ್ಯವಸ್ಥೆಯನ್ನು ನೋಡಿ ವಾಕರಿಕೆ ಬಂದು ಎದ್ದು ಓಡಿಹೋಗದಿದ್ದರೆ ಸಾಕು. ಇತ್ತೀಚೆಗಷ್ಟೆ ಶವಾಗಾರದಲ್ಲಿದ್ದ ಶವದ ಕಣ್ಣನ್ನು ಕಾಗೆಗಳು ಕುಕ್ಕಿ ತೆಗೆದದ್ದು ಇನ್ನೂ ನೆನಪಿದೆ ಜನರಿಗೆ.

ಕೇವಲ ಹಣದ ಕೊರತೆಯಿಂದ ಹೀಗಾಗಿದೆಯೇ ಎಂದು ಕೇಳಿದರೆ ಸಂಪೂರ್ಣವಾಗಿ ಹೌದು ಎನ್ನುವಂತಿಲ್ಲ. ಯಾಕೆಂದರೆ ವರ್ಷಕ್ಕೆ ಸುಮಾರು 10-15 ಲಕ್ಷ ರೂ. ಬಿಡುಗಡೆ ಆಗುತ್ತಿದೆ. ಆದರೆ ಹೆಗ್ಗಣಗಳೇ ತುಂಬಿರುವಾಗ ಕಣಜ ತುಂಬಿರಲು ಹೇಗೆ ಸಾಧ್ಯ? ಹೆಗ್ಗಣಗಳಿಗೆ ಬೋನು ಹಿಡಿಯುವವರೇ ಮಾಮೂಲಿ ವಸೂಲಿ ಮಾಡಿದರೆ?

ಇಡೀ ಆಸ್ಪತ್ರೆಯ ವ್ಯವಹಾರಗಳ ಬಗ್ಗೆ ತನಿಖೆ ಆಗಬೇಕಾಗಿದೆ. ಅದರೊಂದಿಗೆ ಜಿಲ್ಲೆಯ ಜೀವರಕ್ಷಕನಾಗಿ ಬೆಳೆಯಲು ಆಸ್ಪತ್ರೆಗೆ ಬೇಕಾದ ಅವಶ್ಯಕತೆಗಳ ನೀಲನಕ್ಷೆ ಸಿದ್ಧವಾಗಬೇಕಿದೆ. ಆರೋಗ್ಯ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ವಹಿಸಿಕೊಟ್ಟಿದ್ದೇವೆ ಎನ್ನುವ ಘೋಷಣೆ ಬರುವುದರೊಳಗೆ ಕಾರವಾರದ ಸಿವಿಲ್ ಆಸ್ಪತ್ರೆ ಸಾವಿಗೆ ಸವಾಲಾಗಿ ಬೆಳೆಯಬೇಕಾಗಿದೆ. ಇದು ಕೇವಲ ಒಂದು ಆಸ್ಪತ್ರೆಯ ಮಾತಲ್ಲ. ಸರ್ಕಾರಿ ಆಸ್ಪತ್ರೆಗಳಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಿ, ಹೆಚ್ಚಿನ ಆಧುನಿಕ ಸೌಲಭ್ಯಗಳು, ಔಷಧಗಳು, ವೈದ್ಯರುಗಳನ್ನು ಒದಗಿಸಿ ಎಂದು ಜನ-ಸಂಘಟನೆಗಳು ಒತ್ತಾಯಿಸುತ್ತಲೇ ಬಂದಿದ್ದಾರೆ. ಗ್ರಾಮೀಣ ಪ್ರದೇಶಗಳು, ಅನಕ್ಷರಸ್ತರು, ಬಡವರೇ ತುಂಬಿರುವ ಈ ದೇಶದಲ್ಲಿ ಉಚಿತವಾದ ವೈದ್ಯಕೀಯ ಸೌಲಭ್ಯಗಳು ಹೆಚ್ಚು ವ್ಯವಸ್ಥಿತವಾಗಿ ಜಾರಿ ಆಗಬೇಕಾಗಿದೆ. ಪ್ರತಿ ಸರ್ಕಾರಿ ಆಸ್ಪತ್ರೆಗಳು ಜೀವರಕ್ಷಕ ಕೇಂದ್ರಗಳಾಗಬೇಕಿದೆ. ಆದರೆ ಆಗುತ್ತಿರುವುದೇನು? ಸರ್ಕಾರಿ ಜನರ ಆರೋಗ್ಯದ ಕಡೆ ಗಮನ ಹರಿಸುತ್ತಿಲ್ಲ. ವರ್ಷದಿಂದ ವರ್ಷಕ್ಕೆ ವೈದ್ಯಕೀಯ ರಂಗಕ್ಕೆ ಮೀಸಲಾಗಿಡುವ ಹಣದಲ್ಲಿ ಕಡಿತಗೊಳಿಸಲಾಗುತ್ತಿದೆ. ಬಡಜನರಿಗಾಗಿ ಉಚಿತ ಸೇವೆ ಕೊಡಬೇಕೆಂದು ವೈದ್ಯರ ಮನಸ್ಸಿನಲ್ಲಿ ತುಂಬುವ ಬದಲು ವೈದ್ಯಕೀಯ ಸೇವೆಯನ್ನು ಒಂದು ವ್ಯವಹಾರವನ್ನಾಗಿ, ಹಣ ಗಳಿಸುವ ಒಂದು ವೃತ್ತಿಯನ್ನಾಗಿ ಪರಿಗಣಿಸುವಂತೆ ಸರ್ಕಾರದ ಶೈಕ್ಷಣಿಕ ನೀತಿ ಇದೆ. ಲಕ್ಷಾಂತರ ರೂಪಾಯಿಗಳನ್ನು ಲಂಚವಾಗಿ ಸುರಿದು ವೈದ್ಯ ಪದವಿ ಮುಗಿಸಿ ಬಂದಾತ ಮಾಡುವ ಮೊದಲ ಕೆಲಸವಾದರೂ ಏನು? ಅತಿ ಸುಲಭದಲ್ಲಿ ಹಣಗಳಿಸುವುದು ಹೇಗೆ ಎಂದಲ್ಲವೇ?

ಒಂದು ಕಡೆ ಸರ್ಕಾರಿ ಆಸ್ಪತ್ರೆಗಳಿಗೆ ಸಾಕಷ್ಟು ಅನುದಾನವಿಲ್ಲದೆ ಔಷಧಿಯ ಕೊರತೆಯಿಂದಾಗಿ ಜನರಿಂದ ದೂರವಾದರೆ ಇನ್ನೊಂದೆಡೆ ಸರ್ಕಾರಿ ವೈದ್ಯರುಗಳು ಬಂದ ಕೆಲವೇ ಕೆಲವು ಔಷಧಗಳನ್ನು ಹಣಕ್ಕೆ ಮಾರಾಟ ಮಾಡುವ ದಂದೆಗೆ ಇಳಿಯುತ್ತಾರೆ. ಸರ್ವಿಸ್ ಚಾರ್ಜ್ ಎಂದು ಒಂದಿಷ್ಟು ಹಣ ವಸೂಲಿ ಮಾಡುತ್ತಾರೆ. ಇನ್ನೂ ಕೆಲವರು ಖಾಸಗೀಯಾಗಿ ಪ್ರಾಕ್ಟೀಸ್ ಮುಂದುವರೆಸಿದ್ದಾರೆ. ಹಾಗಾಗಿ 'ಸರ್ಕಾರಿ ಔಷಧ, ಖಾಸಗೀ ಸೇವೆ' ನಿರಾತಂಕವಾಗಿ ಮುಂದುವರಿಯುತ್ತಿದೆ. ಇವರು ಉಚಿತವಾದ ಸೇವೆಯನ್ನು ಕೊಡಬೇಕು ಎನ್ನುವ ಕಾರಣದಿಂದಲೇ ಸರ್ಕಾರ ತಿಂಗಳ ಸಂಬಳ ಕೊಡುತ್ತದೆ ಎನ್ನುವುದನ್ನು ಮರೆಯುತ್ತಾರೆ. ಹಾಗಾಗಿ ಸರ್ಕಾರಿ ಆಸ್ಪತ್ರೆಗಳೆಂದರೆ ಜನರಿಗೆ ವಾಕರಿಕೆ ಬರುವ ಸ್ಥಿತಿ ಈ ಜಿಲ್ಲೆಯಲ್ಲಂತೂ ನಿರ್ಮಾಣವಾಗಿದೆ ಎಂದಾದರೆ ಉಳಿದ ಜಿಲ್ಲೆಯ ಕತೆ ಏನೋ?



ಡಾ. ಪ್ರಮೋದ್ ಪಾಯಿದೆ ಡಾ. ಗುರುನಾಥ ಅಣ್ವೇಕರ

ಉತ್ತರ ಕನ್ನಡ ಜಿಲ್ಲಾಸ್ಪತ್ರೆಯ ಮತ್ತು ಇತರೆ ತಾಲೂಕುಗಳಾದ ಹೊನ್ನಾವರ, ಭಟ್ಕಳ, ಜೋಯಿಡಾಗಳಲ್ಲಿ ದೊಡ್ಡ ಮೊತ್ತದ ಹಣವಿನಿಯೋಗಿಸಿ ಕಟ್ಟಿದ ಕಟ್ಟಡಗಳಲ್ಲಿ ಎಷ್ಟು ಅವ್ಯವಹಾರ ನಡೆದಿದೆ ಎಂದರೆ ಅದರ ಉದ್ಘಾಟನೆ ಆಗುವುದರಲ್ಲಿಯೇ ಸೋರಲು ಪ್ರಾರಂಭಿಸಿದೆ. ಶಿಥಿಲ ಸ್ಥಿತಿಯನ್ನು ತಲುಪಿದೆ. ವೈದ್ಯರಿಗೆ ಲಂಚವಂತೂ ಮಾಮೂಲು, ಹಣ ಇಲ್ಲದೆ ಮುಖ್ಯ ರೋಗದ ಚಿಕಿತ್ಸೆ ಇಲ್ಲವೇ ಇಲ್ಲ. ಯಾರಿಗೆ ದೂರು ಕೊಡಬೇಕು. ಬೇಲಿಯೆ ಎದ್ದು ಹೊಲ ಮೇಯುತ್ತಿರುವಾಗ?

ಉತ್ತರ ಕನ್ನಡ ಜಿಲ್ಲೆಯ ತುಂಬ ಖಾಸಗೀ ಆಸ್ಪತ್ರೆಗಳೇ ತುಂಬಿವೆ. ಒಂದಕ್ಕೆರಡು ಪಟ್ಟು ಹಣ ಸುಲಿಯುವ ಕೇಂದ್ರಗಳಾಗಿವೆ. ಕೇಂದ್ರ ಸರ್ಕಾರದ ಧೋರಣೆಯ ಹಣವನ್ನು ಹೆಚ್ಚಿಗೆ ಸುಲಿಯುವಲ್ಲಿ ಖಾಸಗೀ ನರ್ಸಿಂಗ್ ಹೋಮ್‌ಗಳ ಮಧ್ಯೆ ಪೈಪೋಟಿಯೇ ನಡೆದಿದೆ ಈ ರೀತಿಯಲ್ಲಿ ಆರೋಗ್ಯದ ಸೇವೆ ಕೊಡುತ್ತೇವೆಂದು ಮೋಸಗೊಳಿಸುವ ಕ್ರಿಯೆ ಒಂದೆಡೆಯಾದರೆ ಇಡೀ ಜಿಲ್ಲೆಯ ತುಂಬ ಅರಸಿದರೂ ಎಲ್ಲಾ ರೋಗಗಳಿಗೆ ಚಿಕಿತ್ಸೆ ಕೊಡಬಲ್ಲ ಒಂದೇ ಒಂದು ಆಸ್ಪತ್ರೆ ಇಲ್ಲ. ತುರ್ತು ಚಿಕಿತ್ಸೆಗಾಗಿ ಅಥವಾ ಸಣ್ಣಪುಟ್ಟ ಗಂಭೀರ ಖಾಯಿಲೆಗಾಗಿ ದಕ್ಷಿಣ ಕನ್ನಡ,ಗೋವಾ ಬೆಂಗಳೂರು, ಹುಬ್ಬಳ್ಳಿಗೋ ಹೋಗಬೇಕಾಗಿದೆ. ಅನೇಕ ಸಂದರ್ಭದಲ್ಲಿ ಆಸ್ಪತ್ರೆಯನ್ನು ಸೇರುವ ಮೊದಲೇ ಅರ್ಧ ರಸ್ತೆಯಿಂದ ವಾಪಸಾಗುವ ಸ್ಥಿತಿಯೇ ಹೆಚ್ಚು. **ರಾಷ್ಟ್ರೀಯ ಹೆದ್ದಾರಿ 17 ಹಾದುಹೋಗುವ ಈ ಜಿಲ್ಲೆಯಲ್ಲಿ ಒಂದೇ ಒಂದು 'ಬ್ಲಡ್ ಬ್ಯಾಂಕ್' ಇಲ್ಲದಿರುವುದನ್ನು ಗಮನಿಸಿದರೆ ಜಿಲ್ಲೆಯಲ್ಲಿಯ ವೈದ್ಯಕೀಯ ಸೌಲಭ್ಯದ ಶೋಚನೀಯ ಸ್ಥಿತಿ ಅರ್ಥವಾದೀತು. ಇಡೀ ಜಿಲ್ಲೆಗಾಗಿ ಒಂದು ವೈದ್ಯಕೀಯ ಮಹಾವಿದ್ಯಾಲಯವನ್ನು ಸ್ಥಾಪಿಸುವ ಅಗತ್ಯ ಈವರೆಗೆ ಆಯ್ಕೆಯಾದ ನಮ್ಮ ಜನಪ್ರತಿನಿಧಿಗಳಿಗೆ ಅರ್ಥವಾಗಲೇ ಇಲ್ಲ.** ಸರ್ಕಾರಿ ರಂಗದಲ್ಲಿ ಒಂದು ಮೆಡಿಕಲ್ ಕಾಲೇಜು ಸ್ಥಾಪನೆ ಆದಲ್ಲಿ ಮಾತ್ರ ಈ ಜಿಲ್ಲೆಯ ಜನ ಆರೋಗ್ಯಕ್ಕಾಗಿ ಪರದಾಡುವ ಸ್ಥಿತಿ ತಪ್ಪಬಹುದು. ಈ ಹಿಂದೆ ಸಂಸದ ಆಗಿದ್ದ ಅನಂತ ಕುಮಾರ್ ಜಿಲ್ಲೆಯಲ್ಲಿ 'ಬ್ಲಡ್‌ಬ್ಯಾಂಕ್' ಮಾಡಿದ್ದೇವೆ ಎಂದು ಓಟು ಪಡೆವ ಪ್ರಯತ್ನಮಾಡಿದ್ದರು. ಆದರೆ ಇನ್ನೂ ಬ್ಲಡ್ ಬ್ಯಾಂಕ್ ಬರಲೇ ಇಲ್ಲ.

ಜಿಲ್ಲಾ ಆಸ್ಪತ್ರೆಯಲ್ಲಿನ ದೊಡ್ಡ ಹಗರಣವನ್ನು ಹಿಡಿದಿರುವುದು ಶ್ಲಾಘನೀಯ ಕಾರ್ಯ. ಆದರೆ ಅಷ್ಟಕ್ಕೇ ಬೀಗ ಬೇಕಾದದ್ದಿಲ್ಲ. ಪ್ರತಿ ತಾಲೂಕಿನ ಸಿವಿಲ್ ಆಸ್ಪತ್ರೆಗಳೂ, ಪ್ರತಿಆರೋಗ್ಯ ಕೇಂದ್ರಗಳೂ ಸಣ್ಣಪುಟ್ಟ ಪ್ರಮಾಣದ ಅವ್ಯವಹಾರದಲ್ಲಿ, ಲಂಚಗಾರಿಕೆಯಲ್ಲಿ, ಔಷಧ ಮಾರಾಟದಲ್ಲಿ ತೊಡಗಿಕೊಂಡಿದೆ. ಇದನ್ನು ಪತ್ತೆಹಚ್ಚಬೇಕು. ಶಿಸ್ತು ಕ್ರಮ ಕೈಗೊಳ್ಳಬೇಕು. ಸಂಬಂಧಪಟ್ಟವರನ್ನು ಶಿಕ್ಷಿಸಬೇಕು. ಆಗ ಮಾತ್ರ ಜಿಲ್ಲೆಯ ಆರೋಗ್ಯ ಕೇಂದ್ರಗಳ ಕಾಯಕಲ್ಪ ಸಾಧ್ಯ. ಮುಂದಿನ ಕ್ರಮ ವಹಿಸುವಲ್ಲಿ ಯಾರ ಒತ್ತಾಯಕ್ಕೂ ಒಳಗಾಗದೇ ಆಸ್ಪತ್ರೆಯಲ್ಲಿ ಹರಾಜು ಮಾಡಿದ 'ಹಳೆ ಉಪಕರಣ' ಖಾಸಗಿ ನರ್ಸಿಂಗ್ ಹೋಂನಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದೆ! ಆಸ್ಪತ್ರೆಯಲ್ಲಿ ಉಪಕರಣಗಳು, ನೌಕರರು ಇಲ್ಲವೋ ಅಥವಾ ವಿನಿಯೋಗಿಸುವವರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೋ ಎಂದು ಜನ ಚಿಂತಿಸುತ್ತಿದ್ದಾರೆ.

ಹಾಲಿ - ಮಾಜಿಗಳ ನಡುವೆ ಆರೋಪ-ಪ್ರತ್ಯಾರೋಪ ಸತ್ಯ ಯಾವ ಕಡೆ?

ಸರ್ಕಾರಿ ಆಸ್ಪತ್ರೆಯಿಂದ ಕಳ್ಳಸಾಗಾಣಿಕೆ ಆಗುತ್ತಿರುವ ಔಷಧ ಮಾರಾಟ ಜಾಲವನ್ನಂತೂ ಪೋಲೀಸರು ಹಿಡಿದಿದ್ದಾರೆ. ಈ ಆರೋಪಿಗಳ ಹಿಂದಿರುವ ಕೈ ಯಾವುದು ಎಂದು ಇನ್ನಷ್ಟೆ ಬಹಿರಂಗಗೊಳ್ಳಬೇಕಾಗಿದೆ. ಇದಕ್ಕೆ ಸಂಬಂಧಿಸಿದಂತೆ ಮಾಜಿ ಮಂತ್ರಿ ಪ್ರಭಾಕರ ರಾಣೆ ಮತ್ತು ಹಾಲಿ ಶಾಸಕ ವಸಂತ್ ಅಸ್ನೋಟಿಕರ್ ಇವರ ನಡುವೆ ಬಹಿರಂಗ ಕಾಳಗ ಏರ್ಪಟ್ಟಿದೆ. ಪರಸ್ಪರರು ಆರೋಪ- ಪ್ರತ್ಯಾರೋಪದಲ್ಲಿ ತೊಡಗಿಕೊಂಡಿದ್ದಾರೆ. ಜನ ತಲೆಗೆ ಕೈ ಇಟ್ಟು ಯೋಚಿಸುತ್ತಿದ್ದಾರೆ ಸತ್ಯ ಯಾವ ಕಡೆ? ನಾವು ಯಾರ ಮಾತನ್ನು ನಂಬಬೇಕು? ಮತ್ತೆ ಪೋಲೀಸರೇ ಸಹಕರಿಸಬೇಕು.

ಕಾಂಗ್ರೆಸ್‌ನ ವಸಂತ ಅಸ್ನೋಟಿಕರ್ ಅವರು ಪತ್ರಿಕಾಗೋಷ್ಠಿಯಲ್ಲಿ ಇಡೀ ಪ್ರಕರಣವನ್ನು ಬಿಜೆಪಿಯ [illegible] ಪ್ರಭಾಕರರಾಣೆ ಮತ್ತು ಎಸ್.ಆರ್.ಪಿಕಳೆ ಅವರ ಕೈವಾಡವಿದೆ ಎನ್ನುವ ಹೇಳಿಕೆ ಕೊಟ್ಟರು. 1990 ರಿಂದ ಜಿಲ್ಲಾ ಆಸ್ಪತ್ರೆಯಲ್ಲಿ ಬಡರೋಗಿಗಳಿಗಿರುವ ಔಷಧ ಮತ್ತು ಇತರ ಸಲಕರಣೆಗಳ ಅಕ್ರಮ ಮಾರಾಟ ನಡೆಯುತ್ತಿತ್ತು. ಇದಕ್ಕೆ ಜಿಲ್ಲಾ ಆಸ್ಪತ್ರೆಯ ಅಂದಿನ ಸರಕಾರಿ ವೈದ್ಯ ತರಳೇಕರ ಎಂಬುವರೂ ಕಾರಣರಾಗಿದ್ದರು ಎಂದು ಹೇಳಿದ ಅವರು ಅದು ಸಚಿವರಾಗಿದ್ದ ಪ್ರಭಾಕರ ರಾಣೆ ಮತ್ತು ಅವರ ನಿಕಟವರ್ತಿಗಳ ಸಹಕಾರದಿಂದಲೇ ಈ 'ರಹಸ್ಯ ಔಷದ ಮಾರಾಟ ಜಾಲ' ಬೆಳೆದಿದೆ ಎಂದು ಆಪಾದಿಸಿದರು.

ಇದನ್ನು ಕೇಳಿ ಬಿಜೆಪಿಯ ಪ್ರಭಾಕರ ರಾಣೆ ಸುಮ್ಮನೆ ಕುಳಿತಿಲ್ಲ. ಈ ಹಗರಣ ಬೆಳೆದು ಬರಲು ವಸಂತ ಅಸ್ನೋಟಿಕರ್ ಅವರೇ ಕಾರಣ ಎಂದು ಹೇಳಿ ತಾನು ತಪ್ಪಿಸಿಕೊಳ್ಳಲು ಇಡೀ ಹಗರಣವನ್ನು ಬಿಜೆಪಿಯ ಮೇಲೆ ಹಾಕಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಇನ್ನೊಂದು ಮುಖ್ಯ ಅಂಶದ ಕಡೆಗೆ ಗಮನ ಸೆಳೆದು ಕಾರವಾರ ಜಿಲ್ಲಾಸ್ಪತ್ರೆಯಲ್ಲಿ ಶಾಸಕರ ದುರಾಡಳಿತ ಇದೆ ಎಂದು ಹೇಳಿ ರಾಣೆ "ಅಲ್ಲಿ ಸದ್ಯ ಎರಡು ಫಂಡ್ ಇದೆ. ಮೊದಲನೆಯದು ಅನ್ನಸಂತರ್ಪಣೆ ಫಂಡ್, ಎರಡನೆಯದು ಎಂ.ಎಲ್.ಎ. ಫಂಡ್ ಎಂಬ ಮಾಮೂಲಿ ಒದಗಿಸುವ ಹಣ ಸಂಗ್ರಹ ನಡೆಯುತ್ತಿದೆ. ಈ ವಿಚಿತ್ರ ಫಂಡಿಗೆ ಹಣ ನೀಡದ ಅಧಿಕಾರಿಗಳನ್ನು ವರ್ಗಾಯಿಸುವ ಅಥವಾ ಇನ್ನಿತರ ಕ್ರಮ ಕೈಗೊಳ್ಳುವ ಬೆದರಿಕೆ ಹಾಕಲಾಗುತ್ತಿದೆ' ಅಸ್ನೋಟಿಕರ್ ಅವರು ಆಸ್ಪತ್ರೆಯ ಆಡಳಿತ ವಿಷಯದಲ್ಲಿ ಶಾಸಕರು ಅನಗತ್ಯ ಹಸ್ತಕ್ಷೇಪ ನಡೆಸುತ್ತಿದ್ದುದೆ ಆಸ್ಪತ್ರೆಯ ಸಮಗ್ರ ಅವನತಿಗೆ ಕಾರಣ' ಎಂದರು.

ಒಬ್ಬರು ಕಾಂಗ್ರೆ ಎಂ.ಎಲ್.ಎ. ಇನ್ನೊಬ್ಬರು ಬಿಜೆಪಿ ಮುಖಂಡರು. ಇಬ್ಬರೂ ತಮ್ಮ ವಾದಕ್ಕೆ ದಾಖಲೆ ಕೊಡುವುದಾಗಿ ಹೇಳುತ್ತಾರೆ. ಹಾಗಾಗಿ ಜನರ ಪ್ರಶ್ನೆ ಸತ್ಯ ಯಾವ ಕಡೆ?

ಬೆಂಗಳೂರಿನಲ್ಲಿ ಕೃಪಾಂಕಕ್ಕಾಗಿ ವಿದ್ಯಾರ್ಥಿಗಳ ಮಹಾಪೂರ



ಕರ್ನಾಟಕ ರಾಜ್ಯ ಹೈಕೋರ್ಟ್ ವಿಭಾಗೀಯ ಪೀಠವು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಉದ್ಯೋಗದಲ್ಲಿ ನೀಡುತ್ತಿದ್ದ ಕೃಪಾಂಕವನ್ನು ರದ್ದು ಮಾಡಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಖಡ 65 ಕ್ಕಿಂತಲೂ ಹೆಚ್ಚಿನ ಜನಸಂಖ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ ನಗರವಾಸಿಗಳಿಗೂ ಗ್ರಾಮಾಂತರ ವಾಸಿಗಳಿಗೂ ಅಜಗಜಾಂತರ ವ್ಯತ್ಯಾಸಗಳಿದ್ದು, ಗ್ರಾಮೀಣ ಪ್ರದೇಶದ ಜನರು ಸಮಸ್ಯೆಗಳ ಕೂಪದಲ್ಲೇ ಇರುವಂತೆ ನಮ್ಮ ಸಮಾಜದ ವ್ಯವಸ್ಥೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ಮುಂದುವರೆಸಿಕೊಂಡು ಬರುತ್ತಿವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಶೈಕ್ಷಣಿಕ ವಿಷಯದಲ್ಲಿ ಯಾವ ರೀತಿಯ ಪ್ರಗತಿಯೂ ಕಂಡಿದ್ದಿಲ್ಲ. ಆರ್ಥಿಕ ಸಮಸ್ಯೆಗಳಿಂದ ಬಳಲುತ್ತಿರುವ ಹಳ್ಳಿಗಾಡಿನ ಜನರು ಉತ್ತಮ ವಿದ್ಯಾಭ್ಯಾಸಗಳಿಸಲು ಪಟ್ಟಣಗಳಲ್ಲಿಗೆ ಬಂದು ದುಬಾರಿ ವೆಚ್ಚಕೊಟ್ಟು ವಿದ್ಯಾಭ್ಯಾಸಗಳಿಸಲು ಸಾಧ್ಯವಿಲ್ಲ. ತಮ್ಮ ತಮ್ಮ ಊರುಗಳಲ್ಲಿ ಇರುವ ಶಾಲೆಗಳು, ಸರ್ಕಾರಗಳ ಕನಿಷ್ಠ ಕಾಳಜಿಯೂ ಇಲ್ಲದೆ ಬೇಜವಾಬ್ದಾರಿತನ ನಡೆಯುತ್ತಿರುವ ಶಾಲೆಗಳು ನಶಿಸಿಹೋಗುತ್ತಿವೆ.

ನಗರದ ವಿದ್ಯಾರ್ಥಿಗಳಿಗೆ ಲಭ್ಯವಿರುವವಂತೆ ಶಿಕ್ಷಣದಲ್ಲಿ ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಕಿಂಚಿತ್ತೂ ಶೈಕ್ಷಣಿಕ ವ್ಯವಸ್ಥೆ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಗ್ರಾಮಾಂತರ ವಿದ್ಯಾರ್ಥಿಗಳ ಸರ್ಕಾರಿ ಕೆಲಸಗಳಿಗೆ ಶೇ. 10 ಕೃಪಾಂಕ ನೀಡುತ್ತಿತ್ತು. ಆದರೆ ರಾಜ್ಯ ಹೈಕೋರ್ಟ್ ನಗರ ಹಾಗೂ ಗ್ರಾಮಾಂತರ ವಿದ್ಯಾರ್ಥಿಗಳ ಮಧ್ಯ ತಾರತಮ್ಯ ಬೇಡವೆಂದು ಕೃಪಾಂಕವನ್ನು ರದ್ದುಪಡಿಸಿದೆ. ಮೊದಲೇ ಎಲ್ಲಾ ರೀತಿಯ ಸವಲತ್ತುಗಳಿಂದ ವಂಚಿತರಾಗಿರುವ, ಅದರಲ್ಲೂ ಶಿಕ್ಷಣ, ಉದ್ಯೋಗದಲ್ಲಿ ಹಿಂದುಳಿದಿರುವ ಗ್ರಾಮಾಂತರ ಪ್ರದೇಶದ ಜನರನ್ನು ಇನ್ನಷ್ಟು ಹಿಂದಕ್ಕೆ ನೂಕುವ ಪ್ರಯತ್ನ ಇದಾಗಿದೆ.

ಕೃಪಾಂಕ ರದ್ದು ಪಡಿಸುವುದರಿಂದ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಸಿಗುತ್ತಿದ್ದ ಅಲ್ಪಸ್ವಲ್ಪ ಶಿಕ್ಷಣ ಉದ್ಯೋಗ ಸೌಲಭ್ಯಗಳು ಇಲ್ಲದಂತಾಗಿವೆ. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಶೈಕ್ಷಣಿಕ ವಿಷಯದಲ್ಲಿ ಬಹಳ ಅಂತರ ವಿರುವುದರಿಂದ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಬೇಕೆಂದು ರಾಜ್ಯದಾದ್ಯಂತ ಭಾರತ ವಿದ್ಯರ್ಥಿ ಫೆಡರೇಷನ್ (ಎಸ್.ಎಫ್.ಐ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಸಂಘಟನೆಗಳು ಈ ಕೂಡಲೇ "ಸುಗ್ರೀವಾಜ್ಞೆ"ಯನ್ನು ಹಾಗೂ ಸಂವಿಧಾನ ತಿದ್ದುಪಡಿ ಮಾಡಬೇಕೆಂದು ಹೊರಡಿಸಬೇಕೆಂದು ದಿನಾಂಕ 22-12-1999ರಂದು "ರಾಜ್ ಭವನ್ ಚಲೋ" ಹಾಗೂ ಬಹಿರಂಗಸಭೆಯನ್ನು ಹಮ್ಮಿಕೊಂಡಿತು.

ರಾಜ್ಯದ ಮೂಲೆ ಮೂಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರು ನಗರಕ್ಕೆ ಆಗಮಿಸಿದ ವಿದ್ಯಾರ್ಥಿ- ಯುವಜನರು ಚಿಕ್ಕಲಾಲ್‌ಬಾಗ್‌ನಿಂದ ಬೃಹತ್ ರ್‍ಯಾಲಿ ಹೊರಟು ಮುಗಿಲು ಮುಟ್ಟುವ ಘೋಷಣೆಗಳನ್ನು ಕೂಗುತ್ತಿದ್ದರು. "ಬೇಕೇ ಬೇಕು ಕೃಪಾಂಕ ಬೇಕು, ಸುಗ್ರೀವಾಜ್ಞೆ ಜಾರಿಯಾಗಲಿ, ಎಲ್ಲಿಯವರೆಗೆ ಹೋರಾಟ ಗೆಲ್ಲುವವರೆಗೆ ಹೋರಾಟ" ಎಂಬ ಹಲವಾರು ಘೋಷಣೆಗಳೊಂದಿಗೆ ಮಳೆ ಸುರಿಯುತ್ತಿದ್ದರೂ ಅಂಜದೆ ನಗರದ ಪ್ರಮುಖ ರಸ್ತೆಗಳಿಂದ ಮಹಾರಾಣಿ ಕಾಲೇಜು, ಶೇಷಾದ್ರಿಪುರಂ ರಸ್ತೆ, ಮೈಸೂರು ಬ್ಯಾಂಕ್ ವೃತ್ತ ಹಾಗೂ ಕಾರ್ಪೋರೇಷನ್ ಸರ್ಕಲ್‌ವರೆಗೆ ಬೃಹತ್ ರ್‍ಯಾಲಿಯನ್ನು ನಡೆಸಿ ಬನಪ್ಪ ಪಾರ್ಕ್‌ನಲ್ಲಿ ಬಹಿರಂಗಸಭೆಯನ್ನು ಏರ್ಪಡಿಸಿದ್ದರು. ಸುರಿಯುತ್ತಿರುವ ಜಡಿ ಮಳೆಯಲ್ಲೂ ಸಾವಿರಕ್ಕಿಂತ ಹೆಚ್ಚಿನ ಮಹಿಳಾ ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ಕೃಪಾಂಕ ನೀಡುವವರೆಗೂ ಹೋರಾಟ ನಿಲ್ಲದು ಎಂಬ ಎಚ್ಚರಿಕೆಯನ್ನು, ಘೋಷಣೆಗಳ ಮೂಲಕ ಸರ್ಕಾರಕ್ಕೆ ನೀಡುತ್ತಿದ್ದರು.

ರಾಜ್ಯಪಾಲರಿಗೆ ಸುಗ್ರೀವಾಜ್ಞೆಯನ್ನು ಜಾರಿಗೆ ತರಲು ಹಾಗೂ ಸಂವಿಧಾನದಲ್ಲಿ ತಿದ್ದುಪಡಿ ತರಲು ರಾಜ್ಯ ಎಸ್.ಎಫ್.ಐ ಹಾಗೂ ಡಿ.ವೈ.ಎಫ್.ಐ ಸಂಘಟನೆಗಳ ಪದಾಧಿಕಾರಿಗಳ ನಿಯೋಗ ರಾಜ್ಯಪಾಲರನ್ನು ಭೇಟಿಮಾಡಿ ಮನವಿಯನ್ನು ಕೊಟ್ಟಿತ್ತು. ಅಲ್ಲದೇ ಈ ಕೂಡಲೇ ಸುಗ್ರೀವಾಜ್ಞೆಯನ್ನು ಹೊರಡಿಸಬೇಕೆಂದು ಆಗ್ರಹಿಸಿದರು.

ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಹಲವು ಜನಪರ ಸಂಘಟನೆಗಳ ನಾಯಕರಾದ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಜಗನ್ನಾಥ್, ಕಾರ್ಮಿಕರ ಮುಖಂಡರಾದ ವಿ.ಜೆ.ಕೆ. ನಾಯರ್, ಜನವಾದಿ ಮಹಿಳಾ ಸಂಘಟನೆಯ ಎನ್. ಪ್ರಭಾ ಮುಂತಾದವರು ಬಹಿರಂಗಸಭೆಯನ್ನು ಉದ್ದೇಶಿಸಿ ಮಾತಾಡಿದರು. ಬೃಹತ್ ರ್‍ಯಾಲಿಯನ್ನು ಸಂಘಟಿಸಿದ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ಸಂಘಟನೆಯ ಪದಾಧಿಕಾರಿಗಳು ಗ್ರಾಮಾಂತರ ವಿದ್ಯಾರ್ಥಿ ಯುವಜನರಿಗೆ ಕೃಪಾಂಕವನ್ನು ನೀಡುವವರೆಗೆ ನಮ್ಮ ಹೋರಾಟ ನಿಲ್ಲದು, ಹಂತ ಹಂತವಾಗಿ ಹೋರಾಟವನ್ನು ಚುರುಕು ಗೊಳಿಸಬೇಕಾಗಿದೆ ಎಂದು ವಿದ್ಯಾರ್ಥಿ ಯುವಜನರಿಗೆ ಕರೆಕೊಟ್ಟರು.

ಕೃಪಾಂಕ ರದ್ದು : ಕನಕಪುರದಲ್ಲಿ ಭಾರಿ ಪ್ರತಿಭಟನೆ

ಎಬಿವಿಪಿ ಪಾಳೆಯದಲ್ಲಿ ಎಸ್.ಎಫ್.ಐ ಉದಯ

ಗ್ರಾಮಾಂತರ ವಿದ್ಯಾರ್ಥಿ ಅಭ್ಯರ್ಥಿಗಳಿಗೆ ಸರ್ಕಾರಿ ಕೆಲಸದಲ್ಲಿ ನೀಡುತ್ತಿದ್ದ ಕೃಪಾಂಕವನ್ನು ಕರ್ನಾಟಕ ಹೈಕೋರ್ಟ್ ರದ್ದು ಮಾಡಿರುವುದನ್ನು ವಿರೋಧಿಸಿ, ಕನಕಪುರ ತಾಲ್ಲೂಕಿನಲ್ಲಿ ನೂತನವಾಗಿ ಎಸ್.ಎಫ್.ಐ. ಸಂಘಟನೆ ಉದಯಿಸಿ ಭಾರಿ ಪ್ರತಿಭಟನಾ ಸಭೆಯನ್ನು ನಡೆಸಿತು. ಕನಕಪುರ ತಾಲ್ಲೂಕಿನ ರೂರಲ್ ಕಾಲೇಜ್, ಮುನ್ಸಿಪಾಲ್ ಕಾಲೇಜ್ ಮತ್ತು ಹಾರೋಹಳ್ಳಿಯ ಜೂನಿಯರ್ ಕಾಲೇಜ್ ವಿದ್ಯಾರ್ಥಿಗಳು ಕನಕಪುರ ತಾಲ್ಲೂಕಿನ ಎಸ್.ಎಫ್.ಐ ಘಟಕದ ನೇತೃತ್ವದಲ್ಲಿ ಸಾವಿರಕ್ಕಿಂತಲೂ ಹೆಚ್ಚಿನ ಮಹಿಳಾ ವಿದ್ಯಾರ್ಥಿನಿಯರು ಸೇರಿದಂತೆ 2 ಸಾವಿರಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಕನಕಪುರ ಟೌನಿನ ಪ್ರಮುಖ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಬೃಹತ್ ರ್‍ಯಾಲಿಯನ್ನು ನಡೆಸಿ ಆನಂತರ ತಾಲ್ಲೂಕು ತಹಶೀಲ್ದಾರ್ ಕಛೇರಿ ಎದುರು ಬಹಿರಂಗ ಸಭೆಯನ್ನು ಉದ್ದೇಶಿಸಿ ಎಸ್.ಎಫ್.ಐ ಮುಖಂಡರಾದ ಆರ್.ಎಂ. ರಮೇಶ್ ಮತ್ತು ಬಿ. ರಾಜಶೇಖರ ಮೂರ್ತಿ ಮಾತಾಡಿದರು. ಅನಂತರದಲ್ಲಿ ತಾಲ್ಲೂಕು ತಹಶೀಲ್ದಾರವರಿಗೆ ಮನವಿಪತ್ರವನ್ನು ಸಲ್ಲಿಸಿದರು. ತಹಶೀಲ್ದಾರರು ಮನವಿ ಪತ್ರವನ್ನು ಸ್ವೀಕರಿಸಿ ವಿದ್ಯಾರ್ಥಿಗಳನ್ನು ಕುರಿತು ಮಾತಾಡಿದರು.

ಚನ್ನಪಟ್ಟಣ: ಕೃಪಾಂಕ ಪಡೆಯುವುದು ನಮ್ಮ ಹಕ್ಕು

ಚನ್ನಪಟ್ಟಣ ತಾಲೂಕಿನ ಸಾರ್ವಜನಿಕ ಪದವಿ ಪೂರ್ವ ಕಾಲೇಜ್, ಕೃಪಾಂಕ ಹಿತರಕ್ಷಣಾ ಸಮಿತಿ ಹಾಗೂ ಪದವಿ ಕಾಲೇಜ್ ವಿದ್ಯಾರ್ಥಿಗಳು ಮತ್ತು ಚನ್ನಪಟ್ಟಣದ ಎಸ್.ಎಫ್.ಐ ಸಂಘಟನೆಗಳು ಕೃಪಾಂಕ ರದ್ದುಪಡಿಸಿರುವುದನ್ನು ವಿರೋಧಿಸಿ ಬೃಹತ್ ರ್‍ಯಾಲಿ ಮತ್ತು ಬಹಿರಂಗಸಭೆಯನ್ನು ನಡೆಸಿದವು. ಕರ್ನಾಟಕ ಹೈಕೋರ್ಟ್ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣದಲ್ಲಿರುವ ಅಂತರವನ್ನು ಗುರುತಿಸದೆ, ಬೇಜವಾಬ್ದಾರಿತನದಿಂದ ಕೃಪಾಂಕವನ್ನು ರದ್ದುಮಾಡಿದೆ ಎಂದು ಚನ್ನಪಟ್ಟಣ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತಾಡಿದರು. ಮಹಿಳಾ ವಿದ್ಯಾರ್ಥಿನಿಯರು ಸೇರಿದಂತೆ 2 ಸಾವಿರಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿ ಹೋರಾಟದ ಹೆಜ್ಜೆಯನ್ನು ಮುಂದಿಟ್ಟಿದ್ದೀರಿ ಕೃಪಾಂಕ ಪಡೆಯುವರೆಗೂ ಹೋರಾಟ ಮುಂದುವರೆಸೋಣವೆಂದು ಸಾರ್ವಜನಿಕ ವಿದ್ಯಾಸಂಸ್ಥೆಯ ಸಂಸ್ಥಾಪಕರು ನುಡಿದರು. ಎಸ್.ಎಫ್.ಐನ ಮುಖಂಡರು ಸಭೆಯನ್ನು ಉದ್ದೇಶಿಸಿ ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ ತಾಲ್ಲೂಕುಗಳಲ್ಲಿ ವಿದ್ಯಾರ್ಥಿಗಳು ಪ್ರತಿಭಟಿಸುತ್ತಿದ್ದಾರೆ. ಈ ಕೂಡಲೇ ರಾಜ್ಯ, ಕೇಂದ್ರ ಸರ್ಕಾರ ಗಮನಹರಿಸಿ ಸಂವಿದಾನದಲ್ಲಿ ತಿದ್ದುಪಡಿ ತಂದು, ಸುಗ್ರೀವಾಜ್ಞೆ ಹೊರಡಿಸಬೇಕು ಇಲ್ಲವಾದಲ್ಲಿ ರಾಜ್ಯದಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ರ್‍ಯಾಲಿಯನ್ನು ಸಂಘಟಿಸಿದ ಪದಾಧಿಕಾರಿಗಳು ತಾಲ್ಲೂಕು ತಹಶೀಲ್ದಾರ್‌ರವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ದೇನವಹಳ್ಳಿಯಲ್ಲೂ ಪ್ರತಿಭಟನೆ

ಕರ್ನಾಟಕ ಹೈಕೋರ್ಟ್ ಕೃಪಾಂಕರದ್ದುಪಡಿಸಿರುವುದನ್ನು ವಿರೋಧಿಸಿ ದೇವನಹಳ್ಳಿಯ ಕಾಲೇಜ್‌ಗಳ ಎಸ್.ಎಫ್.ಐ ಘಟಕಗಳು ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನು ನಡೆಸಿದವು. ದೇವನಹಳ್ಳಿಯಲ್ಲಿ ಟಿ.ಸಿ.ಹೆಚ್. ಕಾಲೇಜಿನ ವಿದ್ಯಾರ್ಥಿಗಳು ರಾಜ್ಯದ ಗ್ರಾಮಾಂತರ ಪ್ರದೇಶಗಳಿಂದ ಬಂದು ಸೇರಿದ್ದ ವಿದ್ಯಾರ್ಥಿಗಳು ಹೈಕೋರ್ಟ್ ತೀರ್ಪನ್ನು ತೀವ್ರವಾಗಿ ಖಂಡಿಸಿ ಎಸ್.ಎಫ್.ಐ ನೇತೃತ್ವದಲ್ಲಿ ದೇವನಹಳ್ಳಿಯ ಪ್ರಥಮ ದರ್ಜೆ ಕಾಲೇಜ್, ಸರ್ಕಾರಿ ಪದವಿ ಪೂರ್ವ ಕಾಲೇಜ್, ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ದೇವನಹಳ್ಳಿ ಪೇಟೆ ಬೀದಿಗಳಲ್ಲಿ ರ್‍ಯಾಲಿಯನ್ನು ನಡೆಸಿ ತಾಲ್ಲೂಕು ಕಛೇರಿಯೆದುರು ಬಹಿರಂಗ ಸಭೆಯನ್ನು ನಡೆಸಿದವು. ಸಭೆಯನ್ನು ಉದ್ದೇಶಿಸಿ ಎಸ್.ಎಫ್.ಐ ಪದಾಧಿಕಾರಿಗಳು ಮಾತಾಡಿ ಕರ್ನಾಟಕ ಹೈಕೋರ್ಟಿನ ತೀರ್ಪಿನ ಬಗ್ಗೆ ತೀವ್ರ ತರಾಟೆಗೆ ತೆಗೆದುಕೊಂಡು ಈ ಕೂಡಲೇ ಸುಗ್ರೀವಾಜ್ಞೆಯನ್ನು ಹೊರಡಿಸಬೇಕೆಂದು ಒತ್ತಾಯಸುತ್ತಾ ತಾಲ್ಲೂಕು ತಹಶಿಲ್ದಾರ್‌ವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಬೆಂಗಳೂರು ವಿ.ವಿ ಜ್ಞಾನ ಭಾರತಿ ಸಂಪೂರ್ಣ ಬಂದ್

ಗ್ರಾಮಾಂತರ ಕೃಪಾಂಕ ಮುಂದುವರಿಕೆಗಾಗಿ ಸುಗ್ರೀವಾಜ್ಞೆ ಹೊರಡಿಸಬೇಕು, ಸಂವಿಧಾನ ತಿದ್ದುಪಡಿ ತರಬೇಕೆಂದು ಆಗ್ರಹಿಸಿ ಎಸ್.ಎಫ್.ಐ ನೇತೃತ್ವದಲ್ಲಿ ಡಿಸೆಂಬರ್ 22,99 ರಂದು ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಕೇಂದ್ರ ಸಂಪೂರ್ಣವಾಗಿ ಬಂದ್ ಆಗಿತ್ತು.

ಕಲಾ ವಿಭಾಗ, ವಿಜ್ಞಾನ ವಿಭಾಗ, ಇಂಜಿನಿಯರಿಂಗ್ ವಿಭಾಗ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಬೃಹತ್ ಮೆರವಣಿಗೆ ನಡೆಸಿ, ಉಪಕುಲಪತಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಅಲ್ಲದೆ ಇದೇ ದಿನ ಬೆಂಗಳೂರಿನಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಪಾಲ್ಗೊಂಡರು.

ಬಿ.ರಾಜಶೇಖರ ಮೂರ್ತಿ

ಡಿಸೆಂಬರ್ 31 ಗ್ರಾಮಾಂತರ ಕೃಪಾಂಕ ಬೇಡಿಕೆ ದಿನ

ರಾಜ್ಯ ಮಟ್ಟದ ಬೃಹತ್ ರ್‍ಯಾಲಿಯ ನಂತರ ಹೋರಾಟದ ಮುಂದಿನ ಹಂತವಾಗಿ ಡಿಸೆಂಬರ್ 31,99ರಂದು ರಾಜ್ಯದಾದ್ಯಂತ ವಿದ್ಯಾರ್ಥಿ ಸಮುದಾಯ ಕಪ್ಪು ಬ್ಯಾಡ್ಜ್‌ಗಳನ್ನು ಧರಿಸಿ ಶಾಲಾ ಕಾಲೇಜಿಗೆ ಹಾಜರಾಗುವ ಮೂಲಕ ವ್ಯಾಪಕವಾಗಿ ಕೃಪಾಂಕ ಬೇಡಿಕೆ ದಿನ ಆಚರಿಸಬೇಕೆಂದು ಎಸ್.ಎಫ್.ಐ ಕರ್ನಾಟಕ ರಾಜ್ಯ ಸಮಿತಿ ಕರೆನೀಡಿದೆ.

ರಾಜ್ಯದ ವಿವಿದೆಡೆ ವ್ಯಾಪಕ ಪ್ರತಿಭಟನೆಗಳು

ಡಿಸೆಂಬರ್ 22, 99ರ ರಾಜ್ಯ ಮಟ್ಟದ ರ್‍ಯಾಲಿಗೆ ಪೂರ್ವಬಾರಿಯಾಗಿ ರಾಜ್ಯಾದ್ಯಂತ ಪ್ರತಿಭಟನೆಗಳು ರಾಜ್ಯದಾದ್ಯಂತ ನಡೆದಿವೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಅಂಕೋಲಾ ಹೊನ್ನಾವರ ಭಟ್ಕಳ, ಕಾರವಾರ ಮುಂತಾದ ಕಡೆಗಳಲ್ಲಿ ಸಾವಿರಾರು ಜನ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಬೃಹತ್ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದಾರೆ. ಮಂಡ್ಯಾ ಜಿಲ್ಲೆಯಲ್ಲಿ ನಗರದ ಕಾಲೇಜ್ ಬಂದ್, ಮದ್ದೂರು ಮಳವಳ್ಳಿಗಳಲ್ಲಿ ತರಗತಿ ಬಹಿಷ್ಕಾರ ಮೆರವಣಿಗೆಗಳೂ ನಡೆದಿದೆ. ಧಾರವಾಡ ಜಿಲ್ಲೆಯಲ್ಲಿ ಡಿ. 17 ರಂದು ಕುಂದಗೋಳ ಬಂದ್ ಯಶಸ್ವಿಯಾಗಿದೆ. ಹುಬ್ಬಳ್ಳಿಯಲ್ಲಿ ಎಸ್.ಎಫ್.ಐ-ಎ.ಐ.ಎಸ್.ಎಫ್ ಜಂಟಿಯಾಗಿ ಪ್ರತಿಭಟನೆ ನಡೆಸಿವೆ. ಕಲಘಟಗಿಯಲ್ಲಿ ಜನಜಾಗೃತಿ ರ್‍ಯಾಲಿ ನಡೆದಿದೆ. ಕೊಲಾರ ಜಿಲ್ಲೆಯ ಕೋಲಾರ ಬಾಗೇಪಲ್ಲಿ ಗುಡಿಬಂಡೆ ಮುಂತಾದ ಕಡೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ ಪ್ರತಿಭಟನೆಗಳು ನಡೆದಿವೆ. ಮೈಸೂರಿನ ಹುಣಸೂರಿನಲ್ಲಿ, ಮಂಗಳೂರು, ಬಳ್ಳಾರಿ, ಹಗರಿಬೊಮ್ಮನ ಹಳ್ಳಿ, ಹೂವಿನಹಡಗಲಿ, ಹೊಸಪೇಟೆ, ಬೀದರ್, ಹುಮನಾಬಾದ್, ರಾಯಚೂರು, ಜಾಲಹಳ್ಳಿ, ಹಟ್ಟಿ, ಗಜ್ಜೂರು, ಸಿಂಧನೂರು ಮುಂತಾದೆಡೆ ಪ್ರತಿಭಟನೆಗಳು ರಸ್ತೆತಡೆ ನಡೆದಿವೆ. ದಾವಣಗೆರೆ ಜಗಳೂರು, ಹರಪನಹಳ್ಳಿ, ಗಂಗಾವತಿ, ಗುಲ್ಬರ್ಗಾ ಜಿಲ್ಲೆಯ ಶಾಪುರ ಸುರಪುರ, ಆಳಂದ, ಕಮಲಾಪುರ, ಕರ್ಜಗಿ ಮುಂತಾದೆಡೆ ಪ್ರತಿಭಟನೆ ರಸ್ತೆ ತಡೆಗಳು ಸೈಕಲ್ ಜಾಥಾ ಇತ್ಯಾದಿಗಳು ನಡೆದಿವೆ. ಗದಗ್, ಬೆಳವಣಿಕೆ, ಸೂಡಿಯಲ್ಲಿ ರಸ್ತೆತಡೆ, ಗಜೇಂದ್ರಗಡ, ನೇರೇಗಲ್‌ನಲ್ಲಿ ಪ್ರತಿಭಟನೆಗಳು ನಡೆದಿವೆ. ಕೊಡಗಿನ ಭಾಗಮಂಡಲ ತುಮಕೂರಿನ ತುರುವೇಕೆರೆ ಚಿಕ್ಕನಾಯಕನಹಳ್ಳಿ ಮುಂತಾದೆಡೆ ವಿಜಾಪುರ, ಇಂಡಿ, ರಾಮದುರ್ಗ, ಹಾಗೂ ಹಾಸನ ಮುಂತಾದಕಡೆಗಳಲ್ಲಿ ಪ್ರತಿಭಟನೆ ಮೆರವಣಿಗೆ ಇತ್ಯಾದಿಗಳು ನಡೆದಿವೆ.

ಹಗರಿಬೊಮ್ಮನಹಳ್ಳಿಯಲ್ಲಿ ಹೈಟೆಕ್ ಕೃಷ್ಣರನ್ನು ಕಾಡಿದ ಕೃಪಾಂಕ

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ಡಿಸೆಂಬರ್ 23ರಂದು ನಡೆದಿರುವ ಘಟನೆ ಗ್ರಾಮಾಂತರ ವಿದ್ಯಾರ್ಥಿಗಳ ಸಮಸ್ಯೆಯ ತೀವ್ರತೆಯನ್ನು ಸಾರುವಂತಿದೆ. ನೀರಾವರಿ ಯೋಜನೆಯೊಂದರ ಸಮೀಕ್ಷೆಗೆ ಬಂದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರನ್ನು ಎಸ್.ಎಫ್.ಐ, ಡಿ.ವೈ.ಎಫ್.ಐ ನೇತೃತ್ವದಲ್ಲಿ ಕಾಲೇಜು ವಿದ್ಯಾರ್ಥಿಗಳು ತಡೆದು, ಸುಗ್ರೀವಾಜ್ಞೆ ಹೊರಡಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಕೃಪಾಂಕವನ್ನು ರದ್ದುಪಡಿಸಿದ ಸುಪ್ರಿಂ ಕೋರ್ಟಿನ ಹಲವು ತೀರ್ಪನ್ನು ಉಲ್ಲೇಖಿಸಿ ರಾಜ್ಯ ಹೈಕೋರ್ಟ್ ತೀರ್ಪು ನೀಡಿದ್ದರೂ ಸಹ ಮತ್ತೆ ಸುಪ್ರಿಂ ಕೋರ್ಟಿನಲ್ಲಿ ದಾವೆ ಮುಂದುವರಿಸಲು ಉತ್ತಮ ವಕೀಲರನ್ನು ನೇಮಿಸುವದಾಗಿ ಮುಖ್ಯಮಂತ್ರಿಗಳು ಹೇಳಿ ಜಾರಿಕೊಂಡಿದ್ದಾರೆ. ಉತ್ತರದಿಂದ ಅಸಮಾಧಾನಗೊಂಡ ವಿದ್ಯಾರ್ಥಿಗಳು ಪ್ರತಿಭಟಿಸಿದಾಗ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ವಿದ್ಯಾರ್ಥಿಗಳು ಬೇಡಿಕೆಗಳನ್ನು ಸಮಾಧಾನದಿಂದ ಕೇಳಿ ಆ ಕುರಿತು ಗಂಭೀರವಾಗಿ ಯೋಚಿಸುವ ತಾಳ್ಮೆಯೂ ನಮ್ಮ ಹೈಟೆಕ್ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣಾ ಅವರಿಗಿಲ್ಲವೇ?

ಕೋಲಾರದ ಹಾಲು ಉತ್ಪಾದಕರ ಮೇಲೆ ಅಮಾನುಷ ದಾಳಿ

ಹಾಲಿನ ದರವನ್ನು ಇಳಿಸಿದ ಕೋಲಾರ ಹಾಲಿನ ಡೈರಿಯ ಕ್ರಮವನ್ನು ಪ್ರತಿಭಟಿಸಿ, ಅದನ್ನು ಸರಿಪಡಿಸಬೇಕೆಂದು ಒತ್ತಾಯಿಸಿ, ಶಾಂತರೀತಿಯಲ್ಲಿ ಚಳುವಳಿ ನಡೆಸಿದ ರೈತರ ಮೇಲೆ ಪೊಲೀಸರು ನಡೆಸಿದ ಲಾಠಿ ಚಾರ್ಜ್‌ನಿಂದ ಪ್ರಾಂತ ರೈತ ಸಂಘದ ಮುಖಂಡರನ್ನು ಒಳಗೊಂಡು ಹಲವಾರು ರೈತರಿಗೆ ಗಾಯಗಳಾಗಿದ್ದು, ಎಲುಬುಗಳು ಮುರಿದಿವೆ. ಕಿರಾತಕ ಎಸ್.ಪಿ.ಯನ್ನು ಸಸ್ಪೆಂಡ್ ಮಾಡಿ, ವಿಚಾರಣೆ ನಡೆಸಿ ಕಠಿಣ ಕ್ರಮ ಜರುಗಿಸಲು ಆಗ್ರಹಿಸಿ ಧರಣಿ ಮುಂದುವರಿದಿದೆ.

ಪ್ರತಿವರ್ಷವೂ ಕೂಡ ಈ ಅವಧಿಯಲ್ಲಿ ಹಾಲಿನ ಉತ್ಪಾದನೆ ಸಹಜವಾಗಿಯೇ ಹೆಚ್ಚಾಗಲಿ ದೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಕೋಲಾರದ ಡೈರಿ ಪ್ರತ್ಯೇಕವಾಗಿರುವುದರಿಂದ ಹೆಚ್ಚಿನ ಹಾಲಿನ ನಿರ್ವಹಣೆ ಮಾಡಬೇಕಾದ್ದು ಹೊಣೆ ಅದರ ಮೇಲೆ ಇದೆ. ಇಂತಹ ಸನ್ನಿವೇಶವನ್ನು ನಿಭಾಯಿ ಸಲು ಸೂಕ್ತವಾದ ಕ್ರಮಗಳನ್ನೇ 'ಕೋಮಲ್' ವಹಿಸದೇ, ನಿರ್ಲಕ್ಷ್ಯವಹಿಸುತ್ತಾ ಬಂದಿದೆ. ಹೆಚ್ಚಿನ ಹಾಲನ್ನು ಸಂಸ್ಕರಿಸಿ, ಪುಡಿ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಒಂದು ಪರಿಹಾರ ಇದಕ್ಕಾಗಿ ಸೂಕ್ತ ಯೋಜನೆ ರೂಪಿಸಲು ಆಡಳಿತ ಮಂಡಳಿ ಕ್ರಮವನ್ನೇ ವಹಿಸಿಲ್ಲ. ಬದಲಾಗಿ ಹಾಲಿನ ದರಗಳನ್ನು ಕಡಿಮೆಮಾಡಿ ಮಾರಾಟ ಆಗದೇ ಉಳಿಯಬಹುದಾದ ಹಾಲಿನ ನಷ್ಟದ ಹೊಣೆಯನ್ನು ರೈತರ ಹೆಗಲಿಗೆ ಹೇರಿಬಿಡಲು ಆಡಳಿತ ಮಂಡಳಿ ಮುಂದಾಗಿದೆ. ಈಗಾಗಲೇ ಮೇವು ಪೌಷ್ಠಿಕ ಆಹಾರ, ನಿರ್ವಹಣಾ ವೆಚ್ಚಗಳು, ವಿಪರೀತ ಹೆಚ್ಚಾಗಿದ್ದು, ಜೀವನ ನಿರ್ವಹಣೆಯೇ ದುಸ್ತರವಾಗಿರುವಾಗ, ಆಡಳಿತ ಮಂಡಳಿಯು ಅವರಿಗೆ ಒಂದು ರೂಪಾಯಿ ಬೆಲೆ ಇಳಿಸಿದ್ದು ರೈತರ ಜೀವನದ ಮೇಲಿನ ದಾಳಿಮಾಡಿಧೆ. ಹೀಗೆ ಕಂಗಾಲಾದ ರೈತರು ಪ್ರತಿಭಟನೆ ನಡೆಸಿದಾಗ, ಸಾಂತ್ವಾನದಿಂದ ವರ್ತಿಸದೇ ನಿರಾಯುಧ ರೈತರ ಮೇಲೆ ಲಾಠಿ, ಬೂಟುಗಳ ಮೂಲಕವೇ ದೌರ್ಜನ್ಯ ನಡೆಸಿದ್ದು ಅಮಾನುಷವಾಗಿದೆ. ಈ ಜನ ಮರ್ದನದ ಕೆಲಸಗಳಲ್ಲಿ ದರ್ಪಿಷ್ಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿರುವರೇ ಖುದ್ದಾಗಿ ನಿರ್ದೇಶಿಸಿರುವುದು ಗಂಭೀರವಾದ ವಿಷಯ. ಈ ಸಂಗತಿ ಕೇವಲ ಕಾನೂನು ಪಾಲನೆಯ ವಿಷಯವಾಗಿಲ್ಲ ಇನ್ನೂ ಅನೇಕ ಸ್ಥಾಪಿತ ಹಿತಾಸಕ್ತಿಗಳೂ ಆಡಳಿತಮಂಡಳಿಯ ಜೋಡಿಯಾಗಿ ಭಾಗಿಯಾಗಿರುವುದು ಸ್ಪಷ್ಟವಾಗಿದೆ.



ಇನ್ನು ಕೋಲಾರದ ರೈತ ಹಾಗೂ ದುಡಿಯುವ ವರ್ಗದ ಜನತೆಯನ್ನು ಸಂಘಟಿಸಿ ಹೋರಾಟಕ್ಕೆ ನೇತೃತ್ವ ನೀಡುತ್ತಿರುವ ಮುಖಂಡರ ಮೇಲೆ, ಜನಚಳುವಳಿಗಳ ಮೇಲೆ ನಿರಂತರ ಆಕ್ರಮಣ ನಡೆಸುತ್ತಿರುವ ಪೊಲೀಸ್ ವರಿಷ್ಠಾಧಿಕಾರಿಯನ್ನು ಅಮಾನತ್ತುಗೊಳಿಸಿ, ವಿಚಾರಣೆ ನಡೆಸಿ, ಕಠಿಣ ಕ್ರಮ ಜರುಗಿಸಬೇಕು. ಘಟನೆ ನಡೆದು ವಾರವಾಗುತ್ತಿದ್ದರೂ ಸರ್ಕಾರವಾಗಲೀ, ಗೃಹಸಚಿವರಾಗಲೀ, ಮುಖ್ಯಮಂತ್ರಿಗಳಾಗಲೀ, ಜಿಲ್ಲೆಯ ಸಚಿವರಾಗಲಿ ಬಾಯಿಬಿಟ್ಟಿಲ್ಲ. ಇವರೆಲ್ಲಾ ಜನರನ್ನು ಕಚ್ಚಲೆಂದೇ ಬಾಯಿ ಬಿಚ್ಚುವರೋ ನೋಡಬೇಕು. ಜನತೆಯ ಚಳುವಳಿ ಬೆಳೆದಂತೆ ಇವರೆಲ್ಲರ ಬಣ್ಣಗಳೂ ಬಯಲಾಗುತ್ತವೆ ಎಂಬುದು ಸ್ಪಷ್ಟ.

ಈ ಪೊಲೀಸ್ ವರಿಷ್ಠಾಧಿಕಾರಿ ಜಯಪ್ರಕಾಶ್ ನಾಯಕ್ ಕೋಲಾರ ಜಿಲ್ಲೆಗೆ ನೇಮಕವಾದ ಮೇಲೆ ಅಲ್ಲಿ ನಡೆಯುವ ಪ್ರಜಾಸತ್ತಾತ್ಮಕ ಧಾಳಿಗಳ ಮೇಲೆಲ್ಲಾ ನಿರಂತರವಾಗಿ ಧಾಳಿ ನಡೆಸಿದ್ದಾನೆ ಎನ್ನುವುದನ್ನು ಗಮನಿಸಬೇಕು. ಹಿಂದೆ ಅಂಗನವಾಡಿ ನೌಕರರ ಚಳುವಳಿಯ ಸಂದರ್ಭದಲ್ಲಿ ಇದೇ ರೀತಿ ಅಮಾನುಷವಾಗಿ ವರ್ತಿಸಿದ ಪೊಲೀಸ್ ಅಧಿಕಾರಿಗಳು ಪಂಚಾಯತ್ ನೌಕರರು ಜಿಲ್ಲಾಧಿಕಾರಿ ಕಛೇರಿಗೆ ತೆರಳಿದಾಗ ಪ್ರತಿಯೊಬ್ಬ ನಾಯಕರನ್ನು ಗುರುತಿಸಿ, ಪ್ರತಿಕಾರ ಮನೋಭಾವ ದಿಂದ ಧಾಳಿ ಮಾಡಿ ಕೈಕಾಲುಗಳನ್ನು ಮುರಿಯು ವವರೆಗೂ ಹೊಡೆದರು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಛೇರಿಗೆ ನುಗ್ಗಿದರು.

ಈಗ ಮತ್ತೆ ಕೋಲಾರ ಜಿಲ್ಲೆಯಲ್ಲಿಯೇ ಸಹಸ್ರಾರು ಹಾಲು ಉತ್ಪಾದಕ ರೈತರು ಸೇರಿ ತಮ್ಮ ಬದುಕಿನ ಅಳಲನ್ನು ತೋಡಿಕೊಂಡು ತಮ್ಮ ಧರಣಿ ಸತ್ಯಾಗ್ರಹವನ್ನು ಅಂತ್ಯಗೊಳಿಸಿ ಚೆದುರುತ್ತಿದ್ದಾಗ ಅಶ್ರುವಾಯು ಸಿಡಿಸಿ ಲಾಠಿಚಾರ್ಜ್ ಮಾಡಿದ್ದಾರೆ. ರೈತ ಸಂಘದ ನಾಯಕ ಕೆ.ಎಂ.ವೆಂಕಟೇಶ್ ಹಾಗೂ ಪಿ.ಆರ್.ಸತ್ಯನಾರಾಯಣರ ಕೈ ಮುರಿದಿದ್ದಾರೆ. ಪ್ರತೀಕಾರ ಮನೋಭಾವದಿಂದ ಒಬ್ಬೊಬ್ಬ ನಾಯಕರನ್ನು 10-15 ಜನ ಪೋಲೀಸರು ಸುತ್ತುಗಟ್ಟಿ ಹೊಡೆದಿದ್ದಾರೆ. ಪೋಲೀಸ್ ಸೂಪರಿಂಟೆಂಡೆಂಟ್ ಎಂದು ನೇಮಕವಾಗಿರುವ ಮಹಾನುಭಾವ ಸ್ವತಃ ತಾನೇ ಶಿರಸ್ತ್ರಾಣ ಧರಿಸಿ ಲಾಠಿ ಹಿಡಿದು 300 ಪೋಲಿಸರೊಡನೆ ಸಜ್ಜಾಗಿದ್ದರೆಂಬುದೇ ಪೋಲೀಸರ ಧಾಳಿ ಯೋಜಿತವಾದುದೆಂಬುದಕ್ಕೆ ಸಾಕ್ಷಿಯಾಗಿದೆ. ಇಡೀ ರಾಜ್ಯದಲ್ಲಿ ಎಲ್ಲೆಡೆಯೂ ಇಂದು ರೈತರು ಸಂಕಷ್ಟಕ್ಕೊಳಗಾಗಿ ಸ್ವಯಂಪ್ರೇರಿತ ಚಳುವಳಿಗಳಿಗೆ ಧುಮುಕುತ್ತಿರುವಾಗ ಕಾರ್ಮಿಕರು ಸಮರಧೀರ ಚಳುವಳಿಗೆ ಸಜ್ಜಾಗುತ್ತಿರುವಾಗ ಮುಖಂಡರನ್ನೇ ಆರಿಸಿ ಬೆನ್ನಟ್ಟಿ ಧಾಳಿ ಮಾಡುವ ಈ ಕೃತ್ಯ ಮುಂದೆ ಬರಲಿರುವ ದಿನಗಳಲ್ಲಿ ಸರಕಾರ ತಳೆಯುವ ಧೋರಣೆಗೆ ಸೂಚಿಯಾಗಿದೆ. ಇತ್ತೀಚೆಗೆ ತಾನೇ ಅಧಿಕಾರಕ್ಕೆ ಬಂದ ಹೊಸ ಉತ್ಸಾಹದಲ್ಲಿರುವ ಸರ್ಕಾರ ಜನತಾದಳ, ಬಿಜೆಪಿಗಳನ್ನು ನಿರಾಕರಿಸಿ ತಮಗೆ ಮತ ನೀಡಿದ ಬಡ ಜನತೆಯ ಸಂಕಷ್ಟಕ್ಕೆ ಗಮನನೀಡದೆ, ಅವರ ಗೋಳಿಗೆ ಕಿವುಡಾಗಿ ವರ್ತಿಸಿದರೆ ರಾಜ್ಯದ ರೈತಾಪಿ ಜನತೆ ದುಡಿಯುವ ಜನತೆ ಎದ್ದು ಸೆಣಸುವವರು ಎಂಬುದನ್ನು ಕರ್ನಾಟಕದ ಇತಿಹಾಸ ಈಗಾಗಲೇ ಹಲವು ಬಾರಿ ಸಾರಿದೆ. ○

ಸ್ವತಃ ತಾನೇ ಶಿರಸ್ತ್ರಾಣ ಧರಿಸಿ ಲಾಠಿ ಹಿಡಿದ ಜಿಲ್ಲಾ ಎಸ್.ಪಿ. ಜಯಪ್ರಕಾಶ್ ನಾಯಕ್ ಸಹ ಪೋಲೀಸರೊಂದಿಗೆ ಕೆ.ಎಂ.ವೆಂಕಟೇಶ್‌ಮೇಲೆ ಹಲ್ಲೆ ನಡೆಸುತ್ತಿರುವುದು



ಯುವಜನ ಮೇಳದಲ್ಲಿ

ಸಂಘ ಪರಿವಾರದ ಕೊಳಕು ಬುದ್ಧಿ

ಕೋಮುವಾದಿ ಸಂಘಟನೆಯವರು ತಮ್ಮ ಸೈದ್ಧಾಂತಿಕ ವಿರೋಧಿಗಳನ್ನು ದೈಹಿಕವಾಗಿ ಅಥವಾ ಮಾನಸಿಕವಾಗಿ ಹಿಂಸಿಸುವ ಅಥವಾ ಜೀವ ತೆಗೆಯುವ ಕೆಲಸಗಳಲ್ಲಿ ನಿಸ್ಸೀಮರೆಂಬುದು ಈ ಹಿಂದಿನ ಹಲವಾರು ಘಟನೆಗಳಿಂದ ಸಾಬಿತಾದುದು. ಉತ್ತರ ಕನ್ನಡದಲ್ಲಿ ರಾಜಕೀಯವಾಗಿ ಅಧಿಕಾರ ಕಳೆದುಕೊಂಡಿರುವ ಸಿಟ್ಟು ಬಿಜೆಪಿಯ ವರಿಗೆ ಸಹಿಸಲಸಾಧ್ಯವಾದ ಸಂದರ್ಭ ಒದಗಿಸಿದೆ. ಕೇಂದ್ರದಲ್ಲಿ ಗದ್ದುಗೆ ಏರಿರುವ ಭರದಲ್ಲಿ ತಮಗಾಗದವರ ಮೇಲೆ ಎಗರಾಡುವುದು, ಕೆದಕುವುದು ಅತಿಯಾಗುತ್ತಾ ಬಂದಿದೆ. ಹಿಂದು ಧರ್ಮವನ್ನು ಗುತ್ತಿಗೆ ಹಿಡಿದವರಂತೆ ನಟಿಸುವ ಇವರಿಗೆ ಎಲ್ಲರೂ ತಮ್ಮ ತತ್ವವನ್ನೇ ಒಪ್ಪಿ 'ಜೀ ಹುಜೂರ್' ಎಂಬಂತೆ ತಲೆಬಾಗಿ ನಡೆಯ ಬೇಕು ಎನ್ನುವ ಅವರ ದಿಮಾಕು ತೋರಿಸುವ ಸಂಗತಿಯೊಂದು ಕಳೆದ ತಿಂಗಳು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನಲ್ಲಿ ನಡೆಯಿತು.

ನವೆಂಬರ್ 13, 14 ರಂದು ವಜ್ರಳ್ಳಿಯಲ್ಲಿ ಯಲ್ಲಾಪುರ ತಾಲೂಕು ಯುವಜನ ಮೇಳವನ್ನು ಜರುಗಿಸಲು ನಿರ್ಧರಿಸಿ ಪೂರ್ವತಯಾರಿ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ತಾಲೂಕಿನ ಹಿರಿಯ ಮುಖಂಡರು, ಅಧಿಕಾರಿಗಳನ್ನು ಅತಿಥಿಗಳಾಗಿ ಕರೆಯಿಸಲು ಮತ್ತು ಸ್ಥಳೀಯ ಎಂ.ಎಲ್.ಎ (ಬಿ.ಜೆ.ಪಿ) ಅಧ್ಯಕ್ಷತೆ ವಹಿಸಿಕೊಳ್ಳಲು ಕೇಳುವುದು ಎಂದು ತೀರ್ಮಾನಿಸಿದರು. ಮುಖ್ಯ ಅತಿಥಿಗಳಲ್ಲಿ ಒಬ್ಬರಾಗಿ ಎಸ್.ಎಫ್.ಐ. ಉ.ಸಿ. ಜಿಲ್ಲಾ ಸಮಿತಿ ಅಧ್ಯಕ್ಷೆ ಯಮುನಾ ಗಾಂವ್ಕಾರ್‌ರ ಕೂಡ ತಯಾರಿಯಾಯಿತು, ಹಂಚಿಕೆಯಾಯಿತು. ಅಂದಿನಿಂದಲೇ ಚಡ್ಡಿ ಸಂಘಟನೆ ಹಾಗೂ ಬಿಜೆಪಿಯವರು ಸಂಘಟಕರೊಡನೆ ಜಗಳವಾಡಲು, ಬೆದರಿಸಲು ಪ್ರಾರಂಭಿಸಿದರು. ಅವರ ಧಮಕಿ ಯೇನೆಂದರೆ, ಯಮುನಾ ಗಾಂವ್ಕಾರ್‌ಳನ್ನು ಕರೆಸಿದರೆ ಪರಿಸ್ಥಿತಿ ನೆಟ್ಟಗಿರಲ್ಲ; ನಮ್ಮ ಭಾಗಕ್ಕೆ ಆ ಸಂಘಟನೆ ಯವರನ್ನು ಪ್ರವೇಶಿಸಲು ಬಿಡುವುದಿಲ್ಲ. ನೋಡ್ತಿರಾ? ಅವಳು ಬಂದಾಗ ಸಾವಿರರಾರು ಜನ ಆರ್.ಎಸ್.ಎಸ್., ಎಬಿವಿಪಿ ಕಾರ್ಯಕರ್ತರನ್ನು ಕರೆಸಿ ಪ್ರತಿಭಟಿಸಿ ಅವಳನ್ನು ಓಡಿಸುತ್ತೇವೆ. ಅವಳದ್ದೇನು ಮಹಾಸಾಧನೆ? ಹೆಣ್ಣು ಮಕ್ಕಳು ಸಮಾಜದಲ್ಲಿ ಹೇಗಿರಬೇಕೋ ಹಾಗೇ ಇರಬೇಕು ಹುಷಾರ್! ಅಂದರು. ಯುವಜನ ಮೇಳ ಸಂಘಟಕರಿಗೆ ಈ ಕೀಳು ಮನೋಭಿಪ್ರಾಯ ಕಂಡು ಚಿಂತೆ ಒಂದೆಡೆಯಾದರೆ ಇನ್ನೊಂದೆಡೆ ಮುಜುಗರ. ಯಾಕೆಂದರೆ ಸಾಂಸ್ಕೃತಿಕವಾಗಿ ಅತ್ಯಂತ ಮುಂದುವರಿದ ಹಳ್ಳಿ ಈ ವಜ್ರಳ್ಳಿ. ಆಕಸ್ಮಾತ್ ಅವಘಡ ಸಂಭವಿಸಿದರೆ..... ಎಂದು. ನಂತರದಲ್ಲಿ ಮತ್ತೊಂದು ಆಮಂತ್ರಣ ಪತ್ರಿಕೆ ತಯಾರಾಯ್ತು. ಅದರಲ್ಲಿ ಯಮುನಾ ಗಾಂವ್ಕಾರ್ ಬಿಎ, ಎಲ್.ಎಲ್.ಬಿ ನ್ಯಾಯವಾದಿಗಳು ಕಾರವಾರ ಎಂದಿತ್ತು. ಮೊದಲಿನಂತೆ ಎಲ್ಲೆಡೆ ಹಂಚಿದರು. ಅಂತೂ ಇವರನ್ನೆ ಕರೆಯಿಸುವುದನ್ನು ಬಿಡಿಸಲಾಗಲಿಲ್ಲವಲ್ಲ ಎಂದು ಸಂಘ ಪರಿವಾರದವರು ಮೈಪರಚಿಕೊಂಡರು.

ಈಗ ಸಂಘ ಪರಿವಾರದವರು ಕಪ್ಪು ಬಾವುಟ

[illegible]

ಕೆಡುತ್ತದೆಂದು ಕೆಲವರು ಈ ಆಕೃತ್ಯ ತಡೆಯಲು ಕಾರ್ಯಯೋಜಿಸಿದರು. ಅಂತೂ ಯುವಜನ ಮೇಳ ಪ್ರಾರಂಭದ ದಿನಬಂತು. ಸಾಯಂಕಾಲ 4 ಗಂಟೆಗೆ ಪ್ರಾರಂಭವಾಗುವುದಿದ್ದರಿಂದ ತಾಲೂಕು ಕೇಂದ್ರ ಯಲ್ಲಾಪುರದಿಂದ ಮಧ್ಯಾಹ್ನ 2-30ಕ್ಕೆ ಹೊರಡಬೇಕಿತ್ತು. ಬಸ್ ತಪ್ಪಿಸಿಕೊಂಡ ಯಮುನಾ ಬೇರೆಯವರ ಎಂ. 80 ಗಾಡಿಯಲ್ಲಿ ಕಾರ್ಯಕ್ರಮದ ಸ್ಥಳದಲ್ಲಿ ನೇರವಾಗಿ ಇಳಿದರು. ಸಂಘಟಕರಿಗೆಲ್ಲ ಆಶ್ಚರ್ಯವಾಗಿ ಇವರನ್ನು ವಿಚಾರಿಸಿಕೊಂಡರು. 'ನಿಮಗೆ ಏನೂ ಅನಾಹುತ ವಾಗಿಲ್ಲವೇ? ತೊಂದರೆ ಆಗಿಲ್ಲವೇ? ದಾರಿಯಲ್ಲಿ ಅಥವಾ ಇಲ್ಲಿ ಸುತ್ತಮುತ್ತ ಯಾರಾದರೂ ಸತಾಯಿಸಿದರೇ? ಎಂದೆಲ್ಲ ಕೇಳಿದರು. ಯಾಕೆ ಎಂದು ಕೇಳಿದರೆ 'ಈ ವಜ್ರಳ್ಳಿ ಹೈಸ್ಕೂಲಿನಲ್ಲಿ ಕಲಿತ ವಿದ್ಯಾರ್ಥಿನಿಯರಲ್ಲಿ ಮೊದಲು ಕಾನೂನು ಪದವಿ ಮುಗಿಸಿದ್ದರಿಂದ ಹಾಗೂ ರಚನಾತ್ಮಕ ಕೆಲಸದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಲು ಸಂಘಟಿಸುತ್ತಿದ್ದರಿಂದ ನಿಮ್ಮನ್ನು ಯುವಜನ ಮೇಳಕ್ಕೆ ಕರೆಯಿಸಲು ತೀರ್ಮಾನಿಸಿದೆವು. ಆದರೆ ಬಿಜೆಪಿ, ಆರ್.ಎಸ್.ಎಸ್.ನವರೆಲ್ಲ ದಿನಂಪ್ರತಿ ತೊಂದರೆ ಕೊಟ್ಟು ನಿಮ್ಮನ್ನು ಕರೆಸಬಾರದಾಗಿ ಆಗ್ರಹಿಸಿದರು. ಇಷ್ಟೆಲ್ಲ ವಿರೋಧ ಏಕೆ ಎಂಬುದೇ ನಮಗೆ ಅರ್ಥವಾಗುತ್ತಿಲ್ಲ. 'ಅವಳು ಭಯೋತ್ಪಾದಕಿಯೇ? ಅಥವಾ ಯಾರಿಗೆ ದ್ರೋಹ, ಅನ್ಯಾಯ ವಂಚನೆ ಮಾಡಿದವಳೇ? ಎಂದು ಮರುಪ್ರಶ್ನೆ ಹಾಕಿದ್ದೇವೆ. ನಮ್ಮಲ್ಲಿಗೆ ಯಾರನ್ನು ಕರೆಸಬೇಕೆಂದು ಈ ಸಂಘ ಪರಿವಾರದವರನ್ನು ಕೇಳಬೇಕಾದ್ದಿಲ್ಲ. ಒಂದು

ವೇಳೆ ಅವರು ಕಪ್ಪು ಬಾವುಟ ಪ್ರದರ್ಶನ ಮಾಡಿದ್ದೇ ಆದಲ್ಲಿ ನೀವು ಬೇಜಾರಾಗಬೇಡಿ ಅಥವಾ ಹೆದರಬೇಡಿ ನಿಮ್ಮ ಕೃತಿಯ ಮೂಲಕ ಉತ್ತರ ಕೊಡುವಂತಾಗಲಿ' ಎಂದರು ಒಬ್ಬರು. ಅಂದಿನ ಸಭಾಧ್ಯಕ್ಷರಾಗಿ ಬಿ.ಜೆ.ಪಿ. ಎಂ.ಎಲ್.ಎ ಬರವಿದ್ದರಿಂದ ಸಂಘ ಪರಿವಾರದವರು ಮತ್ತೊಂದು ತೀರ್ಮಾನ ಮಾಡಿದರು. ಕಪ್ಪು ಬಾವುಟ ಹಾರಿಸಿದರೆ ಅವಳು ಪ್ರಸಿದ್ಧಳಾಗುತ್ತಾಳೆ ಆದರೆ ಹಾರಿಸಲು ಸಾಧ್ಯವಾದ್ರೆ ಹಾರಿಸುವುದು. ಇಲ್ಲದಿದ್ದಲ್ಲಿ ಮಾನಸಿಕ ಅಥವಾ ದೈಹಿಕ ಕಿರುಕುಳ ನೀಡುವುದು' ಎಂದು. ಕೆಲವು ಯುವಕರು ಸಂಶಯದಿಂದ ತಿರುಗಾಡುತ್ತಿದ್ದರು, ಕೊಮೆಂಟ್ ಮಾಡುತ್ತಿರುವುದು ಕಂಡುಬಂತು. ಸಾವಿರಾರು ಜನ ಸೇರಿದ್ದರು. 5 ಜನ ಪೋಲೀಸರಿದ್ದರು. ಸಭಾಕಾರ್‍ಯಕ್ರಮದಲ್ಲಿ ಪ್ರಸ್ತಾವಿಕ ಮಾತನಾಡಿದ ತಾಲೂಕಾ ಪತ್ರಕರ್ತರ ಸಂಘದ ಅಧ್ಯಕ್ಷ ಡಿ.ಜಿ. ಭಟ್‌ರು ಎಲ್ಲಿಯವರೆಗೆ ನಮ್ಮ ತಲೆಯಲ್ಲಿ ಕೊಳಕು ಬುದ್ಧಿ ಮಾಸುವುದಿಲ್ಲವೋ, ತಾವೊಂದೇ ಶ್ರೇಷ್ಠರೆಂಬ ಅಹಮಿಕೆ ದೂರಾಗುವುದಿಲ್ಲವೋ, ಅಲ್ಲಿಯವರೆಗೆ '2 ಆಮಂತ್ರಣ ಪತ್ರಿಕೆ' ಗಳ ಗೊಂದಲ ಗಳು, ನಿಜವಾದ ಯುವಪ್ರತಿಭೆ ಗುರುತಿಸುವಲ್ಲಿ ಗೊಂದಲಗಳಿರುತ್ತವೆ. ಯುವಕರಲ್ಲಿ ಒಬ್ಬರ ಒಳ್ಳೆಯ ಕೆಲಸವನ್ನು ಗುರುತಿಸುವ, ಸರಿಯಾದ್ದನ್ನು ಒಪ್ಪಿಕೊಳ್ಳುವ ಆರೋಗ್ಯಕರ ವಾತಾವರಣ ಮೂಡಬೇಕಾಗಿದೆ' ಎಂದೆಲ್ಲ ಹೇಳಿದಾಗ ಆರ್.ಎಸ್.ಎಸ್‌ನವರಿಗೆ ಬಿಸಿತಟ್ಟಿತು. ಕಾರ್‍ಯಕ್ರಮದ ಮಧ್ಯೆ ಕಪ್ಪು ಬಾವುಟ ಪ್ರದರ್ಶನಕ್ಕೆ ವಿಫಲರಾಗಿ ಇವರು ಇಂಗು ತಿಂದ ಮಂಗನಂತಾಗಿದ್ದರು. ನಂತರ ಮತ್ತೊಂದು ಬೆದರಿಕೆ ಏನೆಂದರೆ ಜಿಲ್ಲೆಯಲ್ಲಿ ಅವಳು ಚಟುವಟಿಕೆ ಮಾಡದಂತೆ ತಡೆಯುತ್ತೇವೆ' ಎಂದು ಅಂದಿನ ಸಭೆಯಲ್ಲಿ ಮುಖ್ಯವಾಗಿ ಲೋಕಶಕ್ತಿ, ಬಿಜೆಪಿಯವರೇ ಇದ್ದರು.

- ವರದಿಗಾರ



ಭ್ರಷ್ಟರಾಜಕಾರಣಕ್ಕೊಂದು ಸವಾಲ್

'ಮುದಲ್‌ವನ್'

ರಾಜಕೀಯ ಎಂದರೆ ತಾತ್ಸಾರ, ರಾಜಕಾರಣಿಗಳ ಮೇಲೆ ಆಕ್ರೋಶ. ಯಾರೇ ಆಡಳಿತಕ್ಕೆ ಬಂದರೂ ಎಲ್ಲರೂ ಭ್ರಷ್ಟರೇ, ಎಲ್ಲವೂ ಮೋಸ ವಂಚನೆ ಎಂಬ ಜನರ ಹತಾಶೆ ಭಾವನೆಯನ್ನು ನಿರ್ದೇಶಕ ಶಂಕರ್ ತುಂಬಾ ಸಮರ್ಪಕವಾಗಿ ನಿರೂಪಿಸಿದ್ದಾರೆ. ಮಧ್ಯಮ ವರ್ಗದ ಜನರ ಹತಾಶೆ ಹಾಗೂ ಆಕ್ರೋಶಕ್ಕೆ ತಾತ್ಕಾಲಿಕ ಶಮನ ನೀಡುವ ಚಿತ್ರವಾಗಿ 'ಮುದಲ್‌ವನ್' ತಮಿಳುಚಿತ್ರ ಮೂಡಿಬಂದಿದೆ. ಇದು ತೆಲುಗಿನಲ್ಲೂ 'ಒಕೇಒಕಡು' ಹೆಸರಿನಿಂದಲೂ ಪ್ರದರ್ಶನವಾಗುತ್ತಿದೆ.

ಪ್ರತಿನಿತ್ಯ ಜನರು ಅನುಭವಿಸುವ ಪಡಿತರ ಅಂಗಡಿಗಳಲ್ಲಿನ ಮೋಸ, ಮನೆ, ನಿವೇಶನ ವಿತರಣೆಯಲ್ಲಿ ಹೌಸಿಂಗ್ ಬೋರ್ಡುಗಳಲ್ಲಿ ನಡೆಯುವ ಭ್ರಷ್ಟಾಚಾರ ಕಾಲೇಜು ವಿದ್ಯಾರ್ಥಿನಿಯರ ಮೇಲೆ ಬೀದಿ ಕಾಮಣ್ಣರ ಕೀಟಲೆ, ರೌಡಿಗಳ ದರ್ಬಾರು, ಪೋಲೀಸರ 'ನಿಷ್ಕ್ರಿಯತೆ, ಸರ್ಕಾರಿ ವೈದ್ಯರುಗಳ ಬೇಜವಾಬ್ದಾರಿ ವರ್ತನೆ ಇತ್ಯಾದಿಗಳ ವಿರುದ್ಧ 'ಒಂದು ದಿನದ ಮುಖ್ಯಮಂತ್ರಿ' ಮಧ್ಯ ಪ್ರವೇಶಿಸಿ ಹಠಾತ್ ಕ್ರಮ ಕೈಗೊಳ್ಳುವುದು, ಕುತ್ತಿಗೆಗೆ ನೇತು ಹಾಕಿಕೊಂಡಿರುವ ಟೈಪಿಂಗ್ ಮೆಷಿನ್ ನಿಂದ ಸ್ಥಳದಲ್ಲೇ ನಿಷ್ಕ್ರಿಯ ಹಾಗೂ ಭ್ರಷ್ಟ ಅಧಿಕಾರಿಗಳನ್ನು ಅಮಾನತ್ತುಗೊಳಿಸುವುದು ಮುಂತಾದ ದೃಶ್ಯಗಳು ಜನರ ಕೋಪ ಹಾಗೂ ಅತೃಪ್ತಿಗೆ ಸಮಾಧಾನ ನೀಡುವ ಮೂಲಕ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸುತ್ತಿದೆ.

ಮುಖ್ಯಮಂತ್ರಿ ಟಿ.ವಿ.ಯೊಂದಕ್ಕೆ ನೇರ ಸಂದರ್ಶನ ನೀಡುವಾಗ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಸಂದರ್ಶಕರು ಕೇಳುವ ಭ್ರಷ್ಟಾಚಾರ, ರಾಜಕಾರಣಿಗಳ ಅಕ್ರಮ ಗಳಿಕೆ ಸ್ವತಃ ಮುಖ್ಯಮಂತ್ರಿಗಳ ಆದಾಯ ಮೀರಿ ಆಸ್ತಿ, ಸಮಾಜದಲ್ಲಿ ಅಶಾಂತಿ ಸಾರ್ವಜನಿಕ ಸಮಸ್ಯೆಗಳು, ಸರ್ಕಾರಿ ಯಂತ್ರದ ನಿಷ್ಕ್ರಿಯತೆ ಮುಂತಾದ ಸಮಸ್ಯೆಗಳನ್ನು ಸಾಕ್ಷ್ಯಾಧಾರಗಳ ಮೂಲಕ ಕೇಳುವ ನೇರ ಪ್ರಶ್ನೆಗಳಿಗೆ ಉತ್ತರಿಸಲಾರದ ಮುಖ್ಯಮಂತ್ರಿ, ಮುಖ್ಯಮಂತ್ರಿ ಪಟ್ಟ 'ಮುಳ್ಳಿನ ಕಿರೀಟ' ಇದನ್ನು ನಿಭಾಯಿಸುವಾಗ ಎದುರಾಗುವ ನೂರಾರು ಅಡೆತಡೆಗಳು. ಆತಂಕ ಗೊಂದಲ, ಉದ್ರೇಕ ಮುಂತಾದವುಗಳನ್ನು ವಿವರಿಸಿ, ಒಂದು ದಿನ ಮುಖ್ಯಮಂತ್ರಿಯಾಗಿ ನಿಭಾಯಿಸು, ಈ ಕುರ್ಚಿಯ ಉದ್ವೇಗ ತಿಳಿಯುತ್ತದೆ ಎಂದುಸವಾಲು ಎಸೆಯುತ್ತಾರೆ. ಆಗ ಟಿ.ವಿ. ಸಂದರ್ಶಕ(ಅರ್ಜುನ್) ಯೋಚಿಸಿ, ಆ ಸವಾಲನ್ನು ಸ್ವೀಕರಿಸಿ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿ ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸುವುದೇ ಚಿತ್ರದ ತಿರುಳು.

ಮತ್ತೊಂದು ದೃಶ್ಯದಲ್ಲಿ ಮುಖ್ಯಮಂತ್ರಿ (ರಘುವರನ್) ಬಸ್ ಸಂಚಾಲನೆ ಸ್ಥಗಿತವಾಗಿ ಗಲಭೆ ಎದ್ದು ಪೋಲೀಸ್ ಲಾಠಿಛಾರ್ಜ್‌ಗೆ ಅನುಮತಿ ಕೇಳಿದಾಗ ಅದನ್ನು ನಿರಾಕರಿಸಿ 'ನಾನು ನನ್ನ ಸ್ವಂತ ಕಾಲ ಮೇಲೆ ಮುಖ್ಯಮಂತ್ರಿಯಾಗಿ ಕುಳಿತಿಲ್ಲ. ನಾನು ಕುಳಿತಿರುವ ಕುರ್ಚಿಯ ಒಂದು ಕಾಲು ಜಾತಿ ಬೆಂಬಲ, ಮತ್ತೊಂದು ನನ್ನ ಪಕ್ಷಕ್ಕೆ ಹಣ ನೀಡುವ ಬಂಡವಾಳಿಗರು, ಇನ್ನೊಂದು ಮೈತ್ರಿ ಕೂಟದ ಇತರ ಪಕ್ಷಗಳ ಬೆಂಬಲ, ಕೊನೆಯದು ನನ್ನ ಪಕ್ಷದ ಕಾರ್ಯಕರ್ತರು ಇದರಲ್ಲಿ ಯಾವ ಕಾಲು ಬಿದ್ದರೂ ಕುರ್ಚಿ ಬಿದ್ದು ಹೋಗುತ್ತದೆ, ನೀನು ಸುಮ್ಮನಿರು ಗಲಾಟೆ ಮಾಡುವವರು ಸ್ವಲ್ಪ ಹೊತ್ತು ಬಿಟ್ಟುತಾವೇ ಶಾಂತವಾಗುತ್ತಾರೆ" ಎಂದು ಹೇಳುವುದು ಪ್ರಸ್ತುತ ಬಂಡವಾಳಶಾಹಿ ರಾಜಕೀಯವನ್ನು ಪ್ರತಿಬಿಂಬಿಸುತ್ತದೆ.

ಬಸ್ಸಿನ ಮುಂದೆ ಕಂಡಕ್ಟರ್ ಮಲಗಿಕೊಂಡು 'ಬಸ್ ನನ್ನ ಮೇಲೆ ಹರಿದರೆ ನನ್ನ ಜಾತಿಯವರು ಸುಮ್ಮನೆ ಬಿಡುತ್ತಾರಾ? ರಾಜ್ಯವೇ ಹತ್ತಿ ಉರಿಯುತ್ತದೆ ಹುಷಾರ್' ಎಂದು ಕೂಗುವುದು ಕಾರ್ಮಿಕ ಸಂಘಗಳಲ್ಲಿ ಇಂದು ಜಾತಿ ನುಸುಳಿರುವ ಸಂಕೇತ ವ್ಯಕ್ತಗೊಳ್ಳುತ್ತದೆ.

ಟಿ.ವಿ.ಸಂದರ್ಶನದಲ್ಲಿ ಶೇ 65 ಅಕ್ಷರಸ್ಥರನ್ನಾಗಿ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಹೇಳಿದಾಗ ಕೇರಳ ಶೇ 100 ರಷ್ಟು ಸಾಧಿಸಿದೆ ಎಂದು ಸಂದರ್ಶಕ ಹೇಳುವುದು, ಒಂದು ದಿನದ ಮುಖ್ಯಮಂತ್ರಿಯಾಗಿ ಆಟೋದಲ್ಲಿ ಬಂದಾಗ ಪತ್ರಕರ್ತರು ನೀವು ಆಟೋದಲ್ಲಿ ಬರುವುದೇ? ಎಂದಾಗ ಬಂಗಾಳದ ಮಂತ್ರಿಗಳು ಬಸ್ಸಿನಲ್ಲಿ ಓಡಾಡುವುದಿಲ್ಲವೇ ಎಂದು ಪ್ರಶ್ನಿಸುವ ಮೂಲಕ ರಾಜಕೀಯದಲ್ಲೂ ಅನುಕರಣೀಯ ಆದರ್ಶಗಳಿವೆ ಎಂಬುದು ವ್ಯಕ್ತವಾಗುತ್ತದೆ.

'ರಾಜಕೀಯ ಕೊಚ್ಚೆ, ಮೋರಿ. ಇದರಲ್ಲಿ ನಾನು ಬೀಳಲ್ಲ, ನನಗೆ ಬೇಕಾಗಿರುವುದು ಸುಂದರವಾದ ಹೆಂಡತಿ, ಬೆಳಿಗ್ಗೆ ಒಳ್ಳೆ ತಿಂಡಿ, ಖರ್ಚಿಗೆ ಬೇಕಾದಷ್ಟು ಹಣ, ಆದಾಯ ತರುವ ಒಂದು ಕೆಲಸ, ಸಂಜೆ ವಿರಾಮ, ಬದುಕಿನ ಕೊನೆಯ ಕಾಲದಲ್ಲಿ ನೆಮ್ಮದಿಯಿಂದಿರಲು ಊರಿನಾಚೆ ಒಂದು ಸ್ವಂತಮನೆ, ನಿವೃತ್ತಿಯಾದ ಮೇಲೆ 'ದಿ ಹಿಂದು', 'ಇಂಡಿಯನ್ ಎಕ್ಸ್‌ಪ್ರಸ್' ಓದಿಕೊಂಡು 'ವ್ಯಾಕ್ಸನ್' ಮಾಡಿ ಯಾರೂ ಸರಿಯಿಲ್ಲ ಎಂದು ಹೇಳಿಕೊಂಡು ಸಾಯುವುದು ಎಂಬ ಬದುಕನ್ನು ಎಲ್ಲರೂ ಬಯಸುವುದರಿಂದಲೇ ರಾಜಕೀಯ ಜನಪರವಾಗಿಲ್ಲ, ಅದು ಕೊಚ್ಚೆ ಮೋರಿಯಾಗಿ ಉಳಿದಿದೆ...... ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಿ, ದೂರ ಸರಿಯ ಬೇಡಿ ಎಂದು ಅರ್ಥೈಸುವ ಸಂಭಾಷಣೆ ತೀರ ಸರಳವಾಗಿ ಆಕರ್ಷಕವಾಗಿ ಹೇಳಿರುವುದು ಜನರ ಗಮನ ಸೆಳೆಯುತ್ತದೆ.

"ಮುಖ್ಯಮಂತ್ರಿ ಪದವಿಯಲ್ಲಿದ್ದು ಅನುಭವಿಸಿದರೆ ಮಾತ್ರ ಅದು ಮುಳ್ಳಿನ ಹಾಸಿಗೆ, ಕಬ್ಬಿಣದ ಕಿರೀಟ ಎಂದು ತಿಳಿಯುತ್ತದೆ" ಎಂದು ಹೇಳುವುದು ತನ್ನ ಸ್ವಂತ ಲಾಭಕ್ಕಾಗಿ ಪ್ರಸ್ತುತ ಸನ್ನಿವೇಶದೊಂದಿಗೆ ರಾಜಿ ಮಾಡಿಕೊಳ್ಳದೆ ಬೇರೆ ಮಾರ್ಗವಿಲ್ಲ ಎಂಬ ಅಭಿಪ್ರಾಯ ಬೆನ್ನು ಮೂಳೆ ಸವೆದಿರುವ ನೀಚರ ಮಾತು ಎಂದು ನಿರೂಪಿಸುವಲ್ಲಿ ಈ ಚಿತ್ರ ಪ್ರಯತ್ನಿಸುತ್ತದೆ. ಏನಾದರೂ ಮಾಡಿ ತನ್ನ ಪದವಿಯನ್ನು ಉಳಿಸಿಕೊಳ್ಳಲು ಖರ್ಚು ಮಾಡುವ ನಿಮ್ಮಬುದ್ಧಿವಂತಿಕೆಯನ್ನು ದೇಶದ ಏಳಿಗೆಗೆ ಏನು ಮಾಡುವುದು ಎಂದು ಚಿಂತೆ ಮಾಡುವುದರಲ್ಲಿ ಕಳೆದರೆ ಯಾವ ರೀತಿ ಇರುತ್ತದೆ ಎಂಬುದನ್ನು ಜನರಿಗೆ ತೋರಿಸಲು ಈ ಒಂದು ದಿನ ನಾನು ಮುಖ್ಯಮಂತ್ರಿಯಾಗಿ ಇಷ್ಟು ಪ್ರಯತ್ನಿಸಿದ್ದೇನೆ ಎಂದು ನಾಯಕ ಹೇಳುವುದು, ಇಂದಿನ ಭ್ರಷ್ಟ, ಸ್ವಜನಪಕ್ಷಪಾತ ರಾಜಕಾರಣಿಗಳಿಗೆ ಒಂದು ಎಚ್ಚರಿಕೆ ಕರೆ ಗಂಟೆಯಂತಿದೆ.


ಇಷ್ಟರ ನಡುವೆಯು ಚಿತ್ರನಿರ್ದೇಶಕರು ಕಮರ್ಷಿಯಲ್ ತಂತ್ರಗಳನ್ನು ಬಳಸಿಕೊಂಡಿದ್ದಾರೆ. ಮುಖ್ಯಮಂತ್ರಿಯೇ ಗೂಂಡಾಗಳ ಜೊತೆ ಬೀದಿಯಲ್ಲಿ ಹೊಡೆದಾಡುವುದು, ಮುಖ್ಯಮಂತ್ರಿಯೊಬ್ಬರು ಒಂದು ದಿನಕ್ಕಾಗಿ ಪದವಿ ಬಿಟ್ಟುಕೊಡುವರೆ? ನಾಯಕನಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದರು ಸಣ್ಣ ಪುಟ್ಟ ಗಾಯಗಳೊಂದಿಗೆ ಎಂದಿನಂತೆ ಇರುವುದು ಇತ್ಯಾದಿಗಳನ್ನು ಪ್ರೇಕ್ಷಕರು ಪ್ರಶ್ನೆ ಮಾಡದೆ ಹೋದರೆ ಚಿತ್ರ ಚೆನ್ನಾಗಿದೆ.

ಒಂದು ದಿನ ಮುಖ್ಯಮಂತ್ರಿಯಾಗಿ 'ಅರ್ಜುನ್ ಸರ್ಜಾ'ಅಭಿನಯ ಯಾವುದೇ ಉದ್ವೇಗ, ಆವೇಶಗಳಿಲ್ಲದೆ ಉತ್ತಮವಾಗಿದೆ. ಮುಖ್ಯಮಂತ್ರಿಯಾಗಿ ರಘುವರನ್ ಪಾತ್ರಕ್ಕೆ ಕಳೆ ತಂದಿದ್ದಾರೆ. ಚಿತ್ರದ ನಾಯಕಿ ಪಾತ್ರ ಹೆಸರಿಗಷ್ಟೇ ಅಷ್ಟರಲ್ಲೇ ಮೊನಿಷಾ ಕೊಯಿರಾಲ ಚುರುಕಾದ ಅಭಿನಯ ನೀಡಿದ್ದಾರೆ. ಕೋಟ್ಯಾಂತರ ರೂ ವೆಚ್ಚದಲ್ಲಿ ಕಂಪ್ಯೂಟರ್ ಗ್ರಾಫಿಕ್ಸ್ ಅಳವಡಿಕೆಗಳಿಂದ ಚಿತ್ರ ಜನಮನ ಸೆಳೆಯಲು ಸಾಧ್ಯವಿಲ್ಲ, ಯಾವುದಾದರೂ ಒಂದು ಸಂದೇಶ ನೀಡುವಂತಿದ್ದರೆ ಮಾತ್ರ ಚಿತ್ರ ಯಶಸ್ವಿಯಾಗುತ್ತದೆ ಎಂಬುದಕ್ಕೆ 'ಮುದಲ್‌ವನ್' ಒಂದು ಉದಾಹರಣೆ.

ಚಿತ್ರದ ಕೊನೆಯ ದೃಶ್ಯವು ಒಂದು ಬಲವಾದ ಸಂದೇಶವನ್ನು ನೀಡುತ್ತದೆ. ಹಿಂಸೆ ಆಧಾರದಲ್ಲಿರುವ ವ್ಯವಸ್ಥೆಯನ್ನು ಅಹಿಂಸೆ ಮೂಲಕ ತೆಗೆದುಹಾಕಲು ಸಾಧ್ಯವಿಲ್ಲ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬುದು

- ಮೀನಾಕ್ಷಿ ಸುಂದರಂ.

ಜಾನಪದ ಶ್ರೀ ಸುಕ್ರಿಗೌಡ



ಹಾಲಕ್ಕಿ ಒಕ್ಕಲ ಮಹಿಳೆಯರು ಸದಾ ದುಡಿಮೆಗಾರರು, ಮುಂಜಾವಿನಿಂದ ಮಧ್ಯಾಹ್ನದ ಸೂರ್ಯ ಪಶ್ಚಿಮಕ್ಕೆ ತಿರುಗುವವರೆಗೂ ಒಡೆಯನ ಗದ್ದೆಯಲ್ಲಿ ದುಡಿತ, ಬಳಿಕ ಮಕ್ಕಳಿಗಾಗಿ ಗಂಜಿ, ಅಂಬಲಿ, ಬೇಯಿಸುವುದು, ಸಂಜೆ ಒಣಕಟ್ಟಿಗೆ ಹೊತ್ತು ಮಾರಾಟಕ್ಕಾಗಿ, ಸಾಲಾಗಿ ಪೇಟೆಯ ಕಡೆ ಪಯಣ, ಬರುವಾಗ ಮೆಣಸು, ಕೊತ್ತಂಬರಿ, ಅಕ್ಕಿಮೀನ ಇತ್ಯಾದಿ ಅಡುಗೆಯ ಪರಿಕರಗಳನ್ನು ಕೊಂಡುಕೊಂಡು ಹಿಂತಿರುಗುವುದು ಇದು ಇಲ್ಲಿಯ ಮಹಿಳೆಯ ನಿತ್ಯದ ದಿನಚರಿ.

ಪಂಪ ಪ್ರಶಸ್ತಿಗೆ ಸರಿಸಮವಾದ "ಜಾನಪದಶ್ರೀ" ಪ್ರಶಸ್ತಿಯನ್ನು ಈ ವರ್ಷ ಪಡೆದ ಸುಕ್ರಿ ಬೊಮ್ಮಗೌಡ ಇಂತಹ ಶ್ರಮಜೀವಿ ಮಹಿಳೆಯರಲ್ಲೊಬ್ಬರು.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಶಿರಕುಳಿಯಲ್ಲಿ ಜನ್ಮವೆತ್ತಿದ ಸುಕ್ರಿ ಇದೇ ತಾಲೂಕಿನ ಬಡಗೇರಿಯ ಬೊಮ್ಮ ಗೌಡರನ್ನು ಮದುವೆಯಾಗಿ ಗಂಡನಮನೆಗೆ ಬಂದಾಗ ಅವರಿಗೆ ಕೇವಲ ಹನ್ನೆರಡು ವರ್ಷ. ಬಹುಬೇಗ ವೈಧವ್ಯ ಬಂತು. ಮಕ್ಕಳಿರಲಿಲ್ಲ. ಸುಕ್ರಿಗೆ ದುಡಿತದ ಜೊತೆ ಜನಪದ ಸಾಹಿತ್ಯ ಸಂಗಾತಿಯಾಯಿತು. ತನ್ನ ಜೊತೆಗಾರ್ತಿಯರ ಜೊತೆ ಕಳೆಗದ್ದೆ, ನೆಟ್ಟಿಗದ್ದೆ, ಮದುವೆ ಮನೆ, ಹಬ್ಬ ಹರಿದಿನಗಳಲ್ಲೆಲ್ಲ ಪಾಡು ಹಾಡಾಯಿತು. ಹಾಡು ಸರ್ವಸ್ವವಾಯಿತು.

ಭೂಮಿಗೆ ಮಳೆರಾಯನ ಆಗಮನವಿಲ್ಲದೆ, ಜನಕೋಟಿ ಒದ್ದಾಡುತ್ತಿರುವಾಗ ಭೂಮಿ ಒಣಗಿ ನೀರಿಗಾಗಿ ತಲ್ಲಣಿಸುತ್ತಿರುವಾಗ ತನ್ನ ಜೊತೆಗಾರ್ತಿ ಗೌಡತಿಯರ ಜೊತೆ ಇವರು ತಾರ್ತಿ ಕುಣಿದ ವೈಶಾಖಗಳು ಅವರ ವಯಸ್ಸಿನ ಜೊತೆ ಕಾಲದಲ್ಲಿ ಮರೆಯಾದವು. ಗುಡಸರು ಮಕ್ಕಳು ನಿದ್ದೆಯಲ್ಲಿದ್ದಾಗ ಕೆಲಸ ಬೇಗನೆ ಮುಗಿಸಿ ಕೇರಿಯ ಮಹಿಳೆಯರೆಲ್ಲ ಒಟ್ಟಾಗಿ ಬಿತ್ತಲು ಸಿದ್ಧವಾಗಿರುವ ಗದ್ದೆಯಲ್ಲಿ ಮಳೆರಾಯನನ್ನು ಕರೆಯುತ್ತ ನರ್ತನ ಸೇವೆಗೈಯುವದು ಇಲ್ಲಿಯ ಬುಡಕಟ್ಟು ಮಹಿಳೆಯರು ನಡೆಸಿಕೊಂಡು ಬಂದ ಸಂಪ್ರದಾಯ. ಇಲ್ಲಿ ಮಹಿಳೆಯರು ಮಾತ್ರ ನೆರೆದಿರುತ್ತಾರೆ. ಆದರೆ ಸುಕ್ರಿಯ ಪ್ರಯತ್ನದಿಂದಾಗಿ ಸಂಕೋಚ ಸ್ವಭಾವದ ಈ ಮಹಿಳೆಯರ ನೃತ್ಯ ರಾಷ್ಟ್ರವಿಖ್ಯಾತ ಕಲಾವಿದರು ಕುಣಿದ ವೇದಿಕೆಯನ್ನೇರಿತು. ಬಡಗೇರಿಯ ತಾರ್ತಿ ಕುಣಿತವನ್ನು ಜಗತ್ತು ದೂರದರ್ಶನದಲ್ಲಿ ವೀಕ್ಷಿಸುವಂತಾಯಿತು.

ಸುಕ್ರಿ ಹಾಡುಗಾರ್ತಿ ಮಾತ್ರವಲ್ಲ ಅವರೊಬ್ಬ 'ಜಾನಪದ ಗಣಿ' ಬುಡಕಟ್ಟು ಜನರ ಆಚಾರ ವಿಚಾರ ಸಂಪ್ರದಾಯ, ಅಡುಗೆ, ಹಾಡು, ಕತೆ, ಒಗಟು ಪ್ರಸಾಧನಕಲೆ ವೈದ್ಯ ಗಿಡಗಂಟಿಗಳ ದೇಸಿ ನಾಮಗಳು ಸೊತ್ತುಸದೆ ಕಟ್ಟಿಗೆಗಳ ಗುಣಾವಗುಣಗಳು ಹೀಗೆ ಜಾನಪದದ ಹಲವಾರು ಬಗೆಗಳ ಮೂಲ ಸಾಮಗ್ರಿ ಇವರ ಬಳಿಯಿದೆ. ಇವರೊಬ್ಬ ಶ್ರೇಷ್ಠ ವಕ್ತೃ. ಮಾಹಿತಿ ನೀಡುವ ಹುಮ್ಮಸ್ಸು ತುಂಬಿಕೊಂಡಿರುವದು ಇವರ ಇನ್ನೊಂದು ವಿಶೇಷಗುಣ. ಈ ಕಲಾವಿದೆಯ ಸಾಮಾಜಿಕ ಕಳಕಳಿಯೂ ಅಷ್ಟೇ ದೊಡ್ಡದು. ಸರಾಯಿ ವಿರೋಧಿ ಆಂದೋಲನ, ಪರಿಸರ ರಕ್ಷಣಾ ಆಂದೋಲನ, ಸಾಕ್ಷರತಾ ಆಂದೋಲನಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡವರು ಇವರು. ಪೇಟೆಯ ಜನಗಳ ಮುಂದೆ ಸಂಕೋಚಗೊಂಡು ಬದಿಗೆ ಸರಿದು ನಿಲ್ಲುವ ತನ್ನ ಜನಗಳನ್ನು ಜನಸಂದಣಿಯ ಎದುರು ತಂದು ನಿಲ್ಲಿಸಿದ ಅನಭಿವ್ಯಕ್ತ ಸಾಮಾಜಿಕ ಕಾರ್ಯಕರ್ತೆ ಇವರು.

ಜಾನಪದ ವಿಶ್ವಕೋಶವೇ ಆಗಿರುವ ಸುಕ್ರಿಗೆ ಸಹಜವಾಗಿ ಹಲವಾರು ಸನ್ಮಾನಗಳು ಲಭಿಸಿವೆ. ಯಲ್ಲಾಪುರ ಉತ್ಸವ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಲನ ಗೋಕರ್ಣ ಜಾನಪದ ಪ್ರಕಾಶನ ಹೊನ್ನಾರ್ತ, ರಾಜ್ಯವಲಯ ಅರಣ್ಯಾಧಿಕಾರಿಗಳ ಸಂಘ ಮತ್ತು ಅಲೋಚನಾವೇದಿಕೆ ಅಂಕೋಲಾ ಅಖಿಲ ಭಾರತ ಜಾನಪದ ಸಮಾವೇಶ ಮೈಸೂರು ಮುಂತಾದವರಿಂದ ಸನ್ಮಾನಗಳು ಸಂದಿವೆ.

ಪ್ರಶಸ್ತಿಯೆಂದರೇನೆಂದು ಅರಿಯದ ಪ್ರಶಸ್ತಿಗಳ ಹೆಸರನ್ನೂ ಕೇಳರಿಯದ ಸುಕ್ರಿಗೌಡರಿಗೆ ಕಳೆದವರ್ಷ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದರೆ ಈ ವರ್ಷ 'ಜಾನಪದಶ್ರೀ' ಪ್ರಶಸ್ತಿ ಬಂದಿದೆ. ಈ ಮುಗ್ಧೆಯನ್ನು ಈ ಪ್ರಶಸ್ತಿಗಳಿಂದ ಗೌರವಿಸಿದ ಸರಕಾರ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಗಳು ಅರ್ಹ ಕಾರ್ಯ ಮಾಡಿವೆ. ಈ ಪ್ರಶಸ್ತಿಗಳ ಮೌಲ್ಯ ಹೆಚ್ಚಿದೆ.

- ಶಾಂತನಾಯಕ್

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State